
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್


ಜುಲೈ 18, 2012 ಪುಟ 20 ರೂ. 14/-

ಎಂಪಿಪಿ 72





ಶೆಟ್ಟರ್ ಟ್ರಬಲ್ ಶೂಟರ್ ಜಾಕ್‌ಪಾಟ್!




ದಾವಣಗೆರೆ ಭೂಗಳ್ಳ ಜಾದವ್

ಚಿಕ್ಕಮಗಳೂರು 'ಮಾನ' ಕಳೆದುಕೊಂಡ ಎಸ್‌ಐ



ಬ್ಬಳ್ಳಿ ಣರಂಗವಾಗಲಿರುವ ಂಜುಮನ್ ಚುನಾವಣೆ



ಹೊನ್ನಾಳಿ ರೇಣುಕನ ತಮ್ಮನೇ ಕ್ರಿಮಿನಲ್‌ಗಳ ರಕ್ಷಕ



ಅಭಿವೃದ್ಧಿಯ ಪುರುಷಾಧಿಪತ್ಯ!


ಭಾರತದ ರಾಷ್ಟ್ರೀಯ ಕ್ರೈಮ್ ರೆಕಾರ್ಡ್ ಬ್ಯೂರೋದ ವಾರ್ಷಿಕ ವರದಿ ಹೊರಬಿದ್ದಿದೆ. ಈ ವರ್ಷವೂ ಭಾರತದಲ್ಲಿ ಅಪರಾಧಗಳ ಸಂಖ್ಯೆ ಹೆಚ್ಚಿದೆ. ಅದರಲ್ಲೂ "ಅಭಿವೃದ್ಧಿಶೀಲ" ಭಾರತದಲ್ಲಿ ಸಮಾಜದ ದುರ್ಬಲರ ಮೇಲೆ ನಡೆಯುತ್ತಿರುವ ಅಪರಾಧಗಳ ಸಂಖ್ಯೆ ಹಿಂದೆಂದಿಗಿಂತಲೂ ಈ ಅವಧಿಯಲ್ಲಿ ಹೆಚ್ಚುತ್ತಿರುವುದನ್ನು ಈ ವರದಿ ಅಂಕಿಅಂಶಗಳ ಸಮೇತ ಸಾಬೀತುಪಡಿಸುತ್ತಿದೆ. ಉದಾಹರಣೆಗೆ ಈ ವರ್ಷ ದೇಶಾದ್ಯಂತ ಮಹಿಳೆಯರ ಮೇಲೆ 2,28,650 ಅಪರಾಧಗಳು ಎಸಗಲ್ಪಟ್ಟಿವೆ. ಹೋದವರ್ಷ ಈ ಸಂಖ್ಯೆ 2,13,585 ಇತ್ತು. ಅಂದರೆ 2011ರಲ್ಲಿ 2010ಕ್ಕಿಂತ ಶೇ.7.1ರಷ್ಟು ಅಂದರೆ 15,000 ಹೆಚ್ಚು ಅಪರಾಧಗಳು ಎಸಗಲ್ಪಟ್ಟಿವೆ. ಅಂದರೆ ಈ ದೇಶದ ಹೆಣ್ಣುಮಕ್ಕಳು ಹೋದ ವರ್ಷಕ್ಕಿಂತ ಈ ವರ್ಷ ದಿನಕ್ಕೆ ನಾಲ್ಕು ಹೆಚ್ಚು ಅತ್ಯಾಚಾರ ಮತ್ತು ಅನ್ಯಾಯಗಳಿಗೆ ಒಳಗಾಗುತ್ತಿದ್ದಾರೆ.

ಈ ಅಪರಾಧಗಳು ಸಹ ಯಾವ ಬಗೆಯವು ಮತ್ತು ಎಲ್ಲಿ ಸಂಭವಿಸುತ್ತಿವೆ ಎಂಬುದನ್ನು ಗಮನಿಸಿದರೆ ನಮ್ಮ ದೇಶದ ಅಭಿವೃದ್ಧಿಯ ಕ್ರೌರ್ಯದ ಸ್ವರೂಪ ಮತ್ತು ಅದರ ಬರ್ಬರತೆ ಅರ್ಥವಾಗುತ್ತದೆ.

ಈವರೆಗೆ ಕಮ್ಯುನಿಸ್ಟರು ಆಳಿದ ಮತ್ತು ಈಗ ಮಹಿಳಾ ಮುಖ್ಯಮಂತ್ರಿ ಆಳುತ್ತಿರುವ ಪಶ್ಚಿಮ ಬಂಗಾಳದಲ್ಲಿ ಈ ವರ್ಷ ದೇಶದಲ್ಲೇ ಅತಿಹೆಚ್ಚು ಹೆಂಗಸರ ಮೇಲಿನ ಅಪರಾಧಗಳು ದಾಖಲಾಗಿವೆ. 2011ರಲ್ಲಿ ದಾಖಲಾದ ಅಪರಾಧಗಳ ಸಂಖ್ಯೆ 29,133. ಅಂದರೆ ದಿನಕ್ಕೆ ನೂರು!! ಅದರ ನಂತರದ ಸ್ಥಾನ ಅತ್ಯಂತ ಮುಂದುವರೆದ ರಾಜ್ಯಗಳಲ್ಲಿ ಒಂದೆಂಬ ಹೆಗ್ಗಳಿಕೆ ಹೊಂದಿರುವ ಆಂಧ್ರ ಪ್ರದೇಶದ್ದು (28,246). ನಂತರದಲ್ಲಿ ಉತ್ತರ ಪ್ರದೇಶ (2,23,639). ಉತ್ತರ ಪ್ರದೇಶದಲ್ಲಿ ಕಳೆದ ಐದು ವರ್ಷಗಳ ಕಾಲ ದಲಿತ ಮಹಿಳೆ ಮಾಯಾವತಿಯೇ ರಾಜ್ಯವಾಳಿದರೂ ಮಹಿಳೆಯರ ಮೇಲಿನ - ಅದರಲ್ಲೂ ದಲಿತ ಮತ್ತು ಬಡ ಮಹಿಳೆಯರ ಮೇಲಿನ - ದೌರ್ಜನ್ಯಗಳ ಸಂಖ್ಯೆಯೇನೂ ಕಡಿಮೆಯಾಗಲಿಲ್ಲ. ನಂತರದ ಸ್ಥಾನದಲ್ಲಿ ರಾಜಸ್ಥಾನ ಮತ್ತು ಪಂಜಾಬ್‌ಗಳಿದ್ದರೂ ಹತ್ತರ ಒಳಗಿನ ಸ್ಥಾನದಲ್ಲಿ ಅತ್ಯಂತ ಮುಂದುವರೆದ ರಾಜ್ಯಗಳಾದ ಕರ್ನಾಟಕ, ಗುಜರಾತ್ ಮತ್ತು ಮಹಾರಾಷ್ಟ್ರಗಳು ಬರುತ್ತವೆ. ಕರ್ನಾಟಕದಲ್ಲಂತೂ ಕಳೆದ ವರ್ಷ 8,807 ಅಪರಾಧಗಳು ಸಂಭವಿಸಿದ್ದರೆ ಈ ವರ್ಷ 9,594 ಅಪರಾಧಗಳು ಸಂಭವಿಸಿವೆ. ಅಂದರೆ 700ಕ್ಕಿಂತ ಹೆಚ್ಚು ಅಪರಾಧಗಳು ಸಂಭವಿಸಿವೆ. ಹೀಗಾಗಿ ದೇಶದಲ್ಲಿ ಹೆಣ್ಣುಮಕ್ಕಳ ವಿರುದ್ಧ ಅಪರಾಧಗಳ ಏರಿಕೆಯ ಪ್ರಮಾಣ 7.1ರಷ್ಟಿದ್ದರೆ ಕರ್ನಾಟಕದಲ್ಲಿ ಅದು ಶೇ.10ರಷ್ಟು ಹೆಚ್ಚಾಗಿದೆ. ಅದೇರೀತಿ ಮುಂದುವರೆದ ರಾಜ್ಯಗಳಾದ ಆಂಧ್ರ ಪ್ರದೇಶ, ಮಹಾರಾಷ್ಟ್ರ, ಗುಜರಾತ್‌ಗಳಲ್ಲೂ ಒಟ್ಟಾರೆ ಹೆಣ್ಣುಮಕ್ಕಳ ಮೇಲಿನ ಅಪರಾಧಗಳ ಏರಿಕೆಯ ಪ್ರಮಾಣ ಶೇ.10ಕ್ಕಿಂತ ಹೆಚ್ಚಿದೆ.

ಹೆಂಗಸರ ಮೇಲಿನ ಅಪರಾಧಗಳು ಯಾವ ಯಾವ ನಗರಗಳಲ್ಲಿ ಸಂಭವಿಸಿವೆ ಎಂಬುದನ್ನು ಗಮನಿಸಿದರೆ ನಮ್ಮ ಅಭಿವೃದ್ಧಿಶೀಲ ಸಮಾಜದ ಅಂತರಂಗ ಇನ್ನಷ್ಟು ಸ್ಪಷ್ಟವಾಗುತ್ತದೆ. 10 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಇರುವ 53 ಬೃಹತ್ ನಗರಗಳನ್ನು ಈ ಅಧ್ಯಯನಕ್ಕಾಗಿ ಆಯ್ದುಕೊಂಡು ಕ್ರೈಮ್ ರೆಕಾರ್ಡ್ ಬ್ಯೂರೋ ಅಂಕಿಅಂಶಗಳನ್ನು ಒದಗಿಸಿದೆ. ಅದರ ಪ್ರಕಾರ ಇಡೀ ದೇಶದಲ್ಲಿ ಹೆಣ್ಣುಮಕ್ಕಳ ಮೇಲೆ ಬಹುಪಾಲು ಎಲ್ಲಾ ಬಗೆಯ ಅಪರಾಧಗಳು ಅತಿಹೆಚ್ಚು ಸಂಭವಿಸಿರುವುದು ದೇಶದ ರಾಜಧಾನಿ. ಈ ದೇಶದ ಅಭಿವೃದ್ಧಿಯ ಶೋಕೇಸ್ ಆಗಿರುವ ನವದೆಹಲಿಯಲ್ಲಿ, 2010ರಲ್ಲಿ ದೆಹಲಿಯಲ್ಲಿ ಹೆಂಗಸರ ಮೇಲೆ 3,886 ಅಪರಾಧಗಳು ಸಂಭವಿಸಿದ್ದರೆ 2011ರಲ್ಲಿ 4,489 ಅಪರಾಧಗಳು ಸಂಭವಿಸಿವೆ. ಅಂದರೆ ದೆಹಲಿ ನಗರದಲ್ಲಿ ಒಂದಲ್ಲ ಒಂದು ಕಡೆ ದಿನಕ್ಕೆ ಹತ್ತು ಬಗೆಯ ಹಿಂಸೆಗಳಿಗೆ ರಾಜಧಾನಿಯ ಹೆಂಗಸು ಒಳಗಾಗುತ್ತಿದ್ದಾಳೆ. ಅಂದಹಾಗೆ ದೆಹಲಿಯನ್ನೂ ಓರ್ವ ಮಹಿಳೆ - ಶೀಲಾ ದೀಕ್ಷಿತ್ - ಆಳುತ್ತಿದ್ದಾರೆ.

ಸ್ತ್ರೀ ಪೀಡನೆ ಮತ್ತು ಪುರುಷಾಹಂಕಾರದಲ್ಲಿ ಅತ್ಯಂತ ಪ್ರಗತಿಪರ ಮತ್ತು ಅತಿಹೆಚ್ಚು ಅಭಿವೃದ್ಧಿ ಹೊಂದಿದ ಮಾಡರ್ನ್ ನಗರವಾದ ಬೆಂಗಳೂರು ದೆಹಲಿಯ ನಂತರದಲ್ಲಿ ಎರಡನೇ ಸ್ಥಾನದಲ್ಲಿದೆ. 2010ರಲ್ಲಿ ಬೆಂಗಳೂರಿನಲ್ಲಿ 1,570 ಅಪರಾಧಗಳು ಸಂಭವಿಸಿದ್ದರೆ 2011ರಲ್ಲಿ 1,890



ಅಪರಾಧಗಳು ಸಂಭವಿಸಿವೆ. ನಂತರದ ಸ್ಥಾನದಲ್ಲಿ ಮತ್ತೊಂದು ಐಟಿ ನಗರವಾದ ಹೈದರಾಬಾದ್, ದೇಶದ ಆರ್ಥಿಕ ರಾಜಧಾನಿ ಮುಂಬೈ, ಹೊಸದಾಗಿ ಐಟಿ ಕಿರೀಟ ಪಡೆದುಕೊಳ್ಳುತ್ತಿರುವ ಕೋಲ್ಕತ್ತಾ, ಕಾನ್ಪುರ, ಆಂಧ್ರದ ಹೆಮ್ಮೆಯ ನಗರಗಳಾದ ವಿಜಯವಾಡ ಮತ್ತು ವಿಶಾಖಪಟ್ಟಣಗಳು ಮಹಿಳೆಯರ ಮೇಲೆ ಅತಿಹೆಚ್ಚು ಅಪರಾಧ ನಡೆಯುತ್ತಿರುವ ಸ್ಥಾನಗಳನ್ನು ಪಡೆದುಕೊಳ್ಳುತ್ತವೆ. ವಾಸ್ತವವಾಗಿ ಬಿಹಾರ ಒಟ್ಟಾರೆ ಹೆಣ್ಣುಮಕ್ಕಳ ಮೇಲಿನ ಅಪರಾಧಗಳು ಸಂಖ್ಯೆಯಲ್ಲಿ ಹಿಂದೆ ಇದ್ದರೂ ನಿತೀಶ್ ಕುಮಾರ್ ನೇತೃತ್ವದಲ್ಲಿ ಅಲ್ಲಿ ಸಂಭವಿಸುತ್ತಿರುವ ಮೇಲ್ 'ಮಧ್ಯಮವರ್ಗ ಕೇಂದ್ರಿತ ಅಭಿವೃದ್ಧಿ ಮಾದರಿಯಲ್ಲಿ ಬೆಳೆದಿರುವ ಪಾಟ್ನಾ ಸಹ ಹೆಂಗುಸರ ಮೇಲೆ ಹೆಚ್ಚು ಅಪರಾಧ ನಡೆಯುವ ನಗರಗಳಲ್ಲಿ ಮೊದಲ ಐದರಲ್ಲಿ ಸ್ಥಾನ ಪಡೆದುಕೊಂಡಿದೆ.

ವಾಸ್ತವವಾಗಿ ಒಟ್ಟಾರೆಯಾಗಿ ದೇಶದಲ್ಲಿ ಮತ್ತು ಈ ನಗರಗಳಲ್ಲಿ ಯಾವ ಬಗೆಯ ಅಪರಾಧಗಳು ಹೆಚ್ಚುತ್ತಿವೆ ಮತ್ತು ಯಾವುದು ಹೆಚ್ಚು ಕಡಿಮೆಯಾಗುತ್ತಿವೆ ಎಂದು ಅರ್ಥಮಾಡಿಕೊಂಡರೂ ಈ ಅಭಿವೃದ್ಧಿ ಮಾದರಿಯ ಸಾಮಾಜಿಕ ಪರಿಣಾಮದ ಸ್ವರೂಪ ಅರ್ಥವಾಗುತ್ತದೆ. ಒಟ್ಟಾರೆಯಾಗಿ ಬಾಲೆಯರನ್ನು ವೇಶ್ಯಾವಾಟಿಕೆಗೆ ತಳ್ಳುವ, ಅಪಹರಣ ಮಾಡಿ ಚಿತ್ರಹಿಂಸೆಗೆ ಗುರಿ ಮಾಡುವ, ವರದಕ್ಷಿಣೆಗೆ ಪೀಡಿಸುವ ಮತ್ತು ಸಾಯಿಸುವ ಹಾಗೂ ಲೈಂಗಿಕ ಬಲಾತ್ಕಾರ ಮಾಡುವ ಅಪರಾಧಗಳ ಸಂಖ್ಯೆ ಈ ವರ್ಷವೂ ಅತಿಹೆಚ್ಚು ಸಂಭವಿಸಿವೆ. ಉದಾಹರಣೆಗೆ ಬಾಲೆಯರನ್ನು ವೇಶ್ಯಾವಾಟಿಕೆಗೆ ದೂಡುವ ಅಪರಾಧಗಳ ಪ್ರಮಾಣ ಶೇ.122ರಷ್ಟು ಹೆಚ್ಚಿದ್ದರೆ, ಅಪಹರಣದ ಪ್ರಮಾಣ ಶೇ.19.4ರಷ್ಟು, ವರದಕ್ಷಿಣೆ ಕಿರುಕುಳದ ಸಂಖ್ಯೆ ಶೇ.27ರಷ್ಟು ಹೆಚ್ಚಿದ್ದರೆ ವರದಕ್ಷಿಣೆ ಸಾವಿನ ಪ್ರಮಾಣ ಶೇ.2.7ರಷ್ಟು ಹೆಚ್ಚಿದೆ. ಒಟ್ಟಾರೆ ಲೈಂಗಿಕ ಬಲಾತ್ಕಾರದ ಸಂಖ್ಯೆ ಶೇ.9.2ರಷ್ಟು ಹೆಚ್ಚಿದೆ.

ವರದಕ್ಷಿಣೆ ಕಿರುಕುಳದ ಪ್ರಮಾಣದಲ್ಲಿ ಅತಿಹೆಚ್ಚು ಕೋಟ್ಯಾಧೀಶರನ್ನು ಮತ್ತು ಎನ್‌ಆರ್‌ಐಗಳನ್ನು ಹೊಂದಿರುವ ಹೆಗ್ಗಳಿಕೆ ಇರುವ ಆಂಧ್ರ ಪ್ರದೇಶ ಮೊದಲ ಸ್ಥಾನದಲ್ಲಿದೆ. ಒಟ್ಟಾರೆ ಭಾರತದಲ್ಲಿ 2011ರಲ್ಲಿ 6,619 ವರದಕ್ಷಿಣೆ ಕಿರುಕುಳದ ಪ್ರಕರಣಗಳು ಸಂಭವಿಸಿದ್ದರೆ ಅದರಲ್ಲಿ ಆಂಧ್ರದ ಪ್ರಮಾಣ ಶೇ.28.7 ಮತ್ತು ನಂತರದಲ್ಲಿ ಕರ್ನಾಟಕ ಶೇ.18.3! ಇದು ದೇಶದಲ್ಲೇ ಅತಿ ಹೆಚ್ಚು ಶ್ರೀಮಂತಿಕೆ ಮತ್ತು ಅತಿ "ಘನವಾದ ಆಧುನಿಕತೆ" ಪಡೆದುಕೊಂಡ ಸಮಾಜಗಳು ವರ್ತಿಸುತ್ತಿರುವ ರೀತಿ. ಇನ್ನೂ ನಗರಗಳ ಮಟ್ಟಿಗೆ ಹೇಳುವುದಾದರೆ ಬೆಂಗಳೂರಿನಲ್ಲೇ ಅತಿಹೆಚ್ಚು ವರದಕ್ಷಿಣೆ ಕಿರುಕುಳ ಮತ್ತು ವರದಕ್ಷಿಣೆ ಸಾವುಗಳ ಪ್ರಕರಣಗಳು ದಾಖಲಾಗಿದ್ದವು.

ಲೈಂಗಿಕ ಬಲಾತ್ಕಾರದ ಪ್ರಕರಣಗಳಲ್ಲಿ ದೇಶದ ಶೇ.17.6 ಪ್ರಕರಣಗಳು ದಾಖಲಾಗಿರುವ ದೆಹಲಿ ಮೊದಲ ಸ್ಥಾನದಲ್ಲಿದ್ದರೆ ಮುಂಬೈ, ಭೋಪಾಲ್ ನಂತರದಲ್ಲಿ ಬೆಂಗಳೂರು ನಾಲ್ಕನೆ ಸ್ಥಾನದಲ್ಲಿದೆ. ಹೆಂಗಸರ ಅಪಹರಣ ಮತ್ತು ಬಲಾತ್ಕಾರದ ಪ್ರಕರಣದಲ್ಲೂ ಕರ್ನಾಟಕ ನಾಲ್ಕನೇ ಸ್ಥಾನದಲ್ಲಿದೆ.

ಇದರೊಡನೆ ಹೆಣ್ಣುಮಕ್ಕಳ ಅಸಹಜ ಸಾವು ಮತ್ತು ಆತ್ಮಹತ್ಯೆಗಳ ಪ್ರಕರಣಗಳಲ್ಲೂ ಬೆಂಗಳೂರು ದೆಹಲಿಯ ನಂತರದ ಸ್ಥಾನದಲ್ಲಿದೆ. ಕೋಲ್ಕತ್ತ ಹೈದರಾಬಾದ್ ನಂತರದ ಸ್ಥಾನಗಳಲ್ಲಿವೆ. ಹಾಗೆಯೇ ರೈತರ ಆತ್ಮಹತ್ಯೆಯ ಪ್ರಕರಣಗಳಲ್ಲೂ ಮಹಾರಾಷ್ಟ್ರ, ಕರ್ನಾಟಕ, ಆಂಧ್ರಪ್ರದೇಶ ಮತ್ತು ಕೇರಳಗಳು ಸತತವಾಗಿ ಹತ್ತನೇ ವರ್ಷವೂ ಮೊದಲ ಐದು ಸ್ಥಾನದಲ್ಲಿವೆ!

ಹೀಗೆ ಸಮಾಜದ ಬಲಹೀನರ ಮತ್ತು ದುರ್ಬಲರ ದೃಷ್ಟಿಯಿಂದ ನೋಡಿದರೆ ಈ ದೇಶ ಜಾಗತೀಕರಣ ಪ್ರಣೀತ ಅಭಿವೃದ್ಧಿ ಮಾದರಿ ಹಿಡಿದ ನಂತರದಲ್ಲಿ ಈ ದೇಶದಲ್ಲಿ ದುರ್ಬಲರ ಪರಿಸ್ಥಿತಿ ಸಾಮಾಜಿಕವಾಗಿ ಇನ್ನಷ್ಟು ಅತಂತ್ರವಾಗಿದೆ. ಕಾರ್ಪೊರೇಟ್ ಬಂಡವಾಳಶಾಹಿ ವ್ಯವಸ್ಥೆ ತಂದಿರುವ ಆಧುನಿಕ ಸಮಾಜದಲ್ಲಿ ಮಹಿಳೆಯರಿಗೆ ಸಮಾನತೆ ಮತ್ತು ಗೌರವ ನೀಡುವ ಆಧುನಿಕ ಮತ್ತು ಮಾನವೀಯ ಮೌಲ್ಯವನ್ನೇನು ಹೆಚ್ಚು ಮಾಡಿಲ್ಲ. ಬದಲಿಗೆ

ಚಾರ್ವಾಕ



• ಶಿವಸುಂದ

ಅವರ ಮೇಲೆ ವರದಕ್ಷಿಣೆ ಕಿರುಕುಳದಂತ ಹಳೆ ಕ್ರೌರ್ಯದ ಜೊತೆಗೆ ಹೊಸ ಬಗೆಯ ಲೈಂಗಿಕ ವ ದೈಹಿಕ ದೌರ್ಜನ್ಯಗಳನ್ನೂ ಹೆಚ್ಚು ಮಾಡಿದೆ. ಆಂಧ್ರಪ್ರದೇಶ, ದೆಹಲಿ ಮತ್ತು ಬೆಂಗಳೂರಿನ ಸಂದರ್ಭ ಇನ್ನಷ್ಟು ನಿಚ್ಚಳವಾಗಿ ತಿಳಿಯುತ್ತದೆ. ಇಲ್ಲಿ ಅತ್ಯಂತ ಆಧು ಶಿಕ್ಷಣ ಪಡೆದು ಅತಿ ಹೆಚ್ಚು ಆದಾಯ ಗಳಿಸುವ, ಉದ್ ಮಾಡಿದಷ್ಟು ಸ್ವಾಭಿಮಾನ ಮತ್ತು ಮಹಿಳೆಯರ ಸರಿಸಮಾನವಾಗಿ ನೋಡುವ ಮೌಲ್ಯಗಳು ಹೆಚ್ಚಾ ಬದಲು ಅವರನ್ನು ಆಸ್ತಿಯನ್ನಾಗಿ ನೋಡುವ ವ ದೈಹಿಕ ತೃಷೆಯನ್ನು ತೀರಿಸುವ ವಸ್ತುವನ್ನಾಗಿ ಪರಿಗಣಿ ಮನೋಧರ್ಮವೇ ಹೆಚ್ಚಾಗುತ್ತಿದೆ. ಇದು ನ ಸಂದರ್ಭದಲ್ಲಿ ಹೇಗೆ ಆಧುನಿಕತೆಯು ಸಾಂಪ್ರದಾಯಿ ಯೊಂದಿಗೆ ರಾಜಿ ಮಾಡಿಕೊಂಡು ಮಹಿಳೆಯರ ಮೇ ಇನ್ನಷ್ಟು ಅಸಹನೀಯ ದೌರ್ಜನ್ಯವನ್ನೇ ಹುಟ್ಟುಹಾಕು

ಹಾಗೆಯೇ ಪ್ರಗತಿಪರ ಎಂದು ಕೊಚ್ಚಿಕೊಳ್ಳುತ್ತಿರ ಹಾಗೂ ದೇಶದಲ್ಲಿ ಹೆಚ್ಚೆಚ್ಚು ಅಭಿವೃದ್ಧಿ ಹೊಂದಿರ ಕರ್ನಾಟಕ, ಆಂಧ್ರದಂತ ರಾಜ್ಯಗಳಲ್ಲೇ ಅತಿಹೆಚ್ಚು ಆತ್ಮ ನಡೆಯುತ್ತಿರುವುದು ಇದನ್ನೇ ಸೂಚಿಸುತ್ತಿದೆ. ಈ ಐ ರಾಜ್ಯಗಳಲ್ಲಿ ದೇಶದಲ್ಲಿ ಸಂಭವಿಸುತ್ತಿರುವ ರೈತರ ಆತ್ಮಹ ಶೇ.65ರಷ್ಟು ಸಂಭವಿಸುತ್ತಿವೆ ಎಂದರೆ ಈ ದೇ ಅಭಿವೃದ್ಧಿಯು ಹೇಗೆ ರೈತ ವಿರೋಧಿಯಾಗಿದೆ, ಮಹಿ ವಿರೋಧಿಯಾಗಿದೆ ಎಂಬುದನ್ನು ಸೂಚಿಸುವುದಿಲ್ಲವೆ

ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗ ಅತ್ಯಂತ ಕಡಿಮೆ ಸಂಭವಿಸಿರುವುದು ನಾಗಾಲ್ಯಾಂಡಿ ಅಂದರೆ ಶೇ.1.9ರಷ್ಟು ಮಾತ್ರ. ಅದಕ್ಕೆ ಹಲವು ಕಾರಣಗ ಅದು ಮೂಲಭೂತವಾಗಿ ಬುಡಕಟ್ಟು ಸಮಾಜ. ಇ ಪುರುಷಾಧಿಪತ್ಯವನ್ನೇ ಉಸಿರಾಡ ಊಳಿಗಮಾನ್ಯತೆಯನ್ನಾಗಲೀ, ಅದಕ್ಕೆ ಹೊಸ ರೂಪ ಜೀವಕೊಡುವ ಬಂಡವಾಳಶಾಹಿ ಸಮಾಜಕ್ಕಾಗಲಿ ಇ ಪಕ್ಕಾಗದ ಇರುವ ಸಮಾಜ. ಕಾರ್ಪೊರೇಟ್ ಬಂಡವ ಮತ್ತು ಹಿಂದೂತ್ವವಾದಿ ಪುರುಶಾಹಿಪತ್ಯದ ಮೌಲ್ಯ ಇನ್ನೂ ಬಲವಾಗಿ ಪ್ರಭಾವಿಸದ ಸಮಾಜ. ಆದ್ದರಿಂದ ಅಲ್ಲಿ ಇನ್ನೂ ಮಹಿಳೆಯರು ಮತ್ತು ದುರ್ಬಲ ಶ್ರೀಮಂತಿಕೆಯಿಂದ ಇಲ್ಲದಿದ್ದರೂ ಸಾಮಾಜಿಕವ ಆರೋಗ್ಯಕರ ಸಮಾಜ ಹೊಂದಿದ್ದಾರೆ.

ನಮ್ಮದು ವಿಕೃತ ಬಂಡವಾಳಶಾಹಿಗೆ, ಪುರುಷಾಧಿಪ ಬ್ರಾಹ್ಮಣಶಾಹಿ ಮೌಲ್ಯಗಳಿಗೆ ಪಕ್ಕಾದ ಸಮಾಜ. ಅ ಇಲ್ಲಿ ಮೇಲ್ ವರ್ಗದ, ಮೇಲ್ ಜಾತಿಯ ಪುರ ಸಮಾಜ ಆಟಾಟೋಪದಿಂದ ಮೆರೆಯುತ್ತವೆ. ಮಹಿಳೆಯ ದಲಿತರು, ರೈತರು, ಬಡವರು ಹಲವು ಬಗೆಯ ಸಾಮಾ ಹಿಂಸೆಗಳಿಗೆ ತುತ್ತಾಗಿ ನರಳುತ್ತಿದ್ದಾರೆ.

ಬಂಡವಾಳಶಾಹಿ ಮತ್ತು ಹಿಂದೂತ್ವವಾದಿ ವ್ಯ ನಡೆಸುತ್ತಿರುವ ಕ್ರೈಮ್ ಅನ್ನೇ ನ್ಯಾಷನಲ್ ಕ್ರೈಮ್ ರೆಕಾ ಬ್ಯೂರೋ ಸಹ ಸ್ಪಷ್ಟವಾಗಿ ಬಿತ್ತರಿಸುತ್ತಿದೆ, ಅಲ್ಲವೇ?

ನೋ ಕಾಮೆಂಟ್ಸ್



"ಜುಲೈ ತಿಂಗಳಾದರೂ ರಾಜ್ಯದಲ್ಲಿ ಮುಂಗಾರು ತೀವ್ರಗೊಳ್ಳದೆ ಸತತ ಎರಡನೇ ವರ್ಷವೂ ರಾಜ್ಯವು ಬರದ ದವಡೆಗೆ ಸಿಲುಕಿಕೊಳ್ಳುವ ಭೀತಿಯನ್ನು ಎದುರಿಸುತ್ತಿದೆ. ರಾಜ್ಯ ಸರ್ಕಾರ ಕಳೆದ ವರ್ಷ 123 ತಾಲ್ಲೂಕುಗಳನ್ನು ಬರಪೀಡಿತವೆಂದು ಘೋಷಣೆ ಮಾಡಿತ್ತು. ಆದರೆ ಈಗ ಮಳೆ ಕೊರತೆ ಇರುವ ತಾಲ್ಲೂಕುಗಳ ಸಂಖ್ಯೆ 157ಕ್ಕೆ ಏರಿಕೆಯಾಗಿದೆ. ಕೇವಲ 5 ತಾಲ್ಲೂಕುಗಳಲ್ಲಿ ಮಾತ್ರ ಹೆಚ್ಚು ಮಳೆಯಾಗಿದ್ದು 14 ತಾಲ್ಲೂಕುಗಳಲ್ಲಿ ಸಾಧಾರಣ ಮಳೆಯಾಗಿದೆ. ಇಡೀ ರಾಜ್ಯದಲ್ಲಿ ಕೇವಲ ಶೇ.40ರಷ್ಟು ಮಾತ್ರ ಮಳೆಯಾಗಿದೆ. ನಿರೀಕ್ಷಿತ ಪ್ರಮಾಣದಲ್ಲಿ ಬಿತ್ತನೆಯೂ ನಡೆದಿಲ್ಲ, ಆಗಿರುವ ಬಿತ್ತನೆಯೂ ತೇವಾಂಶದ ಕೊರತೆಯನ್ನು ಎದುರಿಸುತ್ತಿದೆ. ಕುಡಿಯುವ ನೀರು ಮತ್ತು ಜಾನುವಾರುಗಳಿಗೆ ಮೇವಿನ ಸಮಸ್ಯೆ ಉಲ್ಬಣಿಸಿದೆ."

\- ವರದಿ



"ಪಶ್ಚಿಮಘಟ್ಟಗಳಿಗೆ ಯುನೆಸ್ಕೋ ಮಾನ್ಯತೆ ದೊರಕಿರುವುದು ತಳಮಟ್ಟದಲ್ಲಿ ಅಂತಹ ದೊಡ್ಡ ಬದಲಾವಣೆ ಬರಲಿದೆ ಎಂಬ ನಿರೀಕ್ಷೆ ಏನಿಲ್ಲ, ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಪರಿಸರ ಸಂರಕ್ಷಣೆಗೆ ಮುತುವರ್ಜಿ ವಹಿಸದಿದ್ದರೆ ಯಾವ ಯುನೆಸ್ಕೋ ಮಾನ್ಯತೆಯೂ ಉಪಯೋಗವಾಗುವುದಿಲ್ಲ."

\- ಮಾಧವ್ ಗಾಡ್ಗಿಲ್

"'2011ರಲ್ಲಿ ಭಾರತದಲ್ಲಿ ಆಕಸ್ಮಿಕ ಸಾವುಗಳು ಮತ್ತು ಆತ್ಮಹತ್ಯೆಗಳು' ಎಂಬ ಸರ್ಕಾರದ ಇತ್ತೀಚಿನ ವರದಿಯ ಪ್ರಕಾರ ಗೃಹಿಣಿಯರಲ್ಲಿ ಆತ್ಮಹತ್ಯಾ ಪ್ರವೃತ್ತಿ ಹೆಚ್ಚುತ್ತಿದೆ. ದೇಶದಲ್ಲಿ ಇಂದು ಪ್ರತಿ ನಾಲ್ಕು ನಿಮಿಷಕ್ಕೆ ಒಬ್ಬರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದು, ಹೀಗೆ ಆತ್ಮಹತ್ಯೆ ಮಾಡಿಕೊಳ್ಳುವ ಐವರಲ್ಲಿ ಒಬ್ಬರು ಗೃಹಿಣಿಯರಾಗಿದ್ದಾರೆ. ಕರ್ನಾಟಕ ಸೇರಿದಂತೆ ತಮಿಳುನಾಡು, ಮಹಾರಾಷ್ಟ್ರ ಆಂಧ್ರಪ್ರದೇಶ ಮತ್ತು ಪಶ್ಚಿಮ ಬಂಗಾಳಗಳಲ್ಲಿ ಅಧಿಕ ಪ್ರಮಾಣದಲ್ಲಿ ಆತ್ಮಹತ್ಯೆಗಳು ವರದಿಯಾಗಿವೆ. ದೇಶದಲ್ಲಿ ವರದಿಯಾಗುವ ಆತ್ಮಹತ್ಯೆ ಪ್ರಕರಣಗಳಲ್ಲಿ ಶೇ.53ರಷ್ಟು ಪ್ರಕರಣ ಈ ಐದು ರಾಜ್ಯಗಳಲ್ಲಿ ಸಂಭವಿಸುತ್ತಿದ್ದು, ಆತ್ಮಹತ್ಯೆ ಅಧಿಕವಾಗಿ ಸಂಭವಿಸುವ 53 ನಗರಗಳ ಪೈಕಿ ಬೆಂಗಳೂರು ಸಹ ಪ್ರಮುಖ ಸ್ಥಾನದಲ್ಲಿದೆ."

\- ವರದಿ

"ದೇಶದಲ್ಲಿ ಅರ್ಧಕ್ಕಿಂತ ಹೆಚ್ಚು ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿವೆ ಮತ್ತು ನಿಗದಿತ ತೂಕಕ್ಕಿಂತ ಕಡಿಮೆ ತೂಗುತ್ತಿದ್ದಾರೆ. ಆಹಾರ ಪದಾರ್ಥಗಳ ಬೆಲೆ ಏರಿಕೆಯಿಂದಾಗಿ ಬಡವರು ಒಪ್ಪೊತ್ತಿನ ಗಂಜಿಗೂ ಪರದಾಡುತ್ತಿದ್ದಾರೆ. ಮಕ್ಕಳ ಶಾಲಾ ದಾಖಲಾತಿ ಪ್ರಮಾಣ ಹೆಚ್ಚಾಗಿದ್ದರೂ ಅರ್ಧಕ್ಕೇ ಶಾಲೆ ಬಿಡುತ್ತಿರುವ ಮಕ್ಕಳ ಸಂಖ್ಯೆ ಹೆಚ್ಚಾಗುತ್ತಿದೆ. ಈ ವಿಷಯದಲ್ಲಿ ನಾವು ಆಫ್ರಿಕಾಗಿಂತ ಕಡಿಮೆಯಾಗಿದ್ದೇವೆ. ಅದರಲ್ಲೂ ಅಸಮಾನತೆಯ ಬೇಗುದಿಯಲ್ಲಿ ಬೇಯುತ್ತಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗದ ಮಕ್ಕಳು ಹೆಚ್ಚಾಗಿ ಶಾಲೆಯನ್ನು ಬಿಡುತ್ತಿದ್ದಾರೆ."

\- ಪ್ರೊ. ಜಯತಿ ಘೋಷ್

"ಭಾರತ ಸೇರಿದಂತೆ ಏಷ್ಯಾದ ಹಲವು ದೇಶಗಳಲ್ಲಿ ಕಾರ್ಪೊರೇಟ್ ಕಂಪನಿಗಳಲ್ಲಿ ಈಗಲೂ ಪುರುಷ ಪ್ರಧಾನ ವ್ಯವಸ್ಥೆಯೇ ಮುಂದುವರೆದಿದೆ. ಸದ್ಯ ಏಷ್ಯಾದಲ್ಲಿನ ಕಂಪನಿಗಳ ನಿರ್ದೇಶಕ ಮಂಡಳಿಯಲ್ಲಿ ಶೇ. 8ರಷ್ಟು ಮಾತ್ರ ಮಹಿಳೆಯರಿದ್ದಾರೆ. ಇದು ಯೂರೋಪಿನಲ್ಲಿ ಶೇ.10 ಮತ್ತು ಅಮೆರಿಕದಲ್ಲಿ ಶೇ.14. ಕುಟುಂಬ ಮತ್ತು ಉದ್ಯೋಗ ಎರಡನ್ನು ತೂಗಿಸಿಕೊಂಡು ಹೋಗುವುದು ಕಷ್ಟವಾಗುತ್ತಿರುವ ಹಿನ್ನೆಲೆಯಲ್ಲಿ ಏಷ್ಯಾ ಅನೇಕ ಮಹಿಳೆಯರು ಉನ್ನತ ಹುದ್ದೆಗಳನ್ನು ತ್ಯಜಿಸಿದ್ದಾರೆ."

\- ಮೆಕೆನ್ಸಿ ಅಂಡ್ ಕಂಪನಿ ವರದಿ

ನಂಬಿದ್ರೆನಂಬಿ ಬಿಟ್ರೆಬಿಡಿ



"ದೇಶವನ್ನು ರಕ್ಷಿಸಬೇಕೆಂದು ಪಾಕಿಸ್ತಾನದ ಜನ ಮತ್ತೆ ಸೈನ್ಯದ ಮೊರೆ ಹೋಗುತ್ತಿದ್ದಾರೆ. ಹಾಗಾಗಿ ಅಲ್ಲಿ ಸೇನಾ ಕ್ಷಿಪ್ರ ಕ್ರಾಂತಿಯ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ."

\- ಮುಷರ್ರ



"ಬ್ರಾಹ್ಮಣರಿಗಿಂತಲೂ ದಲಿತ ಕೋಟ ಬಳಸಿಕೊಂಡು ಅಭಿವೃದ್ಧಿ ಹೊಂದಿರುವ ಮೇಲ್ವರ್ಗ ದಲಿತರು ದಲಿತ ಸಮುದಾಯಕ್ಕೆ ಹೆಚ ಅಪಾಯಕಾರಿಯಾಗಿ ಬದಲಾಗಿದ್ದಾರೆ. ದಲಿ ಸಮುದಾಯದಿಂದಲೇ ಮೇಲೆ ಬಂದ ಸಮಾಜದಲ್ಲಿಂದು ಗಣ್ಯವ್ಯಕ್ತಿಗಳಾಗಿರುವ, ಆರ್ಥಿಕವಾ ಶೈಕ್ಷಣಿಕವಾಗಿ, ಔದ್ಯೋಗಿಕವಾಗಿ ಸಬಲರಾಗಿರುವ ಮೇಲ್ವರ್ಗದ ದಲಿತ ಕೆಳವರ್ಗದ ದಲಿತರನ್ನು ಕಸಕ್ಕಿಂತಲೂ ಕಡೆಯಾಗಿ ಕಾಣುತ್ತಿದ್ದಾರೆ."

\- ಮೈಲಾರ

ಪಿ.ಸಾಯಿನಾಥ್‌ರೊಂದಿಗೆ ಮಾತುಕತೆ...

ಕಂಡಹಾಗೆ




editorlankesh@gmail.com ● ಗೌರಿ ಲಂಕೇಶ್

ಖ್ಯಾತ ಪತ್ರಕರ್ತ ಪಿ. ಸಾಯಿನಾಥ್ ಅವರು ಕಳೆದವಾರ ಬೆಂಗಳೂರಿಗೆ ಬರಲಿದ್ದಾರೆಂದು ಗೊತ್ತಾದಾಗ ಸಂತೋಷವಾಯಿತು. ಸಾಯಿನಾಥ್ ಅವರು ನನಗೆ ಪರಿಚಿತರಾಗಿದ್ದರೂ ಅವರನ್ನು ಮುಖತಃ ಭೇಟಿಯಾಗಿ ಹಲವಾರು ವರ್ಷಗಳೇ ಆಗಿದ್ದವು. ಭಾರತದ ಗ್ರಾಮೀಣ ಜನರ ಬದುಕನ್ನು ಅದ್ಭುತವಾಗಿ ದಾಖಲಿಸುವ ಅವರು ವರ್ಷದಲ್ಲಿ ಕನಿಷ್ಠ 270 ದಿನಗಳನ್ನು ವಿವಿಧ ರಾಜ್ಯಗಳ ಹಳ್ಳಿಗಾಡಿನಲ್ಲಿ ಕಳೆಯುತ್ತಾರಾದ್ದರಿಂದ ಅವರೊಂದಿಗಿನ ನನ್ನ ಸಂಪರ್ಕ ಈಮೇಲ್ ಮತ್ತು ಎಸ್‌ಎಂಎಸ್‌ಗಳ ಮೂಲಕ. ಹಾಗೆಯೇ ಇತರರಂತೆ ತಪ್ಪದೆ ಅವರ ಬರಹಗಳನ್ನು 'ದಿ ಹಿಂದೂ' ಪತ್ರಿಕೆಯಲ್ಲಿ ಓದುವ ಮೂಲಕ.

ಸಾಯಿನಾಥರು ಸ್ಥಾಪಿಸಿರುವ 'ಕೌಂಟರ್ ಮೀಡಿಯಾ' ಪ್ರಶಸ್ತಿಗಳನ್ನು ಕೊಡುವ ಕಾರ್ಯಕ್ರಮ ಮತ್ತು ಅವರ ಒಂದು ಉಪನ್ಯಾಸವನ್ನು ಬೆಂಗಳೂರಿನ ಗಾಂಧಿ ಭವನದಲ್ಲಿ ಕಳೆದ ಭಾನುವಾರ ಆಯೋಜಿಸಲಾಗಿತ್ತು, ಅದು ಇಡೀ ದಿನದ ಕಾರ್ಯಕ್ರಮ. ಅವರು ಕಳೆದ ಒಂದೆರಡು ಬಾರಿ ಬೆಂಗಳೂರಿಗೆ ಬಂದಿದ್ದಾಗ ಅವರನ್ನು ಮಾತನಾಡಿಸಲಾಗಿರಲಿಲ್ಲ, ಆದ್ದರಿಂದ ಅವರನ್ನು ಈ ಬಾರಿ ಭೇಟಿ ಆಗಲೇಬೇಕೆನಿಸಿತು. ಮತ್ತೆ ಅದೇ ಸಮಸ್ಯೆ. ಸಾಯಿನಾಥರು ದೇಶದ ಅದ್ಯಾವ ಮೂಲೆಯಲ್ಲಿ ಅಧ್ಯಯನ ನಡೆಸುತ್ತಿದ್ದಾರೋ ಏನೋ? ಅವರಿಗೆ ಫೋನ್ ಮಾಡಿ ಡಿಸ್ಟರ್ಬ್ ಮಾಡುವುದು ಎಷ್ಟು ಸರಿ? ಆದ್ದರಿಂದ ಅವರ ಮೊಬೈಲಿಗೆ **"Pl call when u r free - gauri lankesh"** ಎಂದು ಒಂದು ಎಸ್‌ಎಂಎಸ್ ಕಳುಹಿಸಿದೆ. ಅರ್ಧ ಗಂಟೆಯಲ್ಲಿ ಅವರೇ ಫೋನ್ ಮಾಡಿದರು.

"ನೀವು ಯಾವಾಗ ಬೆಂಗಳೂರಿಗೆ ಬರುತ್ತೀರಿ? ಯಾವಾಗ free ಆಗುತ್ತೀರಿ. ನಿಮ್ಮನ್ನು ಭೇಟಿ ಮಾಡಬೇಕು" ಅಂದೆ. ಅದಕ್ಕವರು "ನಾನು ಶನಿವಾರ ಮಧ್ಯಾಹ್ನವೇ ಬೆಂಗಳೂರಿಗೆ ಬರುತ್ತೇನೆ. ಎಂದಿನಂತೆ ಹೋಟೆಲ್ ವುಡ್‌ಲ್ಯಾಂಡ್ಸ್‌ನಲ್ಲಿ ಉಳಿದುಕೊಳ್ಳುತ್ತೇನೆ. ಶನಿವಾರ ಸಂಜೆ ನೀನು ಬಿಡುವಾಗಿದ್ದೀಯಾ?" ಎಂದರು. ನಾನು ಓಕೆ



ಅಂದೆ. ಶನಿವಾರ ಮಧ್ಯಾಹ್ನ ಅವರು ತಮ್ಮ ಹೋಟೆಲ್ ರೂಮಿಗೆ ಚೆಕ್ ಇನ್ ಮಾಡಿದ ಕೂಡಲೆ ನನಗೆ ಫೋನ್ ಮಾಡಿದರು. ಸಂಜೆ ಐದಕ್ಕೆ ಭೇಟಿ ಆಗೋಣ ಎಂದು ನಿಶ್ಚಯಿಸಿದೆವು.

ಅವರು ಉಳಿದುಕೊಂಡಿದ್ದ ರೂಮನ್ನು ಪ್ರವೇಶಿಸುತ್ತಿದ್ದಂತೆ "ಎಷ್ಟು ವರ್ಷಗಳಾಯಿತು ನಾವು ಭೇಟಿ ಆಗಿ. ಹೇಗಿದ್ದೀಯಾ? ಪತ್ರಿಕೆ ಹೇಗೆ ನಡೆಯುತ್ತಿದೆ?" ಎಂದು ಕೇಳಿದರು. "ಹತ್ತು ವರ್ಷಗಳ ಮೇಲಾಯಿತು. ನಾನು ಚೆನ್ನಾಗಿದ್ದೇನೆ. ಪತ್ರಿಕೆಯೂ ಚೆನ್ನಾಗಿ ನಡೆಯುತ್ತಿದೆ" ಎಂದೆ. "ಈಗಲೂ ಜಾಹೀರಾತು ತೆಗೆದುಕೊಳ್ಳದೆ ಪತ್ರಿಕೆ ನಡೆಸುತ್ತಿದ್ದೀಯಲ್ಲ, ಅದ್ಭುತ" ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

"ನಿಮ್ಮೊಂದಿಗೆ ಕಾಡುಹರಟೆಹೊಡೆದು ನಮ್ಮಿಬ್ಬರ ಸಮಯವನ್ನೂ ಹಾಳು ಮಾಡಲು ನನಗಿಷ್ಟವಿಲ್ಲ, ಆದ್ದರಿಂದ ಒಂದಿಷ್ಟು ಪ್ರಶ್ನೆಗಳನ್ನು ಕೇಳುತ್ತೇನೆ. ಒಂದು ರೀತಿಯಲ್ಲಿ ಇದು *freewheeling* ಸಂದರ್ಶನ, ಓಕೆನಾ?" ಅಂದೆ.

"ಓಕೆ."

"ರೈತರ ಆತ್ಮಹತ್ಯೆಗಳನ್ನು ಕುರಿತು ನೀವು ಹಲವಾರು ಲೇಖನಗಳನ್ನು ಬರೆದಿದ್ದೀರಿ. ರೈತರ ಆತ್ಮಹತ್ಯೆಗಳನ್ನು ಹೇಗೆ ತಡೆಯಬಹುದು ಎಂದು ನಿಮಗನ್ನಿಸುತ್ತದೆ?"

ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ನಮ್ಮ ದೇಶದ ಆರ್ಥಿಕ ಕೃಷಿ ನೀತಿಯಿಂದಾಗಿ. ಇವತ್ತು ನಮ್ಮ ದೇಶದ ಕೃಷಿ ಸಿದ್ಧಾಂತ ಕಾರ್ಪೊರೇಟ್ ಫಾರ್ಮಿಂಗ್‌ನತ್ತ ಹೋಗುತ್ತಿದೆ. ಇಂದು ನಮ್ಮ ರೈತರ ಬದುಕನ್ನು ತಾಕುವ ಎಲ್ಲವೂ ಕಾರ್ಪೊರೇಟ್ ಕಂಪನಿಗಳ ಹಿಡಿತದಲ್ಲಿವೆ. ಬೀಜ, ಕ್ರಿಮಿನಾಶಕ, ಗೊಬ್ಬರ, ಮಾರುಕಟ್ಟೆ ಎಲ್ಲವೂ ಕೈಬಿರಳೆಣಿಕೆಯಷ್ಟು ಮಲ್ಟಿನ್ಯಾಷನಲ್ ಕಂಪನಿಗಳ ಕೈಯಲ್ಲಿವೆ. ಅಂದರೆ ಅವರು ನಮ್ಮ ರೈತರ ಬದುಕನ್ನು ನಿರ್ಧರಿಸುವವರಾಗಿದ್ದಾರೆ. ನಮ್ಮ ಹಳ್ಳಿಗಳಲ್ಲಿ ಇವತ್ತು ಕೆಲವರು ಭೂಮಾಲೀಕರಾಗಿದ್ದರೆ, ಇತರರು ಆ ಭೂಮಿಯಲ್ಲಿ ದುಡಿಯುವ ಕೂಲಿಕಾರರಾಗಿದ್ದಾರೆ. ಅಂದರೆ ಭೂಮಿಯ ಮಾಲೀಕತ್ವ ಮತ್ತು ಅದರಲ್ಲಿ ಕೃಷಿ ಮಾಡುವುದನ್ನು ಹೊರತುಪಡಿಸಿದರೆ ಯಾವುದೂ ನಮ್ಮ ರೈತರ ಕೈಯಲ್ಲಿಲ್ಲ, ಆದ್ದರಿಂದ ನಾನು ವಿವಿಧ ರಾಜ್ಯಗಳಿಗೆ ಹೋದಾಗ ಅಲ್ಲಿನ ರೈತರು ವಿವಿಧ ಭಾಷೆಗಳಲ್ಲಿ 'ನಮ್ಮನ್ನು ಯಾಕೆ ರೈತರು ಎಂದು ಕರೆಯುತ್ತೀರಿ?' ಎಂದು ನನ್ನನ್ನೇ ಕೇಳುತ್ತಾರೆ.

ಇವತ್ತು ನಮ್ಮ ರೈತಾಪಿ ದೊಡ್ಡಸಂಖ್ಯೆಯಲ್ಲಿ ಆತ್ಮಹತ್ಯೆಗೆ ಶರಣಾಗುತ್ತಿದ್ದರೆ ಅದು ನಮ್ಮ ಇಡೀ ಆರ್ಥಿಕ ಮತ್ತು ಕೃಷಿನೀತಿ ಅವರನ್ನು ಯಾವ ಹಂತಕ್ಕೆ ದೂಡಿದೆ ಎಂದು ಸ್ಪಷ್ಟಪಡಿಸುತ್ತದೆ. ಇದನ್ನು ಬಗೆಹರಿಸಬೇಕಿದ್ದರೆ ನಾವು ನಮ್ಮ ಈ ನೀತಿಗಳನ್ನೇ ಸಂಪೂರ್ಣವಾಗಿ ಬದಲಾಯಿಸಬೇಕು. ಅಲ್ಲೊಂದಿಷ್ಟು ಬದಲಾವಣೆ, ಇಲ್ಲೊಂದಿಷ್ಟು ತಿದ್ದುಪಡಿ ಇಂತಹವು ನಡೆಯುವುದಿಲ್ಲ. ಐಸ್‌ಲ್ಯಾಂಡ್ ದೇಶದಲ್ಲೂ ನಮ್ಮಂತೆಯೇ ಖಾಸಗೀಕರಣ ಮತ್ತು ಮುಕ್ತ ಮಾರುಕಟ್ಟೆಯನ್ನು ತರಲಾಗಿತ್ತು. ಆದರೆ ಆ ನೀತಿಯಿಂದಾಗುತ್ತಿರುವ ಅಪಾಯವನ್ನು ಅರಿತ ಐಸ್‌ಲ್ಯಾಂಡ್ ಅದನ್ನು ಸಂಪೂರ್ಣವಾಗಿ ಬದಲಾಯಿಸಿತಲ್ಲದೆ ಉದಾರೀಕರಣ ಮತ್ತು ಮುಕ್ತ ಮಾರುಕಟ್ಟೆಯನ್ನು ಪರಿಚಯಿಸಿದ್ದ ರಾಜಕೀಯ ನಾಯಕರನ್ನು ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡಿಸಿ ಅವರಿಗೆಲ್ಲ ಶಿಕ್ಷೆ ನೀಡಲಾಯಿತು. ಅದನ್ನೇ ಇಲ್ಲೂ ಮಾಡಬೇಕು.

ಎಪ್ಪತ್ತರ ದಶಕದಲ್ಲಿ ನಡೆದ ಹಸಿರುಕ್ರಾಂತಿಯಿಂದಾಗಿ ನಮ್ಮ ಕೃಷಿ ಪದ್ಧತಿಯೂ ಬದಲಾಯಿತು. 90ರ ದಶಕದಲ್ಲಿ ಪ್ರಾರಂಭವಾದ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣ ನೀತಿಗಳು ಹಸಿರುಕ್ರಾಂತಿಯಿಂದಾಗಿ ಬದಲಾದ ಕೃಷಿ ಪದ್ಧತಿಯನ್ನೇ ಬಂಡವಾಳ ಮಾಡಿಕೊಂಡು ನಮ್ಮ ಕೃಷಿಕರ ಬದುಕನ್ನು ನಾಶಮಾಡಿತು ಎಂದು ನಿಮಗೆ ಅನ್ನಿಸುತ್ತದೆಯೇ?

ಹಸಿರುಕ್ರಾಂತಿಯ ಬಗ್ಗೆ ಹಲವಾರು ಭ್ರಮೆಗಳಿವೆ. ಅದು ಹೆಚ್ಚಾಗಿ ಜಾರಿಗೆ ಬಂದಿದ್ದು ಪಂಜಾಬ್, ಹರಿಯಾಣ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ, ಆದರೆ ಒಂದು ಅಂಶ ನಿನಗೆ ಗೊತ್ತಾ? ಯಾವ ವರ್ಷಗಳಲ್ಲಿ ಹಸಿರುಕ್ರಾಂತಿಯಿಂದಾಗಿ ಆ ಮೂರು ರಾಜ್ಯಗಳಲ್ಲಿ ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆಯಲಾಯಿತು ಎಂದು ಸರ್ಕಾರ ಹೇಳಿತ್ತೋ ಅದೇ ವರ್ಷಗಳಲ್ಲಿ ಹಸಿರುಕ್ರಾಂತಿಯ ಬಗ್ಗೆ ಒಂದಿಷ್ಟೂ ಸುಳಿವೂ ಇರದಿದ್ದ ಪಶ್ಚಿಮ ಬಂಗಾಳದಲ್ಲಿ ಅದಕ್ಕಿಂತಲೂ ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆಯಲಾಗಿತ್ತು!

ಅಷ್ಟೇ ಮುಖ್ಯವಾಗಿ, ಹಸಿರುಕ್ರಾಂತಿಯಲ್ಲಿ ಅಳವಡಿಸಿದ್ದ ಕೃಷಿ ಪದ್ಧತಿಯನ್ನೇ ಅದಕ್ಕಿಂತ ಮುನ್ನ ಅಮೆರಿಕದಲ್ಲಿ ಪ್ರಯೋಗಿಸಿ ಅಲ್ಲಿನ ಭೂಮಿಯ ಫಲವತ್ತತೆ ನಾಶವಾಗಿತ್ತು. ಹೋಗಲಿ, ಆಗ ಅದರ ಬಗ್ಗೆ ನಮ್ಮ ಸರ್ಕಾರಕ್ಕೆ ಗೊತ್ತಿರಲಿಲ್ಲ ಎಂದಿಟ್ಟುಕೊಳ್ಳೋಣ. ಆದರೆ ಈ ಯುಗದಲ್ಲಿ ಸರ್ಕಾರದ ಆರ್ಥಿಕ ನೀತಿಯಿಂದಾಗಿ ನಮ್ಮ ಕೃಷಿಕರ ಬದುಕೇ ಅಧೋಗತಿ ಆಗುತ್ತೆ ಎಂದು ತನಗೆ ಗೊತ್ತಿರಲಿಲ್ಲ ಎಂದು ನಮ್ಮ ಸರ್ಕಾರ ಹೇಳುವಂತಿಲ್ಲ.

ನಮ್ಮ ಸಾಂಪ್ರದಾಯಿಕ ಕೃಷಿ ಪದ್ಧತಿ ಮತ್ತು ಇವತ್ತು ಜೆಎಂ ಬೀಜ, ಕೆಮಿಕಲ್ ಗೊಬ್ಬರ ಮತ್ತು ಹಾನಿಕಾರಕ ಕ್ರಿಮಿನಾಶಕಗಳನ್ನು ಉಪಯೋಗಿಸುತ್ತಿರುವ ಆಧುನಿಕ ಕೃಷಿ ಪದ್ಧತಿಯ ನಡುವಿನ ವ್ಯತ್ಯಾಸವನ್ನು ನೀವು ಹೇಗೆ ಬಣ್ಣಿಸುತ್ತೀರಿ?

ಈಗ ಹೆಚ್ಚಿನ ರೈತರು ಅನುಸರಿಸುತ್ತಿರುವ ಕೃಷಿ ಪದ್ಧತಿಯನ್ನು ನಾನು ಸ್ಟೆರಾಯ್ಡ್ಸ್ ಮೇಲೆ ನಡೆಸುತ್ತಿರುವ ಪದ್ಧತಿ ಎಂದು ಕರೆಯುತ್ತೇನೆ. ಇದಕ್ಕೆ ಒಂದು ಹೋಲಿಕೆಯನ್ನು ಕೊಡಬಹುದು. ಉದಾಹರಣೆಗೆ ಇಬ್ಬರು ಅವಳಿಜವಳಿ ಸಹೋದರರಿದ್ದಾರೆ ಎಂದಿಟ್ಟುಕೊಳ್ಳಿ. ಮೊದಲನೆಯವನಿಗೆ ಎಲ್ಲರೂ ತಿನ್ನುವ ಆಹಾರವನ್ನೇ ಕೊಟ್ಟು ಬೆಳೆಸಲಾಗಿದೆ. ಎರಡನೆಯವನಿಗೆ ಸ್ಟೆರಾಯ್ಡ್ಸ್ ಕೊಟ್ಟು ಬೆಳೆಸಲಾಗಿದೆ. ಕೆಲವರ್ಷಗಳಲ್ಲಿ ಮೊದಲನೆಯವನು ಸಾಮಾನ್ಯ ಗಾತ್ರದ ದೇಹ ಮತ್ತು ದೈಹಿಕ ಶಕ್ತಿಯನ್ನು ಹೊಂದಿರುತ್ತಾನೆ. ಆದರೆ ಎರಡನೆಯವನು ದೈತ್ಯಾಕಾರವಾಗಿ ಬೆಳೆದಿರುತ್ತಾನಲ್ಲದೆ ಎಲ್ಲಾ ದೈಹಿಕ ಸ್ಪರ್ಧೆಗಳನ್ನು ಗೆಲ್ಲುತ್ತಾನೆ. ಆದರೆ ಆನಂತರ ಏನು? ಅವರಿಬ್ಬರೂ ಪ್ರಾಯಕ್ಕೆ ಬರುವ ಹೊತ್ತಿಗೆ ಮೊದಲನೆಯವನು ಸಾಮಾನ್ಯ ಜನರಂತೆ ಬೆಳೆದಿರುತ್ತಾನೆ, ಆರೋಗ್ಯವಂತನಾಗಿರುತ್ತಾನೆ. ಆದರೆ ಎರಡನೆಯವನು ಅಷ್ಟುಹೊತ್ತಿಗಾಗಲೇ ತೀರಿಕೊಂಡಿರುತ್ತಾನೆ! ನಮ್ಮ ಭೂಮಿಗೆ ಆಧುನಿಕ ಕೃಷಿ ಪದ್ಧತಿಯಿಂದಾಗಿ ಆಗುತ್ತಿರುವುದೂ ಇದೆ.

ಹಲವು ದಶಕಗಳ ಹಿಂದೆ ನಮ್ಮ ಸರ್ಕಾರಗಳು - ಅದು ಗಿಮ್ಮಿಕ್ಕೇ ಆಗಿದ್ದರೂ - ಜನರನ್ನು ಸಂತೈಸಲು 'ಜೈ ಜವಾನ್, ಜೈ ಕಿಸಾನ್' ಎಂದು ಘೋಷಿಸುತ್ತಿದ್ದವು. ನಿಮ್ಮ ಪ್ರಕಾರ ಈಗಿನ ಸರ್ಕಾರಗಳ ಘೋಷವಾಕ್ಯ ಎಂತಹದ್ದಾಗಿದೆ?

ಈಗ ಜೈ ಜವಾನೂ ಇಲ್ಲ, ಜೈ ಕಿಸಾನೂ ಇಲ್ಲ, ಬದಲಾಗಿ ಎಲ್ಲೆಲ್ಲೂ 'ಜೈ ಲೂಯಿ ವಿಟ್ಟಾನ್' ಎಂಬ ಘೋಷಣೆಯೇ ಕೇಳಿಬರುತ್ತಿದೆ.

(ಲೂಯಿ ವಿಟ್ಟಾನ್ ಎಂಬುದು ಒಂದು ಅಂತರ ರಾಷ್ಟ್ರೀಯ ಫ್ಯಾಷನ್ ಕಂಪನಿ ಆಗಿದ್ದು ಅದು ತಯಾರಿಸುವ ಒಡವೆ, ಬಟ್ಟೆ, ಬ್ಯಾಗು, ಶೂ ಇತ್ಯಾದಿಗಳು ಲಕ್ಷಾಂತರ ರೂಪಾಯಿಗಳಿವೆ ಮಾರಾಟವಾಗುತ್ತವೆ- ಗೌರಿ)

ಎಂಭತ್ತರ ದಶಕದವರೆಗೂ ನಮ್ಮ ದೇಶದಲ್ಲಿ ಶಕ್ತಿಶಾಲಿಯಾದ ಮಾಸ್ ಮೂವ್‌ಮೆಂಟ್‌ಗಳಿದ್ದವು.....

ಆದರೀಗ ಮಾಸ್ ಸೂಯಿಸೈಡ್‌ಗಳಿವೆ...

ಆಗ ಉತ್ತರ ಭಾರತದಲ್ಲಿ ಮಹೇಂದರ್ ಸಿಂಗ್ ಟಿಕಾಯತ್ ಮತ್ತು ದಕ್ಷಿಣದಲ್ಲಿ ನಮ್ಮ ಪ್ರೊ. ಎಂ.ಡಿ. ನಂಜುಂಡಸ್ವಾಮಿಗಳಂತಹ ರೈತನಾಯಕರಿದ್ದರು. ಆದರೀಗ ಮಾಸ್ ಮೂವ್‌ಮೆಂಟ್‌ಗಳಾಗಲಿ, ಟಿಕಾಯತ್ ಮತ್ತು ನಂಜುಂಡಸ್ವಾಮಿ ತರಹದ ರೈತನಾಯಕರಾಗಲಿ ಇಲ್ಲ, ಯಾಕೆ ಹೀಗೆ?

ಇವತ್ತು ಮಾಸ್ ಮೂವ್‌ಮೆಂಟ್‌ಗಳಿಲ್ಲದಿರಬಹುದು. ಆದರೆ ವಿವಿಧ ಕಡೆ ವಿವಿಧ ರೀತಿಯಲ್ಲಿ ಸಾವಿರಾರು ಪ್ರತಿಭಟನೆಗಳು, ಪ್ರತಿರೋಧಗಳು ವ್ಯಕ್ತವಾಗುತ್ತಿವೆ. ಧರಣಿ, ಉಪವಾಸ ಸತ್ಯಾಗ್ರಹ, ಮುತ್ತಿಗೆ, ಕಾನೂನು ಹೋರಾಟ, ಸಶಸ್ತ್ರ ಹೋರಾಟ ಇತ್ಯಾದಿಗಳು ನಡೆಯುತ್ತಿವೆ. ಇವತ್ತಿಗೂ ಜಾರ್ಖಂಡದಲ್ಲಿ ಮಲ್ಟಿನ್ಯಾಷನಲ್ ಕಂಪನಿಯಾದ ಪಾಸ್ಕೋದ ಗಣಿ ಪ್ರಾಜೆಕ್ಟ್‌ಅನ್ನು ತಡೆಹಿಡಿದಿರುವುದು ಎರಡು ಪುಟ್ಟಹಳ್ಳಿಗಳ ಜನರು ಎಂಬುದನ್ನು ನಾವು ಮರೆಯಬಾರದು....

ಸರ್ಕಾರ ಇವತ್ತು ಜನದ್ರೋಹಿ ನೀತಿಗಳನ್ನು ಅನುಸರಿಸುತ್ತಿದೆ. ಇದರ ಬಗ್ಗೆ ಜನರಲ್ಲಿ ಅರಿವನ್ನು ಮೂಡಿಸುವುದು ಮತ್ತು ಹೋರಾಟದ ಮನೋಸ್ಥಿತಿಯನ್ನು ನಿರ್ಮಿಸುವುದು ಹೇಗೆ?

ಅದಕ್ಕೆ ನಾವು ನಮ್ಮ ಸಂವಿಧಾನದ ಆಶ್ರಯವನ್ನೇ ಪಡೆಯಬೇಕು. ನನ್ನ ಪ್ರಕಾರ ನಮ್ಮ ಸಂವಿಧಾನದ ಮುಖ್ಯ ಅಂಶ ಇರುವುದೇ **Directive principles of State policy** ಎಂಬ ಭಾಗದಲ್ಲಿ, ಈ ಭಾಗದ ಪ್ರಕಾರ ಭಾರತದ ಪ್ರಜೆಗಳಿಗೆ ಆರೋಗ್ಯ ಸೌಲಭ್ಯ, ಶಿಕ್ಷಣ, ಪೌಷ್ಠಿಕ ಆಹಾರ, ಉದ್ಯೋಗ ಮತ್ತು ರಕ್ಷಣೆಯನ್ನು ನೀಡುವುದು ಸರ್ಕಾರದ ಕರ್ತವ್ಯ. ಆದ್ದರಿಂದ ಜನರಲ್ಲಿ ಸರ್ಕಾರ ತನ್ನ ಈ ಕರ್ತವ್ಯವನ್ನು ಪಾಲಿಸುತ್ತಿಲ್ಲ ಎಂದು ಮನವರಿಕೆ ಮಾಡಿಕೊಡಬೇಕು. ಸಂವಿಧಾನವನ್ನು ಸರ್ಕಾರ ಪಾಲಿಸುತ್ತಿಲ್ಲ ಎಂದರೆ ಜನರನ್ನು ಒಗ್ಗೂಡಿಸುವುದು ಕಷ್ಟವಾಗಲಿಕ್ಕಿಲ್ಲ, ಆ ನಿಟ್ಟಿನಲ್ಲಿ ಮಾಧ್ಯಮಗಳೂ ತಮ್ಮ ಕರ್ತವ್ಯವನ್ನು ಪಾಲಿಸಬೇಕು.

ನೀವು ಮಾಜಿ ರಾಷ್ಟ್ರಪತಿ ವಿ.ವಿ.ಗಿರಿ ಅವರ ಮೊಮ್ಮಗ. ಉನ್ನತ ಶಿಕ್ಷಣ ಪಡೆದವರು. ನೀವು ಕೂಡ ಇತರೆ ಪತ್ರಕರ್ತರಂತಾಗುವ ಬದಲು ಗ್ರಾಮೀಣ ಪ್ರದೇಶದ ಜನರತ್ತ ನಿಮ್ಮ ಗಮನಹರಿಸಲು ಯಾಕೆ ನಿರ್ಧರಿಸಿದಿರಿ?

ಮೊದಲನೆಯದಾಗಿ ನನ್ನ ಪ್ರಕಾರ ನಮ್ಮ ದೇಶದ ಪತ್ರಿಕೋದ್ಯಮ ನಮ್ಮ ದೇಶದ ಸ್ವಾತಂತ್ರ ಸಂಗ್ರಾಮದ ಕೂಸು. ಅಂದರೆ ನಮ್ಮ ಪತ್ರಿಕೋದ್ಯಮ ನಮ್ಮ ದೇಶದ ಜನರ ಸ್ಥಿತಿಗತಿಗಳನ್ನು, ಆಶೋತ್ತರಗಳನ್ನು ಪ್ರತಿಬಿಂಬಿಸುವ ಒಂದು ಮಾರ್ಗ. ಆದ್ದರಿಂದ ನಾನು ನಮ್ಮ ದೇಶದ ಸಾಮಾನ್ಯ ಜನರ ಸಾಮಾನ್ಯ ಬದುಕಿನ ಬಗ್ಗೆ ಬರೆಯಲು ನಿರ್ಧರಿಸಿದೆ.

ಎರಡನೆಯದಾಗಿ ನಮ್ಮ ಮನೆಯಲ್ಲಿ ನಾವೆಂದೂ ರಾಜಕೀಯವನ್ನು ಒಂದು **bad word** ಎಂದು ಪರಿಗಣಿಸಿರಲಿಲ್ಲ, ಬದಲಾಗಿ ರಾಜಕೀಯ ಎಂಬುದು ಸಾಮಾನ್ಯ ಜನರ ಪರವಾಗಿ ಮಾಡುವ ಕ್ರಿಯೆ ಎಂದೇ ಭಾವಿಸಿದ್ದೆವು. ಜನರ ಬದುಕನ್ನು ರಾಜಕೀಯ ನೀತಿಗಳು ಎಲ್ಲ ತರಹದಲ್ಲೂ ತಾಗುವುದರಿಂದ ನಾನು ನಮ್ಮ ದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಗ್ರಾಮೀಣ ಜನರ ಬದುಕಿನ ಮೇಲೇ ನನ್ನ ಗಮನಹರಿಸಲು ನಿರ್ಧರಿಸಿದೆ.

ಮೂರನೆಯದಾಗಿ, ಇವತ್ತು ನಮ್ಮ ಪತ್ರಿಕಾರಂಗದಲ್ಲಾಗುತ್ತಿರುವುದನ್ನು ನೋಡಿದರೆ ನಾನು ಇತರರ ಹಾದಿಯನ್ನು ಅನುಸರಿಸಿದ್ದರೆ ನಾನೂ ಕಾರ್ಪೊರೇಟ್ ಕಂಪನಿಯೊಂದು ಹೇಳುವುದನ್ನೆಲ್ಲ ವರದಿ ಮಾಡುವ ಸ್ಟೆನೊ ಆಗಿರುತ್ತಿದ್ದೆ ಅಥವಾ ಅಂತಹ ಕಂಪನಿಗಳ ಹಿತಾಸಕ್ತಿಯನ್ನು ಪ್ರತಿನಿಧಿಸುವ ಓರ್ವ ವೇಶ್ಯೆ ಆಗಿರುತ್ತಿದ್ದೆ ಎಂದೆನಿಸುತ್ತದೆ.....

ಇವತ್ತು ಮುಖ್ಯವಾಹಿನಿಯಲ್ಲಿರುವ ಮಾಧ್ಯಮಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು?

ನಮ್ಮ ಪತ್ರಿಕಾರಂಗ ರಾಜಕೀಯ ಒತ್ತಡದಿಂದ ಮುಕ್ತವಾಗಿದೆ ನಿಜ. ಆದರೆ ಅದು ಲಾಭ ಎಂಬ ಬಲೆಯಲ್ಲಿ ಬಂಧಿ ಆಗಿದೆ. ಪ್ರತಿಯೊಂದು ಪತ್ರಿಕೆ ಮತ್ತು ಟಿವಿ ಚಾನೆಲ್‌ನ ಮಾಲೀಕರಿಗೆ ನಮ್ಮ ದೇಶದ ಸಾಮಾನ್ಯ ಜನರ ಹಿತಾಸಕ್ತಿಗಿಂತ ತಮ್ಮ ಲಾಭವೇ ಇವತ್ತು ಮುಖ್ಯವಾಗಿದೆ.

ಇನ್ನೊಂದು ಮುಖ್ಯ ವಿಚಾರ ಯಾವುದೆಂದರೆ ಇವತ್ತು ಮಾಧ್ಯಮಗಳೂ ಹೆಚ್ಚಿನ ಲಾಭ ತರುವ ಬೃಹತ್ ಕಂಪನಿಗಳಾಗಿರುವುದು. ಈ ಕಾರಣದಿಂದಲೇ ಇಂದು ರಾಜಕಾರಣಿಗಳು ಮತ್ತು ಬಿಸಿನೆಸ್‌ಮೆನ್‌ಗಳು ಪತ್ರಿಕೆಗಳನ್ನೋ, ಟಿವಿ ಚಾನೆಲ್‌ಗಳನ್ನೋ ಸ್ಥಾಪಿಸುತ್ತಿದ್ದಾರೆ. ಹಾಗೆಯೇ ಪತ್ರಿಕೆಗಳ ಮಾಲೀಕರೂ ರಾಜಕೀಯ ಮತ್ತು ಬಿಸಿನೆಸ್ ವಲಯವನ್ನು ಪ್ರವೇಶಿಸುತ್ತಿದ್ದಾರೆ. ಇವತ್ತು ಭಾರತದಲ್ಲಿ ಅತಿದೊಡ್ಡ ಮಾಧ್ಯಮ ಸಂಸ್ಥೆಯ ಮಾಲೀಕ ಬೇರೆ ಯಾರೂ ಅಲ್ಲ, ಅದು ಮುಖೇಶ್ ಅಂಬಾನಿ. ಆತ ಹಲವು ಪತ್ರಿಕೆಗಳ ಮತ್ತು ಹತ್ತಾರು ಭಾಷಾ ಚಾನೆಲ್‌ಗಳ ಒಡೆಯ. ಪ್ರಾಯಶಃ ಆತನಿಗೇ ತಾನು ಯಾವ ಯಾವ ಭಾಷೆಗಳ ಚಾನೆಲ್‌ಗಳನ್ನು ಹೊಂದಿದ್ದೇನೆ ಎಂಬುದೂ ಗೊತ್ತಿರಲಿಕ್ಕಿಲ್ಲ, ಆದರೆ ಇದರಲ್ಲಿ ಅಡಗಿರುವ ಅಪಾಯ ಯಾವುದೆಂದರೆ ಆತನ ಮಾಲೀಕತ್ವದ ಮಾಧ್ಯಮಗಳು ಆತನ ಯಾವ ಭ್ರಷ್ಟಾಚಾರದ ಬಗ್ಗೆಯೂ ವರದಿ ಮಾಡದೆ ಜನರನ್ನು ಅಂಧತ್ವದಲ್ಲಿ ಇಡುತ್ತವೆ. ಇದು ಹೀಗೆ ಮುಂದುವರೆದರೆ ನಮ್ಮ ಎಲ್ಲಾ ಮಾಧ್ಯಮಗಳು ನಮ್ಮ ದೇಶದಲ್ಲಿರುವ ಕೆಲವೇ ಸಾಹುಕಾರರ ಹಿತಾಸಕ್ತಿಗಳನ್ನು, ಆಶಯಗಳನ್ನು ಪ್ರತಿನಿಧಿಸುವ ಅಸ್ತ್ರಗಳಾಗುತ್ತವೆ.

ನಮ್ಮ ದೇಶದಲ್ಲಿ ಇವತ್ತಿಗೂ ಅರ್ಧಕ್ಕರ್ಧ ಜನ ಬಡತನದಿಂದಾಗಿ ಅಪೌಷ್ಠಿಕತೆಯಿಂದ, ಹಸಿವಿನಿಂದ ನರಳುತ್ತಿದ್ದಾರೆ. ಆದರೂ ನಮ್ಮ ಪ್ರಧಾನಿ ಮನಮೋಹನ್ ಸಿಂಗ್ ಅವರು ಇತ್ತೀಚೆಗೆ ಯೂರೋಪಿನ ದೇಶಗಳಿಗೆ ಬರೋಬ್ಬರಿ ಹತ್ತು ಬಿಲಿಯನ್ ಡಾಲರ್‌ಗಳ - ಅಂದರೆ 56,000 ಕೋಟಿ ರೂಪಾಯಿಗಳ - ನೆರವನ್ನು ನೀಡುವುದಾಗಿ ಘೋಷಿಸಿದ್ದಾರೆ. ಇದರ ಬಗ್ಗೆ ನಿಮ್ಮ ಅಭಿಪ್ರಾಯ?

ಅದೇ **56,000** ಕೋಟಿ ರೂಪಾಯಿಗಳಲ್ಲಿ ಭಾರತದ ಬಡಜನರಿಗೆ ಒಂದು ಇಡೀ ವರ್ಷ ಉಚಿತವಾಗಿ ಆಹಾರ ಧಾನ್ಯಗಳನ್ನು ನಮ್ಮ ಸರ್ಕಾರ ನೀಡಬಹುದಿತ್ತು....

"ನಿಮ್ಮೊಂದಿಗೆ ಇನ್ನೂ ಹೆಚ್ಚು ಸಮಯ ಕಳೆಯುವ ಇಷ್ಟವಿದ್ದರೂ ನಿಮ್ಮ ಎಲ್ಲಾ ಸಮಯವನ್ನು ತೆಗೆದುಕೊಳ್ಳಲು ನನಗಿಷ್ಟವಿಲ್ಲ, ಆದ್ದರಿಂದ ಇದನ್ನು ಇಲ್ಲಿಗೆ ನಿಲ್ಲಿಸೋಣ. ನಾಳೆ ನಿಮ್ಮ ಉಪನ್ಯಾಸಕ್ಕೆ ಬರುತ್ತೇನೆ...." ಎಂದೆ.

"ಹಾಗೇ ಆಗಲಿ. ನನಗೂ ಕೆಲಸ ಇದೆ. ಬರೆಯಬೇಕಿದೆ. ನಾಳೆ ಸಿಗೋಣ..." ಎಂದರು ಸಾಯಿನಾಥ್.

ಮಾರನೆದಿನ ಅವರ ಉಪನ್ಯಾಸಕ್ಕೆ ಹಾಜರಾದೆ. ಜನ ಕಿಕ್ಕಿರಿದಿದ್ದರು. ಸಾಯಿನಾಥ್ ಅವರು ಮಾತು ಮುಗಿಸಿದನಂತರ ಜನರೆಲ್ಲ ಎದ್ದು ನಿಂತು ಚಪ್ಪಾಳೆ ತಟ್ಟುವ ಮೂಲಕ ತಮ್ಮ ಅಭಿಮಾನವನ್ನು ವ್ಯಕ್ತಪಡಿಸಿದರು. ಆನಂತರ ಜನ ಅವರನ್ನು ಮುತ್ತಿದರು. ಅವರು ವಿಮಾನ ನಿಲ್ದಾಣವನ್ನು ತಲುಪಿ ಅವತ್ತೇ ಮುಂಬೈಗೆ ಹೋಗಬೇಕಿತ್ತು, ಅವರಿಗೆ ಬೈ ಹೇಳಿ ಅಲ್ಲಿಂದ ಹೊರಟೆ.

ಅವತ್ತೇ ರಾತ್ರಿ ಎಂಟೂವರೆಗೆ ಸಾಯಿನಾಥ್ ಫೋನ್ ಮಾಡಿದರು. "ಆಗಲೇ ಮುಂಬೈ ತಲುಪಿದಿರಾ?" ಎಂದೆ.

"ಇಲ್ಲ, ಈಗ ಫ್ಲೈಟ್ ಹತ್ತುತ್ತಿದ್ದೇನೆ. **It was nice meeting you again. Thank you**" ಅಂದರು.

"**Same here.** ಆದರೆ ಒಂದನ್ನು ನೆನಪಿಟ್ಟುಕೊಳ್ಳಿ. ನೀವು ಇನ್ನು ಮುಂದೆ ಕರ್ನಾಟಕದ ಗ್ರಾಮೀಣ ಪ್ರದೇಶಗಳಿಗೆ ಅಧ್ಯಯನ ಮಾಡಲು ಹೋದಾಗ ನಾನೂ ನಿಮ್ಮೊಂದಿಗೆ ಬರುತ್ತೇನೆ. ಓಕೆನಾ?" ಅಂದೆ.

"**That would be great. Take care**" ಎಂದರು....

ಹಾಳುಕೊಂಪೆಯಾದ ಹಂಪಿ ವಿವಿ

ವಿಧಾನಸೌಧದಿಂದ ರಾಜಭವನಕ್ಕೆ ಹೋದ ಕಡತಕ್ಕೆ ರಾಜ್ಯಪಾಲರು ಅಂಕಿತ ಹಾಕದೇ ಛೀಮಾರಿ ಹಾಕಿ ಕಳಿಸುವುದು ಮಾಮೂಲಿಯಾಗಿಬಿಟ್ಟಿದೆ. ಈ ಪಟ್ಟಿಗೆ ಕನ್ನಡ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಒಂದು ಕಡತವೂ ಇತ್ತೀಚೆಗೆ ಸೇರಿಕೊಂಡುಬಿಟ್ಟಿದೆ. ಹಂಪಿಯಲ್ಲಿರುವ ಕನ್ನಡ ವಿಶ್ವವಿದ್ಯಾಲಯಕ್ಕೆ ಎಚ್.ಎಂ.ಮಹೇಶ್ವರಯ್ಯ ಎಂಬ ಬಿಜೆಪಿ ಕ್ಯಾಂಡಿಡೇಟನ್ನು ಕುಲಪತಿಯನ್ನಾಗಿ ನೇಮಿಸುವುದು ಸರ್ಕಾರದ ಹುನ್ನಾರವಾಗಿತ್ತು, ಅದರಂತೆ ಮುಖ್ಯಮಂತ್ರಿ ಸದಾನಂದ ಗೌಡರು ಅಂತಿಮ ಅಂಕಿತಕ್ಕಾಗಿ ರಾಜ್ಯಪಾಲರ ಕಚೇರಿಗೆ ಕಡತ ಕಳಿಸಿದ್ದರು.


ರಾಜ್ಯಪಾಲರು ಎಂದಿನಂತೆ ಈ ಮಹೇಶ್ವರಯ್ಯ ಎಂಬ ಆಸಾಮಿಯ ಜಾತಕ ತರಿಸಿಕೊಂಡು ನೋಡಿದರೆ, ಆತ ಅಪ್ಪಟ ಬಿಜೆಪಿ ಕ್ಯಾಂಡಿಡೇಟು ಎಂಬುದನ್ನು ಬಿಟ್ಟರೆ ಕನ್ನಡ ವಿಶ್ವವಿದ್ಯಾಲಯವನ್ನು ಮುನ್ನಡೆಸಲು ಬೇಕಾದ ಯಾವುದೇ ಅರ್ಹತೆಗಳೂ ಕಂಡುಬರಲಿಲ್ಲ. ಬದಲಿಗೆ ಹಂಪಿ ವಿಶ್ವವಿದ್ಯಾಲಯವನ್ನು ಹಾಳುಕೊಂಪೆ ಮಾಡಲು ಬೇಕಾದ ಎಲ್ಲಾ ಸಾಮರ್ಥ್ಯಗಳೂ ಆತನಲ್ಲಿ ಕಂಡು ಬಂದವು. ಅಂದರೆ ಆತ ಕಾರ್ಯನಿರ್ವಹಿಸುತ್ತಿರುವ ಧಾರವಾಡ ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ ಕೆಲ ಅಕ್ರಮಗಳಲ್ಲಿ ಭಾಗಿಯಾಗಿರುವ ಆರೋಪ ಕಂಡುಬಂದವಂತೆ. ಅಷ್ಟಿಲ್ಲದಿದ್ದರೆ ಬಿಜೆಪಿಯವರು ಆ ಹೆಸರನ್ನು ಸೂಚಿಸುವ ಸಾಧ್ಯತೆಯೇ ಇರಲಿಲ್ಲ ಎಂಬುದು ಬೇರೆ ಮಾತು. ಈಗ ರಾಜ್ಯಪಾಲರು ಕಡತವನ್ನು ವಾಪಸ್ ಕಳಿಸಿರುವುದರಿಂದ ಮತ್ತೊಮ್ಮೆ ಬಿಜೆಪಿ ಸರ್ಕಾರಕ್ಕೆ ಮುಖಭಂಗವಾಗಿದೆ. ಆದರೆ ಯಾವ ಬಿಜೆಪಿ ಶೂರನೂ ಈ ಬಗ್ಗೆ ಚಕಾರವೆತ್ತಿಲ್ಲ. 'ಬಾಯಿ ಬಿಟ್ಟರೆ ಬಣ್ಣಗೇಡು' ಅಂತ ಒಂದು ಗಾದೆ ಮಾತಿನಂತೆ.

ಸಂಕ್ಷಿಪ್ತ ಹಿನ್ನೆಲೆ

ಕನ್ನಡ ವಿಶ್ವವಿದ್ಯಾಲಯಕ್ಕೆ ಈ ಹಿಂದೆ ಕುಲಪತಿಯಾಗಿದ್ದ ಮುರಿಗೆಪ್ಪನವರ ಅವಧಿ ಕಳೆದ ಫೆಬ್ರವರಿಯಲ್ಲಿ ಮುಕ್ತಾಯವಾಯಿತು. ಸಾಮಾನ್ಯವಾಗಿ ಕುಲಪತಿಯೊಬ್ಬರು ನಿವೃತ್ತರಾಗುವ ಮೂರು ತಿಂಗಳ ಮುಂಚೆಯೇ ಆ ಹುದ್ದೆಗೆ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗಬೇಕು. ಆದರೆ ರಾಜ್ಯದ ಆಡಳಿತ ಚುಕ್ಕಾಣಿ ಹಿಡಿದ ಮಂದಿಗೆ ಒಂದೋ ಜೈಲು ಚಿಂತೆ, ಇಲ್ಲವೇ ಬೇಯ್ಲ್ ಚಿಂತೆ. ಅಷ್ಟು ಸಾಲದೆಂಬಂತೆ ಈಗ ತಮ್ಮ ಸೀಟುಗಳನ್ನು ಉಳಿಸಿಕೊಳ್ಳೋ ಚಿಂತೆಯಲ್ಲಿ ಹೈರಾಣಾಗಿ ಹೋಗಿದ್ದಾರೆ. ಹೀಗಿರುವಾಗ ಕುಲಪತಿ ನೇಮಕ ವಿಚಾರ ಅಷ್ಟು ಮಹತ್ವ ಪಡೆದುಕೊಳ್ಳಬೇಕೆಂದರೆ ಹೇಗೆ ಸಾಧ್ಯ?

ಒಂದು ಆಶ್ಚರ್ಯದ ಸಂಗತಿಯೇನೆಂದರೆ, ಈ ಹಿಟ್ಲರ್‌ವಾದಿಗಳು ಎಷ್ಟೇ ಹೈರಾಣಾಗಿದ್ದರೂ ಕೂಡ ತಮ್ಮ ಹಿಡನ್ ಅಜೆಂಡಾ ಮಾತ್ರ ಮರೆಯುವುದಿಲ್ಲ. 'ಹುಲಿ ಬಡವಾದರೂ ಹುಲ್ಲು ಮೇಯೋದಿಲ್ಲ'. ಅದೇನಿದ್ದರೂ ಬೇಟೆಗಾಗಿ ಹೊಂಚುಹಾಕುತ್ತಿರುತ್ತದೆ ಅಷ್ಟೆ. ಅಂತೆಯೇ ಆರೆಸ್ಸೆಸ್ ಕೇಂದ್ರ ಕಚೇರಿ ಕೇಶವಕೃಪಾದಲ್ಲಿ ಇಂಥಾ ಹಿಡನ್ ಅಜೆಂಡಾ ಜಾರಿ ನಿರ್ದೇಶನಾಲಯವೊಂದು ಅನಧಿಕೃತವಾಗಿ ಚಾಲ್ತಿಯಲ್ಲಿದೆ. ಅದರ ನಿರ್ದೇಶನದಂತೆ ಕನ್ನಡ ವಿವಿಯ ಸಿಂಡಿಕೇಟ್‌ನಲ್ಲಿ ಶುದ್ಧ ನಾಲಾಯಕ್‌ಗಳನ್ನು ತುಂಬಿಸಿದ್ದಾರೆ. ಆ ಮೂಲಕ ಕನ್ನಡ ವಿವಿಯ ಧ್ಯೇಯೋದ್ದೇಶಗಳನ್ನೇ ಗಾಳಿಗೆ ತೂರಿದ್ದಾರೆ.

ಈಗ ಕುಲಪತಿ ನೇಮಕಾತಿಗೆಂದು ರಚನೆಯಾಗಿರುವ ಶೋಧನಾ ಸಮಿತಿ ಅದರ ಮುಂದುವರೆದ ಭಾಗ. ಈ ಸಮಿತಿಯಲ್ಲಿರುವ ಪ್ರಭೃತಿಗಳಾದರೂ ಎಂಥವರು. ಸಿಂಡಿಕೇಟ್‌ನ ಪ್ರತಿನಿಧಿಯಾಗಿ ಚಿದಾನಂದ ಮೂರ್ತಿ, ಸರ್ಕಾರದ ಪ್ರತಿನಿಧಿಯಾಗಿ ಕಮಲಾ ಹಂಪನಾ ಮತ್ತು ಯುಜಿಸಿ ಪ್ರತಿನಿಧಿ ಜೋಷಿ -ಇವರೇ ಮೂರು ಮಂದಿ.


ಚಿದಾನಂದ ಮೂರ್ತಿ


ಮಹೇಶ್ವರಯ್ಯ


ಇಲ್ಲಿ ಒಂದು ಪ್ರಮುಖ ಪ್ರಶ್ನೆ ಏಳುತ್ತದೆ. ಸರ್ಕಾರ ಈ ಶೋಧನಾ ಸಮಿತಿಯನ್ನು ರಚಿಸುವಾಗ ಯಾವ ಮಾನದಂಡಗಳನ್ನು ಅಳವಡಿಸಿತ್ತು?

ಚಿಮೂ ಯಾವ ಮುಚ್ಚುಮರೆಯೂ ಇಲ್ಲದೆ ತನ್ನ ನಿಜಬಣ್ಣ ತೋರಿಸಿಕೊಂಡು ಖ್ಯಾತ ಕೋಮುವಾದಿ ಚಿಂತಕರೆಂದು ನಾಡಿನಾದ್ಯಂತ ಮನೆಮಾತಾಗಿದ್ದಾರೆ. ಅವರನ್ನು ಈ ಸಮಿತಿಯಲ್ಲಿ ಕೂರಿಸಲಿಕ್ಕೆ ಅದೇ ಪ್ರಮುಖ ಕಾರಣ. ಹೋಗಲಿ, ಅವರಿಗೆ ಕನ್ನಡ ಖ್ಯಾತ ಚಿಂತಕರೆಂಬ ಖ್ಯಾತಿಯಾದರೂ ಇದೆ. ಇನ್ನು ಕಮಲಾ ಹಂಪನಾ ಕತೆಯೇನು? ಅವರು ಗುಂಪಿನಲ್ಲಿ ಗೋವಿಂದಾ ಅಂತ ಹಾಗೂ ಹೀಗೂ ಕನ್ನಡ ಲೇಖಕಿ ಎನಿಸಿಕೊಂಡವರು. ಆಸ್ಥಾನ ಸಾನ್ನಿಧ್ಯವನ್ನು ಕಾಪಾಡಿಕೊಂಡು ಬಂದಿರುವುದೇ ಬಹುಶಃ ಅವರ ಜೀವಮಾನದ ಸಾಧನೆ. ಅದು ಬಿಟ್ಟರೆ ಕನ್ನಡ ವಿವಿಯ ಕುಲಪತಿಯನ್ನು ನೇಮಕ ಮಾಡುವ ಅರ್ಹತೆ ಅವರಿಗೆ ಬಂದಿದ್ದಾದರೂ ಹೇಗೆ? ಆಸ್ಥಾನದಿಂದ ಹಾಗೂ ಕೋಮುವಾದಿ ಪಂಡಿತ ಚಿಮೂರಿಂದ ಬರಬಹುದಾದ ಸೂಚನೆಗಳಿಗೆ ಪ್ರತ್ಯುತ್ತರ ನೀಡದೆ ಗೋಣು ಆಡಿಸುವ ವಿಶೇಷ ಗುಣವೇ ಅವರನ್ನು ಈ ಸಮಿತಿಗೆ ತಂದು ಕೂರಿಸಿದೆಯೇ ಹೊರತು ಮತ್ಯಾವ ಕಾರಣಗಳೂ ಕಂಡುಬರುತ್ತಿಲ್ಲ. ಇನ್ನು ಯುಜಿಸಿ ಪ್ರತಿನಿಧಿಯಾಗಿ ಬಂದಿರುವ ಜೋಷಿ ಎಂಬ ಮಹನೀಯ ಯಾರು? ಆತನಿಗೂ ಈ ವಿವಿಗೂ ಎತ್ತಣಿಂದೆತ್ತಣ ಸಂಬಂಧ ಎಂಬುದಂತೂ ಒಂದು ರಹಸ್ಯವೇ ಸರಿ. ಇಂಥವರೆಲ್ಲಾ ಸೇರಿ ಕನ್ನಡ ವಿಶ್ವವಿದ್ಯಾಲಯದಂಥ ಒಂದು ಕನ್ನಡಪರ, ಜನಪರ ಸಂಸ್ಥೆಗೆ ಕುಲಪತಿಯನ್ನು ನೇಮಿಸಹೊರಟಿರುವುದು ಹಾಸ್ಯಾಸ್ಪದ ಮಾತ್ರವಲ್ಲ, ಅಪಾಯಕಾರಿಯೂ ಹೌದು.

ಕುಲಪತಿಯ ಹುದ್ದೆಗಾಗಿ ಈ ಸಮಿತಿ ಮೂರು ಹೆಸರುಗಳನ್ನು ಸೂಚಿಸಿದೆ. ಅವರೆಂದರೆ ಧಾರವಾಡದ ಕನ್ನಡ ಪ್ರಾಧ್ಯಾಪಕ ಎಚ್.ಎಮ್.ಮಹೇಶ್ವರಯ್ಯ, ಹಂಪಿ ವಿವಿಯಲ್ಲಿ ಹಾಲಿ ಪ್ರಭಾರ ಕುಲಪತಿಯಾಗಿರುವ ಹಿ.ಚಿ.ಬೋರಲಿಂಗಯ್ಯ ಮತ್ತು ಗುಲ್ಬರ್ಗ ವಿವಿಯ ಖಂಡೋಬ. ಕನ್ನಡ ವಿವಿ ಬಗ್ಗೆ ಅಲ್ಪಸ್ವಲ್ಪ ತಿಳಿವಳಿಕೆಯಿರುವ ಯಾರೇ ಆದರೂ ಈ ಪಟ್ಟಿಯನ್ನು ನೋಡಿದರೆ ಕನ್ನಡ ವಿವಿಗೆ ಒದಗಿಬಂದಿರುವ ದುರ್ಗತಿಯನ್ನು ಕಂಡು ಮರುಗದೆ ಇರಲಾರರು.

ಈ ಮೂರರಲ್ಲಿ ಒಂದು ಹೆಸರನ್ನು ಅಂತಿಮಗೊಳಿಸಬೇಕಿದ್ದ ಸದಾನಂದ ಗೌಡರಿಗೆ ತಮ್ಮ ಸ್ವಜಾತಿ ಬಂಧು ಬೋರಲಿಂಗಯ್ಯ ಮೇಲೆ ಹೆಚ್ಚು ಒಲವಿತ್ತಂತೆ. ಆದರೆ ಈ ವಿಷಯದಲ್ಲಿ ಮಧ್ಯ ಪ್ರವೇಶಿಸಿದ ಯಡ್ಡಿ ಲಿಂಗವಂತರನ್ನು ಮೂಲೆಗುಂಪು ಮಾಡ್ತಾ ಇದೀರಿ ಅಂತ ಬೊಬ್ಬೆ ಹಾಕಿದ್ದೇ ತಡ, ಈಗ ಇರೋ ತಾಪತ್ರಯಗಳನ್ನು ಪರಿಹರಿಸಿಕೊಂಡರೆ ಸಾಕು; ಇನ್ನು ಹೊಸ ಕಿತಾಪತಿ ಯಾಕೆ ಅಂತ ಮಹೇಶ್ವರಯ್ಯನ ಹೆಸರನ್ನೇ ಶಿಫಾರಸ್ಸು ಮಾಡಿ ಕಳಿಸಿದ್ದಾರೆ ಎಂದು ಅಧಿಕಾರವಲಯಗಳಲ್ಲಿ ಗುಸುಗುಸು ಕೇಳಿಬಂದಿದೆ.

ಈ ಮಹೇಶ್ವರಯ್ಯನಿಗೆ ಚಿಮೂ, ಯಡ್ಡಿ ಜೊತೆ ಜಾತಿಬಾಂಧವ್ಯ ಹಾಗೂ ಆರೆಸ್ಸೆಸ್ ಜೊತೆ ನೀತಿಬಾಂಧವ್ಯ. ಕುಲಪತಿ ಹುದ್ದೆ ಹಿಡಿಯಲು ಏನೆಲ್ಲಾ ಲಾಬಿ ಮಾಡಿದ್ದ ಆಸಾಮಿಗೆ ರಾಜ್ಯಪಾಲರ ಕಠಿಣ ಕ್ರಮದಿಂದ ಈಗ ತೀವ್ರ ನಿರಾಶೆಯಾಗಿದೆ.


ಕಮಲಾ ಹಂಪನಾ


ಬೋರಲಿಂಗಯ್ಯ

ಕಾದಿದೆ ಬಿಟ್ಟಿ ಮನರಂಜನೆ!

ಈಗ ಕುಲಪತಿ ರೇಸಿನಲ್ಲಿ ಮುಂಚೂಣಿಯಲ್ಲಿರುವ ಬೋರಲಿಂಗಯ್ಯ ಹಾಲಿ ಇನ್‌ಚಾರ್ಜ್‌ನಲ್ಲಿರುವ ಕುಲಪತಿ. ಇವರ ಆಯ್ಕೆಯಿಂದ ಕನ್ನಡ ವಿಶ್ವವಿದ್ಯಾಲಯಕ್ಕೆ ಹೆಚ್ಚಿನ ಲಾಭವಿಲ್ಲ ಎಂಬುದೇನೋ ನಿಜ. ಆದರೆ ಇವರು ಆರೆಸ್ಸೆಸ್ ಗರಡಿಯಲ್ಲಿ ಪಳಗಿದ ಪಟುವೇನಲ್ಲ ಎಂಬುದಷ್ಟೇ ಸಮಾಧಾನದ ಸಂಗತಿ. ಅದು ಬಿಟ್ಟರೆ ಹಂಪಿ ವಿವಿಯಲ್ಲಿ ಇತ್ತೀಚೆಗೆ ತಲೆಯೆತ್ತಿರುವ ಕೀಳು ಗುಂಪು ರಾಜಕೀಯದಲ್ಲಿ ಇವರ ಗುಂಪೂ ಸಕ್ರಿಯವಾಗಿದೆ.

ಅದಕ್ಕಿಂತ ಮುಖ್ಯವಾದ ಸಂಗತಿಯೊಂದಿದೆ. ಅದು ಹಾಲಿ ವಿವಿಯ ರಿಜಿಸ್ಟ್ರಾರ್ ಆಗಿರುವ ಮಂಜುನಾಥ ಬೇವಿನಕಟ್ಟಿ ಹಾಗು ಬೋರಲಿಂಗಯ್ಯನವರ ನಡುವಿನ ಕಚ್ಚಾಟಕ್ಕೆ ಸಂಬಂಧಿಸಿದ್ದು. ಈ ಮಂಜುನಾಥ ಬೇವಿನಕಟ್ಟಿ ರಿಜಿಸ್ಟ್ರಾರ್ ಹುದ್ದೆಗೇರಿದ್ದೇ ಶ್ರೀರಾಮುಲು ಕೃಪೆಯಿಂದ ಎಂಬುದನ್ನು ಹಂಪಿಯಲ್ಲಿರುವ ಯಾವ ಕಲ್ಲನ್ನು ಕೇಳಿದರೂ ತಿಳಿಯುತ್ತದೆ. ರಿಜಿಸ್ಟ್ರಾರ್ ಹುದ್ದೆಗೇರಿರುವ ಈ ಬೇವಿನಕಟ್ಟಿಯ ಏಕೈಕ ಅರ್ಹತೆ ಏನು ಗೊತ್ತೆ? ಆತ ಸಾಕ್ಷಾತ್ ಶ್ರೀರಾಮುಲುನ ಸ್ವಜಾತಿ ಬಂಧು!

ಇನ್ನು ಇವರಿಬ್ಬರೂ ಕಚ್ಚಾಡಿಕೊಂಡು ಪರಸ್ಪರ ಮಾತು ಬಿಟ್ಟು ಯಾವುದೋ ಕಾಲವಾಗಿದೆ. ಹಿ.ಚಿ.ಬೋ ಪ್ರಭಾರ ಕುಲಪತಿಯಾದ ನಂತರ ಈತ ಕುಲಪತಿ ಕಚೇರಿಯ ಕಡೆ ಒಮ್ಮೆಯಾದರೂ ತಲೆ ಹಾಕಿಲ್ಲವಂತೆ. ಇವರಿಬ್ಬರ ನಡುವಿನ ಸಂಬಂಧ ಏನಿದ್ದರೂ ಪತ್ರ ವ್ಯವಹಾರಕ್ಕೆ ಮಾತ್ರ ಸೀಮಿತ. ಪರಿಸ್ಥಿತಿ ಹೀಗಿರುವಾಗ ಕನ್ನಡ ವಿವಿಯ ಕಾರ್ಯಗಳು ಸುಸೂತ್ರವಾಗಿ ನಡೆಯುವುದು ಕನಸಿನ ಮಾತು. ಇವರ ಸಣ್ಣತನದ ಕಚ್ಚಾಟಗಳಿಂದಾಗಿ ಶೀಘ್ರದಲ್ಲೇ ಕರ್ನಾಟಕಕ್ಕೆ ಮತ್ತೊಂದು ಪ್ರಭುದೇವ್ ಹಾಗೂ ಮೈಲಾರಪ್ಪ ಜೋಡಿ ಸಿಗಲಿದೆ. ಬಿಟ್ಟಿ ಮನರಂಜನೆಯೇನೋ ಸಿಗುತ್ತದೆ ನಿಜ; ಆದರ ಜೊತೆ ನಾಡಿನ ಮಾನ ಮರ್ಯಾದೆಯೂ ಹರಾಜಾಗುತ್ತಲ್ಲಾ? ಅದಕ್ಕೇನು ಮಾಡ್ತೀರಿ?

ವಿಧಾನಸೌಧಕ್ಕೆ ಹಿಡಿದ ಭೂತ ಕ್ರಮೇಣ ರಾಜ್ಯದ ನಾನಾ ಕ್ಷೇತ್ರಗಳಿಗೆ ವಿಸ್ತರಿಸುತ್ತಿದೆ. ಅದರ ಒಂದು ಪ್ರಮುಖ ಗುರಿ ಶಿಕ್ಷಣ ಕ್ಷೇತ್ರ, ಶಾಲಾಮಕ್ಕಳ ಪಠ್ಯವನ್ನು ಹೊಕ್ಕ ಈ ಭೂತ ಮುಗ್ಧ ಮಕ್ಕಳ ಮನಸ್ಸಿಗೆ ಕೋಮುವಿಷ ಉಣಿಸುತ್ತಿದೆ. ವಿಶ್ವವಿದ್ಯಾಲಯಗಳಿಗೂ ಈ ಭೂತ ಲಗ್ಗೆಯಿಟ್ಟಿದೆ. ಅದರ ಭಾಗವೇ ಕನ್ನಡ ವಿವಿಯ ಮೇಲಿನ ದಾಳಿ. ಇಲ್ಲಿನ ಹಲವು ಪ್ರಗತಿಪರ ಚಿಂತಕರು ಕನ್ನಡ ನಾಡಿನ ಸಾಕ್ಷಿಪ್ರಜ್ಞೆಯಾಗಿ ದುಡಿಯುತ್ತಾ ನಾಡಿನ ಮುಂದಿನ ಸವಾಲುಗಳಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಗಂಭೀರ ಅಧ್ಯಯನದಲ್ಲಿ ತೊಡಗಿಸಿಕೊಂಡಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ಈ ಭೂತ ಗುರಿ ಮಾಡಿರುವುದು ಇಂಥಾ ಪ್ರಗತಿಪರರನ್ನೇ. ಅದರ ಭಾಗವಾಗಿಯೇ ಭ್ರಷ್ಟರನ್ನು ಹಾಗೂ ತಮ್ಮ ತಾಳಕ್ಕೆ ತಕ್ಕಂತೆ ಕುಣಿಯುವವರನ್ನು ಆಯಕಟ್ಟಿನ ಜಾಗಕ್ಕೆ ತಂದು ಕೂರಿಸಲು ಇನ್ನಿಲ್ಲದ ಸಂಚುಗಳು ನಡೆಯುತ್ತಿವೆ. ಅಂದಹಾಗೆ ಈ ಭೂತಕ್ಕೂ ಒಂದು ಕೇಂದ್ರ ಕಚೇರಿಯಿದೆ. ಅದಕ್ಕೆ ಕೇಶವಕೃಪಾ ಎಂಬ ಹೆಸರೂ ಇದೆ.

ದೊಡ್ಡಿಪಾಳ್ಯ ನರಸಿಂಹಮೂರ್ತಿ

ಇನ್ನು ಈ ಸ್ಪರ್ಧೆಯಲ್ಲಿರುವ ಎರಡನೇ ವ್ಯಕ್ತಿಯೇ ಹಿ.ಚಿ.ಬೋರಲಿಂಗಯ್ಯ ಮಹೇಶ್ವರಯ್ಯನ ಹೆಸರು ತಿರಸ್ಕೃತಗೊಂಡಿದ್ದರಿಂದ ಅವರ ಉತ್ಸಾಹ ಹೆಚ್ಚಾಗಿಬಿಟ್ಟಿದೆ. ಶತಾಯಗತಾಯ ಕುಲಪತಿಯಾಗಲೇಬೇಕೆಂದು ತೀರ್ಮಾನಿಸಿ ಅವರು ಬೆಂಗಳೂರಿನಲ್ಲಿ ಠಿಕಾಣಿ ಹೂಡಿದ್ದಾರೆ. ಪಟ್ಟಿಯಲ್ಲಿರುವ ಮತ್ತೊಬ್ಬ ವ್ಯಕ್ತಿ ಖಂಡೋಬಾರಿಗೂ ಈ ಕನ್ನಡ ವಿವಿಗೂ ಮೊದಲಿನಿಂದಲೂ ಅಂಥಾ ಯಾವ ಸಂಬಂಧವೂ ಇಲ್ಲ. ಇವರಲ್ಲಿ ಕನ್ನಡ ವಿಶ್ವವಿದ್ಯಾಲಯವನ್ನು ಮುನ್ನಡೆಸುವ ಯಾವ ಅರ್ಹತೆಯನ್ನು ಕಂಡುಹಿಡಿದಿದೆ ಎಂಬುದು ಕೇಶವಕೃಪಾದ ಮಂತ್ರವಾದಿಗಳಿಗೆ ಮಾತ್ರ ಅರ್ಥವಾಗುವಂಥದ್ದು.


ಒಂದೆಡೆ ಕನ್ನಡನಾಡು ನುಡಿಗಳು ಗಂಭೀರ ಸವಾಲುಗಳನ್ನು ಎದುರಿಸುತ್ತಿವೆ. ಕನ್ನಡ ಶಾಲೆಗಳಿಗೆ ಕಾಯಕಲ್ಪ ಒದಗಿಸಬೇಕಿದ್ದ ಸರ್ಕಾರವೇ ಮುಂದೆನಿಂತು ಶಾಲೆಗಳಿಗೆ ಬೀಗಮುದ್ರೆ ಜಡಿಯುತ್ತಿದೆ. ಸಮಕಾಲೀನ ಜಗತ್ತಿನಲ್ಲಿ ಉತ್ತರವಿಲ್ಲದ ಹಲವು ಸಂಕೀರ್ಣ ಸಮಸ್ಯೆಗಳಿವೆ. ಇಂಥ ಸನ್ನಿವೇಶದಲ್ಲಿ ಹೊಸ ತಲೆಮಾರಿನ ಲೇಖಕರಿಗೆ ಚಿಂತಕರಿಗೆ ಹೊಸ ಸ್ಫೂರ್ತಿ ಹಾಗೂ ದಾರಿದೀಪವಾಗಬಲ್ಲಂತಹ ಹಲವು ಅಮೂಲ್ಯ ಅಧ್ಯಯನಗಳನ್ನು ಕೈಗೊಂಡು, ಹಲವು ಮಹತ್ವದ ಕೃತಿಗಳನ್ನು ಹೊರತಂದ ಕನ್ನಡ ವಿವಿಯ ಮುಂದೆ ಮತ್ತಷ್ಟು ಗಂಭೀರವಾದ ಸವಾಲುಗಳಿವೆ. ಅಂಥಾ ಸಂದರ್ಭದಲ್ಲಿ ಈ ವಿವಿಯನ್ನು ಮುನ್ನಡೆಸಲು ನಾಡುನುಡಿಗಳ ಬಗ್ಗೆ ಬದ್ಧತೆ ಹಾಗೂ ಪ್ರತಿಭೆಯಿರುವ ವ್ಯಕ್ತಿಯೊಬ್ಬರನ್ನು ಆಯ್ಕೆ ಮಾಡಿಕೊಳ್ಳಲಾಗುತ್ತಿಲ್ಲವೆಂದರೆ ಏನು ಹೇಳಬೇಕು? ಈ ಕರ್ನಾಟಕದ ಬೌದ್ಧಿಕ ಲೋಕಕ್ಕೆ ಇಂಥಾ ಗತಿಹೀನ ಸ್ಥಿತಿ ಬಂದಿದೆಯೆ?

ಆದರೆ ಪರಿಸ್ಥಿತಿ ಅಂಥಾ ಶೋಚನೀಯ ಸ್ಥಿತಿ ತಲುಪಿಲ್ಲ ಎಂಬುದೇ ಸಮಾಧಾನಕರ ಸಂಗತಿ. ನಮ್ಮ ನಾಡಿನಲ್ಲಿ ಈ ವಿವಿಯ ಸಾರಥಿಯಾಗಲು ಅರ್ಹತೆಯಿರುವ ಹಲವಾರು ಗಣ್ಯರಿದ್ದಾರೆ. ಕೆ.ವಿ.ನಾರಾಯಣ, ಎಚ್.ಎಸ್.ಶಿವಪ್ರಕಾಶ್, ಅರವಿಂದ ಮಾಲಗತ್ತಿ, ಚಿನ್ನ ಗೌಡ, ಬಸವರಾಜ ಕಲ್ಗುಡಿ, ಟಿ.ಆರ್.ಚಂದ್ರಶೇಖರ, ರಹಮತ್ ತರಿಕೆರೆ ಮುಂತಾದವರ ಉದ್ದನೆಯ ಪಟ್ಟಿಯೇ ಇದೆ. ನಾಡುನುಡಿಯ ಬಗ್ಗೆ ಅಪಾರ ಕಾಳಜಿ ಹಾಗೂ ಬದ್ಧತೆಗಳಿಂದ ದುಡಿಯುತ್ತಿರುವ ಈ ಮೇಧಾವಿಗಳನ್ನು ಪರಿಗಣನೆಗೂ ತೆಗೆದುಕೊಳ್ಳದಿರಲು ಕಾರಣವೇನೆಂಬುದು ಅಂಥಾ ನಿಗೂಢ ಸಂಗತಿಯೇನಲ್ಲ, ಕೇಶವಕೃಪಾದ ಮಂತ್ರವಾದಿಗಳ ಕೈವಾಡವನ್ನು ಹೊರತುಪಡಿಸಿ ಬೇರೆ ಯಾವ ಘನಕಾರಣಗಳೂ ಸಿಗುವುದಿಲ್ಲ.

ಆರೆಸ್ಸೆಸ್‌ನ ಹಿಟ್ಲರ್ ಸಂತತಿ ಒಂದೊಂದೇ ಕ್ಷೇತ್ರವನ್ನು ಆವರಿಸುತ್ತಾ ಅದು ಕ್ರಮೇಣ ಶಿಕ್ಷಣ ಕ್ಷೇತ್ರವನ್ನು ಆವರಿಸಿ, ಶಾಲಾ ಪಠ್ಯಪುಸ್ತಕಗಳಿಗೂ ಒಕ್ಕರಿಸಿ ನಾಳೆ ಪ್ರಜೆಗಳಾಗಲಿರುವ ಎಳೆಯ ಕಂದಮ್ಮಗಳ ಮುಗ್ಧ ಮನಸ್ಸಿನಲ್ಲಿ ಕೋಮು ವಿಷಬೀಜ ಬಿತ್ತನೆ ಪ್ರಾರಂಭಿಸಿದೆ. ಹಾಗೇ ವಿಶ್ವವಿದ್ಯಾಲಯಗಳನ್ನು ಭ್ರಷ್ಟರ, ಜಾತಿವಾದಿಗಳ, ಕೋಮುವಾದಿಗಳ ಕೂಪವನ್ನಾಗಿಸುವತ್ತ ದಾಪುಗಾಲಿಟ್ಟಿದೆ. ತಮ್ಮ ಹೀರೋ ಹಿಟ್ಲರನ ಅಂತ್ಯ ಹೇಗಾಯ್ತು ಎಂಬುದನ್ನು ಅರಿಯಲು ಈ ಪಾಖಂಡಿಗಳು ಚರಿತ್ರೆಯ ಪುಟಗಳನ್ನೊಮ್ಮೆ ತಿರುವಿಹಾಕುವುದು ಒಳ್ಳೆಯದು. ಕನ್ನಡದ ನೆಲದಲ್ಲೂ ಅಂಥಾ ಚರಿತ್ರೆ ಮರುಕಳಿಸಲಿದೆ ಎಂಬ ಗಟ್ಟಿ ನಂಬಿಕೆ ನಮ್ಮದು.

ಪ್ರಿಯಕೃಷ್ಣ ಮೇಲಿನ ದಾಳಿಗೆ ಯಾರ ಕುಮ್ಮಕ್ಕು?

ಗಂಗೊಂಡನಹಳ್ಳಿಯಲ್ಲಿ ಸೋಮಣ್ಣನ ಬಂಟರ ಅಟ್ಟಹಾಸ


ಶಾಸಕ ಪ್ರಿಯಕೃಷ್ಣ

ಗೋವಿಂದರಾಜನಗರದ ಶಾಸಕ ಪ್ರಿಯಕೃಷ್ಣರ ಗನ್‌ಮನ್ ಸೊಂಟದಲ್ಲಿದ್ದ ರಿವಾಲ್ವರ್ ಹೊರತೆಗೆಯದೆ ಹೋಗಿದ್ದರೆ ಉರುಳುತ್ತಿದ್ದುದು ಯಾರ ಹೆಣ?

ದಾಳಿಯಿಟ್ಟ ಆ ನೂರು ಮಂದಿ ಕೊಲ್ಲಲು ಬಂದಿದ್ದು ಶಾಸಕ ಪ್ರಿಯಕೃಷ್ಣರನ್ನೋ ಅಥವಾ ಗಂಗೊಂಡನಹಳ್ಳಿಯ ಕಾಂಗ್ರೆಸ್ ನಾಯಕ ನಯಾಜ್‌ರನ್ನೋ...? ಗೋರಿಪಾಳ್ಯದ ಗ್ಯಾಂಗ್‌ವಾರ್ ಈಗ ಗಂಗೊಂಡನಹಳ್ಳಿಗೆ ಕಾಲಿಟ್ಟಿದೆಯೆ? ವಿಜಯನಗರದ ಶಾಸಕ ಕೃಷ್ಣಪ್ಪನವರ ಮೇಲೆ ಜಿದ್ದಿಗೆ ಬಿದ್ದು ಮಂತ್ರಿ ಸೋಮಣ್ಣ ಹುಟ್ಟುಹಾಕಿದ ಪಾತಕ ಕೂಟ ಕಳೆದ ಜೂನ್ 25 ರಂದು ಏಕಾಏಕಿ ಶಾಸಕ ಪ್ರಿಯಕೃಷ್ಣರ ಮೇಲೆ ಮುಗಿಬೀಳಲು ನಡೆಸಿದ ತಯಾರಿಯಾದರೂ ಎಂಥಾದ್ದು?

ಸದ್ಯ ಇಂಥ ಅನೇಕ ಗುಮಾನಿ-ಅನುಮಾನಗಳೆಲ್ಲ ವಿಜಯನಗರದ ಸೆರಗಿನ ಗಂಗೊಂಡನಹಳ್ಳಿ ಎಂಬ ಮುಸ್ಲಿಂ ಬಾಹುಳ್ಯದ ಸಂದಿಗೊಂದಿಗಳಲ್ಲಿ ಇವತ್ತಿಗೂ ಹೊಗೆಯಾಡುತ್ತಿವೆಯೆಂದರೆ ಅದಕ್ಕಿರುವ ಕಾರಣಗಳು ಒಂದೆರಡಲ್ಲ. ಶಾಸಕ ಪ್ರಿಯಕೃಷ್ಣರ ಮೇಲೆ ದಾಳಿಗೈದ ಗಂಗೊಂಡನಹಳ್ಳಿಯ ಮೆಕ್ಕಾ ಮಸೀದಿಯ ಅಧ್ಯಕ್ಷ ರಫೀಕ್ ಅಹ್ಮದ್ ಎಂಬ ಹಳೇ ರೌಡಿ ಷೀಟರ್, ಆತನ ಸಹಚರ ಸಿರಾಜ್ ಎಂಬ ಪುಡಿರೌಡಿ, ಇವರಿಗೆ ಸಾತ್ ಕೊಟ್ಟ ಮನ್ಸೂರ್ ಎಂಬ ಲ್ಯಾಂಡ್ ಡೀಲರ್, ಇನ್ನೊಬ್ಬ ಮರಿರೌಡಿ ತನ್ನು ಮತ್ತು ಗಂಗೊಂಡನಹಳ್ಳಿಯ ಮೀಟರ್ ಬಡ್ಡಿ ರಾಣಿ ಮುಮ್ತಾಜ್ ಎಂಬ ಘಟವಾಣಿ ಹೆಂಗಸನ್ನು ಎತ್ತಿಕಟ್ಟಿದ್ದು, ಛೂಬಿಟ್ಟಿದ್ದು ಇವತ್ತಿಗೂ ಮೇವು ಹಾಕುತ್ತಲೇ ಇರುವುದು ವಿಜಯನಗರದ ವೀರಪುತ್ರ ಸೋಮಣ್ಣ!


ಇಂಥದೊಂದು ದುಷ್ಟಕೂಟದ ವಿರುದ್ಧ ಹೋರಾಡಬೇಕಾದ ಅನಿವಾರ್ಯಕ್ಕೆ ಸಿಲುಕಿದ ಗಂಗೊಂಡನಹಳ್ಳಿಯ ಕಾಂಗ್ರೆಸ್ ಮುಖಂಡ ನಯಾಜ್ ಹೇಳಿಕೇಳಿ ಶಾಸಕ ಕೃಷ್ಣಪ್ಪನವರ ನಂಬಿಕಸ್ಥ ಅನುಯಾಯಿ ಮತ್ತು ಸಭ್ಯ. ಗಂಗೊಂಡನಹಳ್ಳಿ ಎಂದರೆ ಅಕ್ಕಪಕ್ಕದ ಚಂದ್ರಾಲೇಔಟ್, ನಾಗರಬಾವಿ, ನಾಯಂಡಹಳ್ಳಿ, ರಾಜರಾಜೇಶ್ವರಿನಗರ, ಆರ್‌ಪಿಸಿ ಲೇಔಟ್ ಇತ್ಯಾದಿ ಏರಿಯಾಗಳ ಪಾಲಿಗೆ 'ಮಿನಿಗೋರಿಪಾಳ್ಯ'ವಿದ್ದಂತೆ. ಸ್ಕ್ರ್ಯಾಪ್ ದಂಧೆ, ಗುಜರಿ, ಕದ್ದಕಾರುಗಳ ಬಿಡಿಭಾಗಗಳು, ಚಿಂದಿಬಟ್ಟೆ


ಎಂ. ಕೃಷ್ಣಪ್ಪ

ಹೀಗೆ ಪುಡಿರೌಡಿಗಳಿಂದ ಹಿಡಿದು ರೌಡಿಷೀಟರುಗಳ ತನಕ ಅನೇಕಾನೇಕ ದಂಧೆ-ಡೀಲುಗಳ ಭಯಾನಕ ಕೊಂಪೆಯಂತೆ ತಲೆಎತ್ತಿದ ಗಂಗೊಂಡನಹಳ್ಳಿಗೆ ಕುಖ್ಯಾತಿ ಆವರಿಸಿಕೊಂಡಿದ್ದು 2002ರಲ್ಲಿ.

ಆಗ ಚಂದ್ರಾಲೇಔಟ್ ಪೊಲೀಸ್ ಠಾಣೆಗೆ ಇನ್ಸ್‌ಪೆಕ್ಟರ್ ಆಗಿದ್ದದ್ದು ರೌಡಿಗಳ ಪಾಲಿಗೆ ಸಿಂಹಸ್ವಪ್ನರೆಂದೇ ಹೆಸರಾಗಿದ್ದ ರೇವಣ್ಣ. ಯಾರೋ ಕಳ್ಳರನ್ನು ಹಿಡಿಯಲು ಬಂದು ರಸ್ತೆಯುದ್ದಕ್ಕೂ ಗ್ಯಾಂಗ್‌ಕಟ್ಟಿ ನಿಂತಿದ್ದ ಪಡ್ಡೆಗಳನ್ನು ಚದುರಿಸಲು ಯತ್ನಿಸಿದ ಇನ್ಸ್‌ಪೆಕ್ಟರ್ ರೇವಣ್ಣರ ಮೇಲೆ ಸರಿಸುಮಾರು ಐನೂರು ಮಂದಿಯಿದ್ದ ದುಷ್ಕರ್ಮಿಗಳ ಹಿಂಡು ಹಿಂಸೆಗಿಳಿಯಿತು. ಗಲಭೆಯಲ್ಲಿ ರೇವಣ್ಣನವರ ಪೊಲೀಸ್ ಜೀಪನ್ನೆ ಸುಟ್ಟು ಹಾಕಿದರು. ಆವತ್ತು ರಿವಾಲ್ವರ್ ಇಲ್ಲದೆ ಹೋಗಿದ್ದರೆ ಇನ್ಸ್‌ಪೆಕ್ಟರ್ ರೇವಣ್ಣ ಬದುಕುಳಿಯುವುದೇ ಕಷ್ಟವಾಗಿತ್ತು. ಹತ್ತಾರು ರೌಂಡ್ ಗುಂಡು ಹಾರಿಸಿ ಬಚಾವಾಗಿ ಬಂದ ರೇವಣ್ಣರ ಪೊಲೀಸ್ ಪಡೆ ಆವತ್ತು ಅಕ್ಷರಶಃ ಮೃತ್ಯು ಸನ್ನಿಧಿಯನ್ನು ಕಂಡಿತ್ತು.

ಆವತ್ತಿನ ಗಂಗೊಂಡನಹಳ್ಳಿಯ ಹಿಂಸಾಕಾಂಡದ ಪ್ರಮುಖ ಆರೋಪಿಯೇ ಇವತ್ತು ಶಾಸಕ ಪ್ರಿಯಕೃಷ್ಣರ ಗನ್‌ಮನ್‌ನಿಂದ ರಿವಾಲ್ವರ್ ದರ್ಶನ ಮಾಡಿಸಿಕೊಂಡ ರಫೀಕ್ ಅಹ್ಮದ್ ಅಲಿಯಾಸ್ ಹಾಜಿ ರಫೀಕ್. ಈತ ಗಂಗೊಂಡನಹಳ್ಳಿಯ ಹಳೆಯ ಮತ್ತು ಮೊಟ್ಟಮೊದಲ ಮಸೀದಿಯಾದ ಮೆಕ್ಕಾ ಮಸೀದಿಯ ಹಾಲಿ ಅಧ್ಯಕ್ಷ. ಆವತ್ತು ಇನ್ಸ್‌ಪೆಕ್ಟರ್ ರೇವಣ್ಣನವರ ಪೊಲೀಸ್ ಪಡೆಯ ವಿರುದ್ಧ ಈತ ದಾಂಧಲೆ ಎಬ್ಬಿಸಿದ್ದರ ಹಿಂದಿದ್ದದ್ದು ತಾನು ಪೊಲೀಸರ ವಿರುದ್ಧ ಸೆಣಸಾಡಿದ ವೀರನೆಂದು ಫೋಜು ಕೊಡುವುದು ಮತ್ತು ತಾನೇ ಮಸೀದಿಗೆ ಅಧ್ಯಕ್ಷನಾಗಿ ಗೆಲ್ಲುವುದು!



ರೌಡಿ ರಕ್ಷಕ ಸೋಮಣ್ಣ

ಜೂನ್ 25 ರ ಸೋಮವಾರ ಬೆಳಗ್ಗೆ ನಡೆದದ್ದು ಇದೇ ರಫೀಕನ ದೊಂಬಿ ಕಿತಾಪತಿ. ಗಂಗೊಂಡನಹಳ್ಳಿ ಒಳಪಡುವುದು ಶಾಸಕ ಪ್ರಿಯಕೃಷ್ಣರ ಗೋವಿಂದರಾಜನಗರ ಕ್ಷೇತ್ರಕ್ಕೆ. ಇಲ್ಲಿನ ಮುಖ್ಯ ರಸ್ತೆಯ ಮೆಕ್ಕಾಮಸೀದಿಗೆ ಅನತಿದೂರದಲ್ಲೇ ಸರ್ಕಾರಿ ಉರ್ದು ಶಾಲೆಯನ್ನು ಕಟ್ಟಿಸುತ್ತಿದ್ದಾರೆ. ಆವತ್ತು ಶಾಸಕ ಪ್ರಿಯಕೃಷ್ಣ ಇದೇ ಶಾಲೆಯ ಸರಿಸುಮಾರು ನೂರು ಮಕ್ಕಳಿಗೆ ತಲಾ 2 ಸಾವಿರ ರೂಪಾಯಿಯಂತೆ ತಮ್ಮ ಸ್ವಂತ ಹಣವನ್ನು ಸ್ಕಾಲರ್‌ಶಿಪ್ ಆಗಿ ವಿತರಿಸುವ ಕಾರ್ಯಕ್ರಮವಿತ್ತು. ಜೊತೆಗೆ ಮಾರೇನಹಳ್ಳಿಯ ಮಾಜಿ ಕೌನ್ಸಿಲರ್ ರಾಮಪ್ಪ, ಹೊಸಳ್ಳಿಯ ಶ್ರೀನಾಥ, ಅತ್ತಿಗುಪ್ಪೆಯ ದೊಡ್ಡಣ್ಣ ಮುಂತಾದ ಹತ್ತಾರು ಮಂದಿ ಕಾಂಗ್ರೆಸ್ ಕಾರ್ಯಕರ್ತರು ಪ್ರಿಯಕೃಷ್ಣರ ಜೊತೆ ಗಂಗೊಂಡನಹಳ್ಳಿಗೆ ಬಂದಿದ್ದರು.

ಹೀಗೆ ಗಂಗೊಂಡನಹಳ್ಳಿಗೆ ಬಂದ ಪ್ರಿಯಕೃಷ್ಣರ ಬಳಗವನ್ನು ಬರಮಾಡಿಕೊಂಡಿದ್ದು ಅಲ್ಲಿನ ಕಾಂಗ್ರೆಸ್ ಮುಖಂಡ ನಯಾಜ್. ನಯಾಜ್ ಬೆಂಬಲಿಗರೂ ಸೇರಿ ಸರಿಸುಮಾರು ಇನ್ನೂರು ಮಂದಿ ಪ್ರಿಯಕೃಷ್ಣ ಬೆಂಬಲಿಗರು ಮೊದಲು ಕಟ್ಟಿಸುತ್ತಿದ್ದ ಉರ್ದು ಶಾಲೆಯ ಕಾಮಗಾರಿ ನೋಡಲು ಹೋಗಿದ್ದಾರೆ. ಅದೇ ಹೊತ್ತಿಗೆ ಮುಸ್ಲಿಂ ಮಹಿಳೆಯೊಬ್ಬರು ಬಂದಿದ್ದೇ ಶಾಲೆ ಕಟ್ಟಿಸುವುದರಿಂದಾಗಿ ಓಡಾಡಲು ಜಾಗವೇ ಇಲ್ಲವಾಗಿದೆ. ಕಂಟ್ರಾಕ್ಟರ್‌ಗೆ ಹೇಳಿ ದಾರಿ ಕಲ್ಪಿಸಿಕೊಡುವಂತೆ ಗೋಗರೆದಿದ್ದಾಳೆ. ಇನ್ನಾರೋ ಹೆಂಗಸೊಬ್ಬಳು ತನಗೆ ಮನೆಕಟ್ಟಿಸಿಕೊಡುವಂತೆ ಪ್ರಾರ್ಥಿಸಿದ್ದಾಳೆ.

ಅಷ್ಟರಲ್ಲೇ ಮಸೀದಿ ಅಧ್ಯಕ್ಷ ರಫೀಕ್ ಮತ್ತಾತನ ಹಿಂಡು ಪ್ರತ್ಯಕ್ಷವಾಗಿದೆ. ಬಂದುಬಂದವನೇ ರಫೀಕ್ "ಯಾವ ಸೀಮೆ ಎಮ್ಮೆಲ್ಲೇನಯ್ಯಾ ನೀನು? ಸ್ಕೂಲು ಕಟ್ಟಿಸ್ತಾ ಇರೋದು ಸೋಮಣ್ಣ, ಕೇಳಿದವರಿಗೆಲ್ಲಾ ಮನೆ ಕಟ್ಟಿಸಿಕೊಡೋಕೆ ನೀನ್ಯಾರು? ಏನು ಕಡಿದು ಕಟ್ಟೆ ಹಾಕಿದ್ದೀಯಾ ಅಂತ, ಬಂದು ಪೋ ಕೊಡ್ತಾ ಇದ್ದೀಯಾ...?" ಎಂದು ಪ್ರಿಯಕೃಷ್ಣರನ್ನು ದಬಾಯಿಸಿದ್ದಾನೆ. ಜೊತೆಗಿದ್ದ ಬೆಂಬಲಿಗರು ನೋಡುವಷ್ಟು ನೋಡಿ, "ಎಮ್ಮೆಲ್ಲೆ ಅನ್ನೋ ಕನಿಷ್ಠ ಗೌರವ ಕೂಡ ಇಲ್ಲದೆ ಏಕವಚನದಲ್ಲಿ ಮಾತಾಡ್ತಿಯಲ್ಲ ನೀನು ಎಂಥವನು? ಮರ್ಯಾದೆ ಕೊಟ್ಟು ಮಾತಾಡು", ಎಂದು ತಿರುಗಿ ಬಿದ್ದಿದ್ದಾರೆ.

ಮಾತಿಗೆ ಮಾತು ಬೆಳೆದಿದೆ. ಬರುವಾಗಲೇ ಒಂದಷ್ಟು ಕಿಡಿಗೇಡಿಗಳನ್ನು ಕಟ್ಟಿಕೊಂಡು ಬಂದಿದ್ದ ರಫೀಕ್ ಒಂದು ಹಂತದಲ್ಲಿ ಶಾಸಕ ಪ್ರಿಯಕೃಷ್ಣರ ಮೇಲೇ ಹಲ್ಲೆ ನಡೆಸಲು ನುಗ್ಗಿದ್ದನ್ನು ನೋಡಿದ ಅವರ ಗನ್‌ಮನ್ ತನ್ನ ಸೊಂಟಕ್ಕೆ ಕೈ ಹಾಕಿದ್ದೆ ರಿವಾಲ್ವರ್ ಹೊರತೆಗೆದು ರಕ್ಷಣೆಗೆ ಮುಂದಾಗಿದ್ದಾನೆ. ರಿವಾಲ್ವರ್ ನೋಡಿದ್ದೇ ರಫೀಕ್ ಗ್ಯಾಂಗ್ ಜಾಗ ಖಾಲಿ ಮಾಡಿದೆ.



ಬಡ್ಡಿ ಘವಾಣಿ ಮುಮ್ತಾಜ್


ಆದರೆ ಗಲಾಟೆಯೊಂದೇ ಗುರಿಯಾಗಿದ್ದ ರಫೀಕ್‌ಗೆ ಪ್ರಿಯಕೃಷ್ಣರ ಗನ್ ಮನ್ ತೋರಿಸಿದ್ದ ರಿವಾಲ್ವರ್‌ನ ಹೊರತಾಗಿ ಬೇರೆ ನೆಪ ಸಿಗಬೇಕಲ್ಲ? ಹಾಗೆ ಓಡಿಹೋದವನು ಇದನ್ನೇ ಹೊಂಚ ಹಾಕಿ ಕುಳಿತಿದ್ದ ರೌಡಿ ಸಿರಾಜ್‌ನನ್ನು ಛೂಬಿಟ್ಟಿದ್ದಾನೆ. ಇಲ್ಲಿ ರಫೀಕ್‌ನ ಉದ್ದೇಶ ಏದ್ದದ್ದು ತನ್ನ ಅನ್ನದಾತ ಮಂತ್ರಿ ಸೋಮಣ್ಣನನ್ನು ತೃಪ್ತಿಪಡಿಸುವುದಾದರೆ, ಸಿರಾಜ್‌ನ ಕಣ್ಣಿದ್ದದ್ದು ಸ್ಥಳೀಯ ಕಾಂಗ್ರೆಸ್ ನಾಯಕ ನಯಾಜ್ ಮೇಲೆ. ಶಾಸಕ ಪ್ರಿಯಕೃಷ್ಣರ ಬೆಂಬಲದಿಂದ ಇವತ್ತಲ್ಲ ನಾಳೆ


▶7


> ಲೇಔಟ್ ಕೃಷ್ಣಪ್ಪ ಮತ್ತು ಸೋಮಣ್ಣರ ಜಿದ್ದಾಜಿದ್ದಿಯನ್ನು ರಫೀಕ್, ಸಿರಾಜ್ ಪಡೆ ಸದ್ಯ ತನ್ನ ಉದ್ದೇಶಕ್ಕೆ ಬಳಸಿಕೊಂಡಿದೆ. ಇವರಿಗೆ ಗೋರಿಪಾಳ್ಯದ ಪಾತಕಿಗಳಾದ ಇಮ್ರಾನ್, ಆರೀಫ್ ಕುಮ್ಮಕ್ಕಿದೆ. ಸದ್ಯ ನಯಾಜ್ ಬಚಾವಾಗಿದ್ದಾನೆ. ಇವತ್ತಲ್ಲ ನಾಳೆ ಗ್ಯಾಂಗ್‌ವಾರ್ ಸ್ಫೋಟಿಸಲ್ಲ ಎನ್ನಲು ಏನು ಗ್ಯಾರಂಟಿ? ಗೋರಿಪಾಳ್ಯದ ಗ್ಯಾಂಗ್‌ವಾರ್ ಅನ್ನು ತನ್ನ ರಾಜಕೀಯಕ್ಕೆ ಬಳಸಿಕೊಳ್ಳಲು ಹೋಗಿ ಅಲ್ತಾಫ್‌ನ ಇಬ್ಬರು ತಮ್ಮಂದಿರ ಹತ್ಯೆಗೆ ಕಾರಣನಾದ ಸೋಮಣ್ಣ ಈಗಾಗಲೇ ಪಾಠ ಕಲಿಯಬೇಕಾಗಿತ್ತು. ಈಗ ಅದೇ ಚಾಳಿಯನ್ನು ರಫೀಕ್, ಸಿರಾಜ್, ಮುಮ್ತಾಜ್‌ರಂಥ ಪಾತಕಿಗಳನ್ನು ಬೆಳೆಸುವ ಮೂಲಕ ಮುಂದುವರೆಸಿದ್ದಾರೆಂದರೆ ಪ್ರಶಾಂತವಾಗಿದ್ದ ಗಂಗೊಂಡನಹಳ್ಳಿಗೆ ಬೆಂಕಿ ಬೀಳದೆ ಇರುತ್ತಾ? ಸೋಮಣ್ಣನ ಕ್ರಿಮಿನಲ್ ರಾಜಕೀಯಕ್ಕೆ ಇನ್ನೆಷ್ಟು ತಲೆ ಉರುಳಬೇಕು?


ಪಾತಕಿ ಸಿರಾಜ್


ಹಳೇ ರೌಡಿ ರಫೀಕ್


ರೌಡಿ ಮನ್ಸೂರ್


ಪುಡಿ ರೌಡಿ ತನ್ನು


ಗಂಗೊಂಡನಹಳ್ಳಿಯ ಮೆಕ್ಕಾ ಮಸೀದಿ

ರೈ ಶಿಷ್ಯರನ್ನೂ ಬಿಡದ ಸೋಮಣ್ಣನ ಬಂಟ




ಗಂಗೊಂಡನಹಳ್ಳಿಯ ಪುಡಿ ರೌಡಿಗಳಿಗೆ ಮಂತ್ರಿ ಸೋಮಣ್ಣನ ಕುಮ್ಮಕ್ಕು ಯಾವ ಮಟ್ಟಕ್ಕಿದೆ ಎಂಬುದಕ್ಕೆ ಇಲ್ಲಿಗೆ ತಿಂಗಳ ಹಿಂದೆ ನಡೆದ ಜಯಕರ್ನಾಟಕ ಸಂಘಟನೆಯ ಉದ್ಘಾಟನಾ ಕಾರ್ಯಕ್ರಮವೊಂದೇ ಸಾಕು.

ಮೆಕ್ಕಾ ಮಸೀದಿಯ ಎದುರೇ ಜಯ ಕರ್ನಾಟಕ ಉದ್ಘಾಟನೆಯಿತ್ತು, ಅದಕ್ಕೆ ಶಾಸಕ ಪ್ರಿಯಕೃಷ್ಣನನ್ನು ಆಹ್ವಾನಿಸಿದರೆಂಬ ಒಂದೇ ಕಾರಣಕ್ಕೆ ಸಿರಾಜ್ ಮತ್ತು ತನ್ನು ಗ್ಯಾಂಗ್ ಸಭೆಗೆ ನುಗ್ಗಿ ದಾಂಧಲೆಯೆಬ್ಬಿಸಿತ್ತು. ಅಷ್ಟಕ್ಕೇ ಸುಮ್ಮನಾಗದೆ ಪ್ರಿಯಕೃಷ್ಣರನ್ನು ಆಹ್ವಾನಿಸಿದ ಜಯಕರ್ನಾಟಕ ಪದಾಧಿಕಾರಿಗಳಾದ ನವಾಜ್ ಮತ್ತು ಮಿನಿ ಮೌಲಿ ಎಂಬಿಬ್ಬರನ್ನೂ ಎಳೆದೊಯ್ದು ಥಳಿಸಲಾಯ್ತು. ಈ ಬಗ್ಗೆ ನವಾಜ್ ಮತ್ತು ಮೌಲಿ ಚಂದ್ರಾಲೇಔಟ್ ಪೊಲೀಸ್ ಠಾಣೆಗೆ ಹೋಗಿ ದೂರು ದಾಖಲಿಸಿದ್ದಾರೆ. ನಿಷ್ಠುರಿ ಇನ್ಸ್‌ಪೆಕ್ಟರ್ ನಾಗರಾಜ್ ದೂರು ಸ್ವೀಕರಿಸುವಷ್ಟಾದರೂ

ನ್ ತೋರಿಸಿದ್ದಾರೆ. ಆದರೆ ಸಿರಾಜ್ ಮತ್ತು ತನ್ನು ಪಡೆಯನ್ನು ಬಂಧಿಸಬೇಕಲ್ಲ?


ಸೋಮಣ್ಣನ ಕುಮ್ಮಕ್ಕೆಂಬುದು ಪಾತಕಿಗಳ ಪಾಲಿಗೆ ವರದಾನವಷ್ಟೇ ಅಲ್ಲ, ಪೊಲೀಸರ ಕೈಯನ್ನೂ ಕಟ್ಟಿಹಾಕಿದೆ!

ಕುಮಟಾ: ಪಡಪೋಸಿ ಶಾಸಕ ಶೆಟ್ಟಿಯ ಪ್ರಚಾರ ಯಾತ್ರೆ!



ದಿನಕರ್ ಶೆಟ್ಟಿ

ಉತ್ತರ ಕನ್ನಡ ಕರಾವಳಿಯ ಕುಮಟಾ ಮತ್ತು ಹೊನ್ನಾವರ ತಾಲ್ಲೂಕುಗಳ ರಾಜಕಾರಣ ರಂಗುರಂಗಾಗುತ್ತಿದೆ; ವಿಧಾನಸಭಾ ಚುನಾವಣೆಗೆ ರಂಗ ತಾಲೀಮು ಶುರುವಾಗಿದೆ. ಜನಸಾಮಾನ್ಯರ ಮರೆತು ಗೋಲ್‌ಮಾಲ್ ಪಾಲಿಟಿಕ್ಸ್‌ನಲ್ಲಿ ತೊಡಗಿಸಿಕೊಂಡಿದ್ದ ಮರಿ-ಹಿರಿ ಪುಢಾರಿಗಳಿಗೆಲ್ಲ ಈಗ ಸಮಷ್ಟಿಯ ಕಾಳಜಿ-ಕಳಕಳಿ ಉಕ್ಕುಕ್ಕಿ ಬರತೊಡಗಿದೆ.







ಕಾಂಗ್ರೆಸ್-ಬಿಜೆಪಿ ಪಕ್ಷದಲ್ಲಿ ಟಿಕೆಟ್‌ಗಾಗಿ ತಂತ್ರಗಾರಿಕೆ ಜೋರಾಗಿದೆ. ಸ್ಥಳೀಯ ಜೆಡಿಎಸ್ ಪಕ್ಷವನ್ನು ಸ್ವಂತದ ಪ್ರೈವೇಟ್ ಲಿಮಿಟೆಡ್ ಕಂಪನಿಯಂತೆ ಮಾಡಿಕೊಂಡಿರುವ ಶಾಸಕ ದಿನಕರ ಶೆಟ್ಟಿಗೆ ಟಿಕೆಟ್‌ಗಾಗಿ ಸೆಡ್ಡು ಹೊಡೆವ ಎದುರಾಳಿಯೇ ಇಲ್ಲ. ಶೆಟ್ಟರರೇನಿದ್ದರೂ ಪಟ್ಟಾ ಭದ್ರಪಡಿಸಿಕೊಳ್ಳಲು ಪರದಾಟ!

ನಾಲ್ಕು ವರ್ಷ ಎಮ್ಮೆಲ್ಲೆಯಾಗಿ ವ್ಯರ್ಥವಾಗಿ ಕಳೆದಿರುವ ಶೆಟ್ಟರಿಗೆ ಈಗ ಕ್ಷೇತ್ರದ ನತದೃಷ್ಟ ಹಳ್ಳಿಗಳ ನೆನಪಾಗುತ್ತಿದೆ; ಬಡವರಿಗೆ ನೆರವಾಗುವ 'ಕರ್ತವ್ಯ ಪ್ರಜ್ಞೆ' ಕಾಡುತ್ತಿದೆ, ಪಾಪ! ಹಿಂದೆರಡು ಬಾರಿ ಇಲೆಕ್ಷನ್‌ಗೆ ಸ್ಪರ್ಧಿಸಿ ಸೋತಿದ್ದ ದಿನಕರ ಶೆಟ್ಟಿ ಜನರನ್ನು ಮರುಳುಗೊಳಿಸುವ ರಾಜಕಾರಣದ ಸಕಲ ಪಟ್ಟು ಕರಗತ ಮಾಡಿಕೊಂಡಿರುವ ಚಾಲಾಕಿ ರಾಜಕಾರಣಿ. ಹೀಗಾಗಿ ಆತನಿಗೆ ನಾಲ್ಕು ವರ್ಷ ಸಾಧು ಸ್ವಭಾವದ ಕುಮಟಾ-ಹೊನ್ನಾವರದ ಮತದಾರರನ್ನು ನಿಭಾಯಿಸುವುದು-ಗುರಾಯಿಸಿ ಅಧಿಕಾರಿಗಳ ಆಳುವುದೇನೂ ಕಷ್ಟವಾಗಿರಲಿಲ್ಲ, ರಾಜ್ಯದಲ್ಲಿ ಬಿಜೆಪಿ ಸರ್ಕಾರ ಇರುವುದರಿಂದ, ಆ ಸರ್ಕಾರಕ್ಕೆ ತನ್ನ ಬಾಸ್ ಕುಮ್ಮಿ ಕಂಟಕವಾಗಿರುವುದರಿಂದ ಕ್ಷೇತ್ರೋದ್ಧಾರ ಮಾಡಲಾಗಲಿಲ್ಲ ಎಂಬ ಸಬೂಬು ಹೇಳುತ್ತಲೇ ಈತ ದರ್ಬಾರು ನಡೆಸಿದ್ದ.


ಈ ಪಡಪೋಸಿ ರಾಜಕಾರಣವೇ 'ರಂಗೀಲಾ ರಾಜ' ದಿನಕರ ಶೆಟ್ಟಿಗೆ ಈಗ ಕಂಟಕವಾಗಿದೆ. ಹಾಗೆ ನೋಡಿದರೆ 2008 ರ ಆತನ ಗೆಲುವೇನೂ ಅಷ್ಟು ಸುಲಭದ್ದು ಆಗಿರಲಿಲ್ಲ. ದಾಯಾದಿ ಅಣ್ಣ-ಅಂದಿನ ಕಾಂಗ್ರೆಸ್ ಶಾಸಕ ಮೋಹನ ಶೆಟ್ಟಿ ವಿರುದ್ಧ ಈತ ಗೆದ್ದಿದ್ದು ಬರೀ 20 ಮತದಂತರದಿಂದ. ಬಾಯ್ತುಂಬ ಕವಳ ಹಾಕಿಕೊಂಡು-ಜೊಲ್ಲು ಸುರಿಸುತ್ತ ಲಾಲು ಸ್ಟೈಲಲ್ಲಿ ರಾಜಕಾರಣ ಮಾಡುತ್ತಿದ್ದ ಮೋಹನ ಶೆಟ್ಟಿ ಜನಸಾಮಾನ್ಯರ ಕೈಗೆಟುಕುತ್ತಿದ್ದ ಶಾಸಕನಾಗಿದ್ದರು. ತನ್ನ ಬಾಲಿಶ ಮಾತುಗಾರಿಕೆ, ಮೇಲ್ವರ್ಗದವರನ್ನು ನೇರಾನೇರ ಜರಿಯುವ ಸಾತ್ವಿಕ ಹುಂಬತನದಿಂದಾಗಿ ಮೋಹನ ಶೆಟ್ಟಿ ಸ್ವ-ಪಕ್ಷದ 'ಡಾನ್' ದೇಶಪಾಂಡೆ ಮತ್ತವನ ಹಲಾಲುಟೋಪಿ ಗ್ಯಾಂಗಿನ ಎಲ್.ವಿ. ಶಾನಭಾಗ್, ಧೀರೂ ಶಾನಭಾಗ್, ಹೊನ್ನಪ್ಪ ನಾಯಕ, ಎಂ.ಎಂ. ಹೆಗಡೆ ವಗೈರೆಗಳನ್ನು ಎದುರ್ಹಾಕಿಕೊಂಡಿದ್ದರು. ಇವರೆಲ್ಲ ಮೋಹನಶೆಟ್ಟರ ಕಿಡ್ನಿ ವೈಫಲ್ಯದ ಅನಾರೋಗ್ಯವನ್ನೇ ಇಲೆಕ್ಷನ್ ಪ್ರಚಾರಕ್ಕೆ 'ವಸ್ತು' ಆಗಿಸಿಕೊಂಡಿದ್ದು ದಗಲುಬಾಜಿ ದಿನಕರ ಶೆಟ್ಟರ ಅದೃಷ್ಟ ಖುಲಾಯಿಸುವಂತೆ ಮಾಡಿತ್ತು. ದೇಶಪಾಂಡೆಯಂತೂ ಸ್ವಜಾತಿ ಕೊಂಕಣಿಗಳಿಗೆ ಜೆಡಿಎಸ್‌ನ ದಿನಕರ ಶೆಟ್ಟಿಗೆ ಓಟು ಮಾಡುವಂತೆ ಕಟ್ಟುನಿಟ್ಟಿನ ಫರ್ಮಾನು ಹೊರಡಿಸಿದ್ದರು.

ಒಂದೆಡೆ ಅನಾರೋಗ್ಯ, ಇನ್ನೊಂದೆಡೆ ಸ್ವಪಕ್ಷದ ಪ್ರಬಲ ಜಾತಿಯ ಪಂಟರ್‌ಗಳು, ಮತ್ತೊಂದೆಡೆ ಕಾಲೆಳೆವ ಕಸರತ್ತು ಬಲ್ಲ ಶಕ್ತಿಶಾಲಿ ದೇಶಪಾಂಡೆ, ಇದೆಲ್ಲ ಏಕಾಂಗಿಯಾಗಿ ಎದುರಿಸಿದ್ದ ಕಾಂಗ್ರೆಸ್‌ನ ನಿರುಪದ್ರವಿ ಜೀವಿ ಮೋಹನ ಶೆಟ್ಟಿ ಇಪ್ಪತ್ತೇ ಓಟಲ್ಲಿ ಸೋತಿದ್ದರು. ಇಂಥ ಜನನಾಯಕನ ಎದುರು ಗೆದ್ದಿದ್ದೇ ಜೆಡಿಎಸ್‌ನ ದಿನಕರ ಶೆಟ್ಟಿಯ ಸಾಧನೆ. ಅದನ್ನು ಬಿಟ್ಟರೆ ಆತ ಕ್ಷೇತ್ರಕ್ಕೆ ಶಾಸಕನಾಗಿ ಉಪಕಾರ ಮಾಡಿದ್ದೇನೂ ಇಲ್ಲ, ಶಾಸಕನಾದ ಮೇಲಾದರೂ ದಿನಕರ ಶೆಟ್ಟಿ ಜನಪರ ರಾಜಕಾರಣ ಮಾಡಿದನಾ ಎಂದು ನೋಡಿದರೆ ಊಹುಂ; ಅಂಥ ಕುರುಹುಗಳೆಲ್ಲೂ ಕಾಣಿಸದು. ಹಾಗಂತ ಶಾಸಕ ಶೆಟ್ಟಿ ಸ್ವಜೀರ್ಣೋದ್ಧಾರ ಮಾತ್ರ ತುಂಬ ಮುತುವರ್ಜಿಯಿಂದಲೇ ಮಾಡಿಕೊಂಡಿದ್ದಾರೆ. ಹಿಂದಿನ ದರ್ಪ-ದೌಲತ್ತು ಬಿಟ್ಟು ತುಂಬ ನಾಜೂಕಾಗಿ ಜನರನ್ನು ಯಾಮಾರಿಸುವ 'ತಂತ್ರ' ಅಳವಡಿಸಿಕೊಂಡಿದ್ದ ಶೆಟ್ರು ಅಧಿಕಾರಿ ವಲಯದಲ್ಲಿ 'ಶೂಡ್ ಫಂಡ್ ರೈಸರ್' ಎಂದೇ ಪರಿಚಿತರಾಗಿ ಹೋದರು.

ಅಚಾನಕ್ ಲಾಟರಿ ಹೊಡೆದಂತೆ ಶಾಸಕನಾಗಿ ಹೋದ ದಿನಕರ ಶೆಟ್ಟಿಗೆ ಕ್ಷೇತ್ರವಾಸಿಗಳ ಬೇಕು-ಬೇಡ, ಕಷ್ಟ-ಸುಖ, ಸಮಸ್ಯೆ-ಸಂತೋಷ ಯಾವುದೂ ಅರ್ಥವಾಗಲೇ ಇಲ್ಲ, ಧನಾಧಾರಿತ ಗಿಮಿಕ್ ರಾಜಕಾರಣದ ಬೈಪ್ರಾಡಕ್ಟ್‌ನಂತಿರುವ ದಿನಕರ ಶೆಟ್ಟಿ ಮದುವೆ-ಮುಂಜಿ-ಬೊಜ್ಜ-ತಿಥಿ ಊಟಕ್ಕೆ ಹೋಗಿ ಮಿಂಚುವುದು, ಸಿಕ್ಕಷ್ಟು ಹಣ ಮಾಡಿಕೊಳ್ಳೋದಷ್ಟೇ ಶಾಸಕನ ಡ್ಯೂಟಿ ಎಂಬಂತೆ ಮೆರೆದದ್ದೇ ಮೆರೆದದ್ದು! ಆಪರೇಷನ್ ಕಮಲಕ್ಕೆ ಒಳಗಾಗುತ್ತಾನೆಂದು ಆಗಾಗ ಸುದ್ದಿಯಾಗಿದ್ದು ಬಿಟ್ಟರೆ ಶೆಟ್ರು ಜನರ ಬಳಿಗ್ಹೋಗಿ ಪರಿಚಿತರಾಗಿದ್ದೇ ಇಲ್ಲ, ಪ್ರೈಮರಿ ಶಾಲೆ ವಾರ್ಷಿಕೋತ್ಸವ-ಸರ್ಕಾರಿ ಕಾಮಗಾರಿ ಉದ್ಘಾಟನೆಯ ಬೋಗಸ್ ರಾಜಕಾರಣದಲ್ಲೇ ಕಾಲ ಹರಣ ಮಾಡಿದ ದಿನಕರ ಶೆಟ್ಟಿಗೀಗ ಭ್ರಮನಿರಸನವಾಗಿದೆ. ಜನರು ತನ್ನನ್ನು ಅನುಮಾನದಿಂದ ನೋಡುತ್ತಿದ್ದಾರೆಂಬುದು ನಿಕ್ಕಿಯಾಗಿದೆ. ಜಿಪಂ-ತಾಪಂ ಇಲೆಕ್ಷನ್‌ನಲ್ಲಿ ಆಗಿರುವ ಸೋಲು ಅಣಕಿಸುತ್ತಿದೆ. ಹೀಗಾಗಿ ಮುಂಬರುವ ಅಸೆಂಬ್ಲಿ ಇಲೆಕ್ಷನ್ ಆತನಲ್ಲಿ ದಿಗಿಲು ಹುಟ್ಟಿಸಿದೆ.

ಮತ್ತೆ ಶಾಸಕನಾಗುವ ದುರಾಸೆಗೆ ಬಿದ್ದಿರುವ ಶೆಟ್ಟಿ ಈಗ ಕ್ಷೇತ್ರದ ಉದ್ದಗಲಕ್ಕೆ ದಿನಕ್ಕೊಂದು ಛದ್ಮವೇಷ ತೊಟ್ಟುಕೊಂಡು ತುಂಡುಗುಪ್ಪಳ ಹೊಡೆಯುತ್ತಿದ್ದಾರೆ. ಕಳೆದವಾರದಿಂದ ಇಡೀ ಕ್ಷೇತ್ರದ 31 ಗ್ರಾಮ ಪಂಚಾಯ್ತಿಗಳ ವ್ಯಾಪ್ತಿಯಲ್ಲಿ ಪಾದಯಾತ್ರೆ ಶುರುಹಚ್ಚಿಕೊಂಡಿದ್ದಾರೆ; ಗುರು ಕುಮಾರಸ್ವಾಮಿ ಶೈಲಿಯಲ್ಲಿ ಗ್ರಾಮ ವಾಸ್ತವ್ಯ ಮಾಡುತ್ತಿದ್ದಾರೆ. ಮುಗ್ಧ ಗೌಡ, ನಾಯ್ಕ, ಪಟಗಾರ, ಹರಿತಂತ್ರನ ಮನೆ ಜಗುಲಿಯಲ್ಲಿ ಕುಂತು ಹರಟೆ ಹೊಡೆಯುತ್ತ, ಅವರ ಅಡಿಗೆ ಮನೆ ನುಗ್ಗಿ ಮೀನು ಪಳ್ದಿ ಸುರಿಯುತ್ತ ಜನರಿಗೆ ಮಂಕುಬೂದಿ ಎರಚಲಾರಂಭಿಸಿದ್ದಾರೆ. ತನ್ನ ಈ ಚುನಾವಣಾ ತಯಾರಿ ಪ್ರಚಾರಯಾತ್ರೆಗೆ ಸರ್ಕಾರಿ ಅಧಿಕಾರಿಗಳ ದಂಡು

ಟಿಕೆಟ್ ಲಾಬಿ



ವಿನೋದ್ ಪ್ರಭು



ಜಿ.ಜಿ.ಹೆಗಡೆ



ಗಾಯಿತ್ರಿ ಗೌಡ



ಹೊನ್ನಪ್ಪ ನಾಯಕ್



ಶಶಿಭೂಷಣ್



ಸೂರಜ್ ನಾಯಕ್



ಯಶೋಧರ ನಾಯಕ್

ಸದ್ಯ ಕುಮಟಾ-ಹೊನ್ನಾವರ ಕ್ಷೇತ್ರವನ್ನಾಳುತ್ತಿರುವ ಶಾಸಕ ದಿನಕರ ಶೆಟ್ಟಿ ಮತ್ತೆ ಶಾಸಕನಾಗಲು ಮಾಡಬಾರದ ಮಳ್ಳಾಟವೆಲ್ಲ ಮಾಡುತ್ತಿದ್ದಾರೆ. ಶೆಟ್ಟರು ಮಳೆಯಲ್ಲಿ ಕೊಡೆ ಹಿಡಿದು ಚೇಲಾಗಳೊಂದಿಗೆ ಹಳ್ಳಿ-ಹಳ್ಳಿ ಸುತ್ತುವುದು, ಎಲ್ಲೆಲ್ಲೋ ಮಲಗಿ ಫೋಟೋ ಟಿವಿ-ಪೇಪರ್‌ಗೆ ಕೊಡುವುದು ನೋಡಿ ಜನ "ಅಯ್ಯೋ ಪಾಪ!.... ಶೆಟ್ರಿಗೀಗತಿ ಬರ್ಬಾದಿತ್ತು....." ಅನ್ನುತ್ತ ಜೋಕ್ ಕಟ್ ಮಾಡುತ್ತಿದ್ದಾರೆ. ಶಾಸಕಗಿರಿಯ 'ರುಚಿ' ಹತ್ತಿರುವ ಶೆಟ್ಟರಿಗೆ ಇನ್ನೊಂದು ಅವಧಿಗೆ ಎಮ್ಮೆಲ್ಲೆ ಆಗುವ ತೆವಲು ಕಾಡುತ್ತಿದೆ.

ದಿನಕರ ಶೆಟ್ಟಿ ಎಮ್ಮೆಲ್ಲೆ ಆಗಲು ಏನು ಮಾಡಲಿಕ್ಕೂ ಹೇಸುವುದಿಲ್ಲ, ಜೆಡಿಎಸ್‌ಗೆ ಗುಡ್‌ಬೈ ಹೇಳಲೂ ಆತ ರೆಡಿ. ಹಿಂದೆ ಆಪರೇಷನ್ ಕಮಲಕ್ಕೂ ಆತ ಸಿದ್ಧನಾಗಿದ್ದರು. ಈಗ ಕಾಂಗ್ರೆಸ್‌ಗೆ ಹೋಗಲಿಕ್ಕೂ ಶೆಟ್ರು ಯೋಚಿಸುತ್ತಿದ್ದಾರೆ. ಆತನಿಗೆ ಪಕ್ಕಾ ಗೊತ್ತಿದೆ. ಕುಮಟಾ-ಹೊನ್ನಾವರದಲ್ಲಿ ಜೆಡಿಎಸ್‌ಗೆ ತಳ-ಬುಡ ಇಲ್ಲ. ಇಲ್ಲಿ ಜೆಡಿಎಸ್ ನಿಂತಿರುವುದೇ ದಿನಕರ ಶೆಟ್ಟರ ಗಿಮಿಕ್-ಚಮಕ್ ಮೇಲೆ. ಹಾಗಂತ ಕಾಂಗ್ರೆಸ್‌ಗೆ ತನ್ನದೇ ಆದ ಓಟ್‌ಬ್ಯಾಂಕ್ ಇದೆ. ಆದರೆ ಅರ್ಹ ಅಭ್ಯರ್ಥಿಗಳಿಲ್ಲ, ಇದು ಕಾಂಗ್ರೆಸ್ ಯಜಮಾನ ದೇಶಪಾಂಡೆಗೆ ಖಾತ್ರಿಯಾಗಿದೆ. ಹೀಗಾಗಿ ಆತ ತನ್ನ ದಳದ ಪೂರ್ವಾಶ್ರಮದ ಬಂಟ ದಿನಕರ ಶೆಟ್ಟಿಯನ್ನು ಕಾಂಗ್ರೆಸ್‌ಗೆ ತಂದು ಕ್ಯಾಂಡಿಡೇಟಾಗಿಸಿದರೆ ಹೇಗೆಂಬ ಚಿಂತನ-ಮಂಥನದಲ್ಲಿದ್ದಾರೆ.

ಆದರೆ ಕಾಂಗ್ರೆಸ್‌ನಲ್ಲಿ ಟಿಕೆಟ್‌ಗಾಗಿ ಮುಖರಹಿತರ ದಂಡೇ ಕಾದು ಕುಳಿತಿದೆ. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹೊನ್ನಪ್ಪ ನಾಯಕ್ ದಿನಕ್ಕೆ ಸಾವಿರಾರು ರೂಪಾಯಿ ಗುಂಡುಪಾರ್ಟಿಗೇ ಖರ್ಚು ಮಾಡುತ್ತ ಹಿಂಬಾಲಕರ ತಂಡ ಕಟ್ಟುತ್ತಿದ್ದಾರೆ. ತಾನೇ ಕಾಂಗ್ರೆಸ್ ಹುರಿಯಾಳೆಂದು ಆತ ಭ್ರಮೆಗೆ ಬಿದ್ದಿದ್ದಾನೆ. ಹವ್ಯಕರ ಕೋಟಾದಲ್ಲಿ ತನಗೆ ಛಾನ್ಸ್ ಸಿಗಬಹುದೆಂದು ಸಿಜರೀನ್ ಖ್ಯಾತಿಯ ವೈದ್ಯ ಡಾ. ಜಿ.ಜಿ. ಹೆಗಡೆ ಬಾಯಿ ತೆರೆದು ಕೂತಿದ್ದಾನೆ. ಆತ ಕಳೆದ ಬಾರಿ 'ಬಂ'ರ ಸಮಾಜವಾದಿ ಪಕ್ಷದಿಂದ ಸ್ಪರ್ಧಿಸಿ ಸೋತಿದ್ದ, ಇನ್ನೊಬ್ಬ ಬ್ರಾಹ್ಮಣ ಕುಲತಿಲಕ ಶಿವಾನಂದ ಹೆಗಡೆ ಯಾನೆ ಬಾಬು ಹೆಗಡೆ ಎಂಬ ಮರಳು ಕಳ್ಳ ಸಾಗಾಣಿಕೆದಾರ ಕಪ್ಪು ಕನ್ನಡಕ ಹಾಕಿಕೊಂಡು ಈಗಲೇ ಶಾಸಕನ ಗತ್ತಲ್ಲಿ ಓಡಾಡುತ್ತಿದ್ದಾನೆ. ತನ್ನ ಕಳ್ಳ ಕಾಸು ಹರಿಸುತ್ತ ಹೊನ್ನಾವರ ಭಾಗದಲ್ಲಿ ಗೌಜೆಬ್ಬಿಸುತ್ತಿದ್ದಾನೆ. ತನಗೆ ಸ್ವಜಾತಿ ರಾಮಚಂದ್ರಾಪುರ ಮಠಾಧೀಶರ ಬೆಂಬಲ ಇದೆಯೆಂದು ಹೇಳುವ 'ಬಾಬೆಗಡೆಗೆ' ರಾಘವೇಶ್ವರ ಭಾರತಿ ದೂರ ಇಟ್ಟಿದ್ದಾನೆಂದು ಹೈಗರೇ ಹೇಳುತ್ತಾರೆ. ಏಕೆಂದರೆ, ಈ ಬಾಬೆಗಡೆ ಮಠದ ಹೆಸರಲ್ಲಿ ಒಂದಕ್ಕೆ ನಾಲ್ಕು ಸಾಗುವಾನಿ ಮರ ಕಡಿದು ದೊಡ್ಡ ರಾದ್ಧಾಂತ ಮಾಡಿದ್ದಾನಂತೆ.

ವಿರೋಧ ಪಕ್ಷದ ನಾಯಕ ಸಿದ್ಧರಾಮಣ್ಣನ ದೋಸ್ತ್ ತಾನೆಂದು ಹೇಳಿಕೊಳ್ಳುವ ಮೈಸೂರಿನ ಉದ್ಯಮಿ-ಭಟ್ಕಳ ಕ್ಷೇತ್ರ ಮೂಲದ ಯಶೋಧರ ನಾಯ್ಕ ಕುಮಟೆಯಲ್ಲೆ ಬಿಡಾರ ಹೂಡಿ ವರ್ಷ ಒಂದು ಕಳೆಯುತ್ತ ಬಂದಿದೆ. ಹಿಂದೆರಡು ಬಾರಿ ಭಟ್ಕಳದಲ್ಲಿ ಇಲೆಕ್ಷನ್‌ಗೆ ಸ್ಪರ್ಧಿಸಿ ಸೋತಿರುವ ಯಶೋಧರ ನಾಯ್ಕ್, ಎಂಬ ಶೋಮ್ಯಾನ್ ಕುಮಟೆಯ ಕಾಂಗ್ರೆಸ್ ಟಿಕೆಟ್ ತನಗೇ ಎಂದು ಅಹಂಕಾರದಿಂದ ಓಡಾಡುತ್ತಿದ್ದಾನೆ. ತನ್ನ ಕೃಷ್ಣನ ಲೆಕ್ಕದ ಆದಾಯವನ್ನೆಲ್ಲ ಇಲ್ಲಿ ಹರಿಸುತ್ತಿದ್ದಾನೆ. ಆತನ ಬಾಲ ಕಟ್ ಮಾಡಲು ದೇಶಪಾಂಡೆ ಕತ್ತರಿ ಹಿಡಿದೇ ನಿಂತಿದ್ದಾರೆ. ಯಶೋಧರ ನಾಯ್ಕ ಮತ್ತು ಬಾಬೆಗಡೆ ಒಂದೇ ನಾಣ್ಯದ ಎರಡು ಮುಖದಂತಿದ್ದಾರೆ. ಒಬ್ಬ ಹೈಗರ ಹರಾಮಿಯಾದರೆ ಮತ್ತೊಬ್ಬ ದೀವರ ದುಡ್ಡಿನ ಕುಳ. ಇಬ್ಬರೂ ಕೂಲಿಂಗ್ ಗ್ಲಾಸ್ ಗಿರಾಕಿಗಳು. ಇವರ ಡೌಲು-ದಗಲುಬಾಜಿಗಳೇ ಜನರಿಗೆ ವಾಕರಿಕೆ ಮೂಡಿಸಿದೆ. ಎಮ್ಮೆಲ್ಲೆ ಆಗುವುದಿರಲಿ, ಗ್ರಾಪಂ ಮೆಂಬರಿಕೆಗೂ ಇವರಿಬ್ಬರೂ ನಾಲಾಯಕ್. ಮಾಜಿ ಜಿಪಂ ಅಧ್ಯಕ್ಷೆ ಗಾಯತ್ರಿ ಗೌಡ ಮತ್ತು ಮಾಜಿ ಜಿಪಂ ಸದಸ್ಯೆ ಸುಧಾಗೌಡರೂ ಒಂದು ಕೈ ನೋಡುವ ಉಮೇದಿಯಲ್ಲಿದ್ದಾರೆ. ಸುಧಾಗೆ ದೇಶಪಾಂಡೆ ಅಭಯವಿದೆ. ಹಾಗೆ ನೋಡಿದರೆ ಕೆಸರಿನ ಕಮಲದಂತಿರುವ ಶಶಿಭೂಷಣ ಹೆಗಡೆ ಇವರೆಲ್ಲರಿಗಿಂತಲೂ ಬೆಟರ್ ಕ್ಯಾಂಡಿಡೇಟ್. ಆದರೆ ಈ ರಾಮಕೃಷ್ಣ ಹೆಗಡೆಜೀಯ ದಾಯಾದಿ ಮೊಮ್ಮಗನಿಗೆ ಕುಮಟಾ-ಹೊನ್ನಾವರದ ಜನರ ಬಗ್ಗೆ ಅಂಥ ಸೆಂಟಿಮೆಂಟೇನಿಲ್ಲ, ಸಿದ್ದಾಪುರದಿಂದ ಎರಡು ಬಾರಿ ವಲಸೆ ಬಂದು ಕುಮಟೆಯಿಂದ ಬಿಜೆಪಿ ಕ್ಯಾಂಡಿಡೇಟಾಗಿ ನಿಂತು ಬಿದ್ದಿರುವ ಶಶಿಗೆ ಅಂದು ಬಿಜೆಪಿ ಟಿಕೆಟ್ ಕೊಡಿಸಿದ್ದ ಮಂತ್ರಿ ಕಾಗೇರಿಯೇ ಇಂದು ಬತ್ತಿ ಇಡುತ್ತಿದ್ದಾರೆ. ಡಾ. ಎಂ.ಪಿ. ಕರ್ಕಿ ಎಂಬ ಜಿಲ್ಲಾ ಬಿಜೆಪಿಯ ಹಿರಿಯಜ್ಜನಿಗೆ ಕೊಕ್ ಕೊಡಲು ಶಶಿ ಎಂಬ ಮತ್ತೊಬ್ಬ ಬ್ರಾಹ್ಮಣನನ್ನು ಕುಮಟೆಗೆ ತರಲು ಕಾಗೇರಿ ಕಿತಾಪತಿ ಮಾಡಿದ್ದೇ ಮುಂದೆ ಬಿಜೆಪಿ ಅಧಿಕಾರಕ್ಕೆ ಬಂದರೆ ತನಗೆ ಮಂತ್ರಿಗಿರಿ ತಪ್ಪಬಾರದೆಂದಾಗಿತ್ತು, ಈ ಸ್ವಜಾತಿ ಶಶಿ ಬೆಳೆದರೆ ತನಗೆ ಗಂಡಾಂತರವೆಂದು ಆತನಿಗೆ ಕಾಗೇರಿ ಕಾಡುತ್ತಿದ್ದಾರೆ.

ಬಿಜೆಪಿ ಎಂಪಿ ಅನಂತ್ಮಾಣಿಗಂತೂ ಶಶಿ ತಲೆ ಕಂಡರಾಗದು. ಕಳೆದ ಬಾರಿ ಬರೀ 480 ಮತದಂತರದಿಂದ ಆತ ಸೋತಿದ್ದಾನೆ. ಹೀಗಾಗಿ ಶಶಿಗೆ ಬಿಜೆಪಿ ಟಿಕೆಟ್ ಗ್ಯಾರಂಟಿ ಎಂದು ಆತನ ತಂದೆ ವಿನಾಯಕ್ ರಾವ್ ಹೆಗಡೆ ಬಳಗ ಹೇಳುತ್ತಿದೆ. ಆದರೆ ಕಾಗೇರಿ ಮಾಣಿ-ಅನಂತ್ಮಾಣಿ ಬಳಗ ದೀವರ ಹುಂಬ-ಜಿಲ್ಲಾ ಯುವ ಬಿಜೆಪಿ ಅಧ್ಯಕ್ಷ ಸೂರಜ್ ನಾಯ್ಕ ಸೋನಿ ಎಂಬಾತನನ್ನು ಮುಂದೆ ಮಾಡುತ್ತ ವಿನೋದ್ ಪ್ರಭು ಎಂಬ ಪಕ್ಕಾ ಕೊಂಕಣಿ ಚೆಡ್ಡಿಗೆ ಕ್ಯಾಂಡಿಡೇಟ್ ಮಾಡಲು ಸ್ಕೆಚ್ ಹಾಕಿಕೊಂಡಿದ್ದಾರೆ. ಸೂರಜ್ ಸೋನಿ ತಾನೇ ಬಿಜೆಪಿ ಕ್ಯಾಂಡಿಡೇಟೆಂದು 'ಬಂ' ಕೃಪೆಯಿಂದ ತನ್ನಪ್ಪ ಮಾಡಿದ ಹಣ ಹರಿಸುತ್ತಿದ್ದಾನೆ. ಜಿಪಂ ಸದಸ್ಯೆಯಾದ ತನ್ನ ಹೆಂಡತಿಗೆ ಪ್ರೊಟೋಕಾಲ್‌ನಂತೆ ಕರೆವ-ಸಭೆ-ಸಮಾರಂಭಕ್ಕೆ ತನ್ನನ್ನು ಕರೀರಿ ಡೊನೇಷನ್ ಕೊಡ್ತೇನೆ ಎಂದಾತ ಗೋಗರೆಯುವುದು ಮೋಜಾಗಿರುತ್ತದೆ.

ಒಂದಂತೂ ಖರೆ. ಈ ಬಿಜೆಪಿ-ಕಾಂಗ್ರೆಸ್-ಜೆಡಿಎಸ್ ಉಮೇದುವಾರರಲ್ಲಿ ಒಂದೂ ಗಟ್ಟಿ ಕಾಳಿಲ್ಲ, ಬಿತ್ತಿದರೆ ಬೆಳೆಯಾಗದ ಜೊಳ್ಳುಗಳಿವು. ಆದರೆ ಜೆಡಿಎಸ್ ಶಾಸಕ ದಿನಕರ ಶೆಟ್ಟಿಯೇನಾದರೂ ಕಾಂಗ್ರೆಸ್ ಕ್ಯಾಂಡಿಡೇಟಾದರೆ ಆತ ಕಾಂಗ್ರೆಸ್ ಬೇಸ್ ಓಟು-ದೇಶಪಾಂಡೆ ಹೆಡ್‌ಮಾಸ್ತರಿಕೆ ಮತ್ತು ಆತನಿಗಿರುವ ವೈಯಕ್ತಿಕ ಬೆಂಬಲದಿಂದ ಗೆಲ್ಲುವುದು ಗ್ಯಾರಂಟಿ. ಹಾಗಂತ ಜಿಲ್ಲೆಯ ರಾಜಕೀಯ ಪಡಸಾಲೆಯಲ್ಲಿ ವಿಶ್ಲೇಷಿಸಲಾಗುತ್ತಿದೆ.




ಸುರಿದೊಯ್ಯುತ್ತಿದ್ದಾರೆ. ಎದುರಿಗೆ ಸಿಕ್ಕ-ಸಿಕ್ಕ ದೇವಾಲಯ- ಮಸೀದಿ- ಚರ್ಚಿಗೆ ಹೊಕ್ಕು ಧಾರ್ಮಿಕ ಭಾವೋನ್ಮಾದ ಮಾಡಿಸಿ ಜನರ ಒಲಿಸಿಕೊಳ್ಳಲು ಕಸರತ್ತು ನಡೆಸುತ್ತಿದ್ದಾರೆ.

ಹೋಪ್‌ಲೆಸ್ ಎಮ್ಮೆಲ್ಲೆ ದಿನಕರ ಶೆಟ್ಟರ ಈ ಪ್ರಚಾರ ಯಾತ್ರೆ, ಗ್ರಾಮ ವಾಸ್ತವ್ಯ-ಶಯನ-ಭೋಜನಗಳ ಮೂಲ ಉದ್ದೇಶವೇ ಹಾಸ್ಯಾಸ್ಪದ. ಹಳ್ಳಿಯ ಗೋಳು ಆಲಿಸುವುದು; ಅಲ್ಲಿಯ ಕುಂದು-ಕೊರತೆ ನೀಗಿಸುವುದು ಮತ್ತು ತನ್ನ ದಿವಂಗತ ಮಗನ ಹೆಸರಲ್ಲಿ ಸ್ಥಾಪಿಸಿರುವ ಟ್ರಸ್ಟ್ ವತಿಯಿಂದ ಪ್ರತಿ ಗ್ರಾಮ ಪಂಚಾಯತ್ ಪ್ರದೇಶದಲ್ಲಿ ಬರೋಬ್ಬರಿ ನೂರು ವಿದ್ಯಾರ್ಥಿಗಳಿಗೆ ತಲಾ 300 ರೂ.ಗಳ ಬಸ್ ಪಾಸ್ ವಿತರಿಸುವುದು ಮತ್ತು ದೇವರು ಗುಂಡಿರಿಗೆ ಅಡ್ಡಬಿದ್ದು ಜನರ ಒಳತಿಗಾಗಿ ಪ್ರಾರ್ಥಿಸುವುದು ಶೆಟ್ಟರ ಹಳ್ಳಿಗಳತ್ತ ನಡೆಯ ಘೋಷಿತ ಅಜೆಂಡಾ! ರಹಸ್ಯ ಕಾರ್ಯಾಚರಣೆ ಇಲೆಕ್ಷನ್ ತಯಾರಿ.

ಹೋದಲೆಲ್ಲ ಶಾಸಕ ಶೆಟ್ಟಿ ಮಾಡುತ್ತಿರುವುದು ಕ್ಷುಲ್ಲಕ ಕೆಲಸ. ರೇಷನ್ ಕಾರ್ಡು, ಬಸ್ ಪಾಸು, ವೃದ್ಧರ ಸಂಧ್ಯಾಸುರಕ್ಷಾ, ಅಂಗವಿಕಲ ವೇತನ, ವಿಧವಾ ವೇತನ, ಅತಿಕ್ರಮಣದಾರರಿಗೆ ಪಟ್ಟಾ ವಿತರಣೆಗಾಗಿ ಶಾಸಕನೊಬ್ಬ ವಾರ್ಡು-ವಾರ್ಡಿಗೆ ಹೋಗಬೇಕಾ? ಹಳ್ಳಿಯಲ್ಲಿ ರಾತ್ರಿ-ಹಗಲು ಓಡಾಡಿ ಗೊಂದಲ-ಗೌಜಿ ಸೃಷ್ಟಿಸಬೇಕಾ? ಎರಡೆರಡು ಬಾರಿ ಎಮ್ಮೆಲ್ಲೆಗಿರಿಗೆ ಸೋತು, ಒಮ್ಮೆ ಗೆದ್ದು ಕಳೆದ 25 ವರ್ಷದಿಂದ ಕುಮಟಾ-ಹೊನ್ನಾವರದಲ್ಲಿ 'ರಾಜಕಾರಣ' ಮಾಡುತ್ತಿರುವ ಶೆಟ್ಟರಿಗೆ ಕ್ಷೇತ್ರದ ಸಮಸ್ಯೆಗಳ ಪರಿಚಯವೇ ಇಷ್ಟು ದಿನ ಇರಲಿಲ್ಲವಾ? ನಾಲ್ಕು ವರ್ಷದ ಶಾಸಕತ್ವದ ಅಧಿಕಾರಾವಧಿಯಲ್ಲೂ ಈ ಪುಟಗೋಸಿ ಸಮಸ್ಯೆ ಪರಿಹರಿಸಲು ದಿನಕರ ಶೆಟ್ರಿಗೆ ಸಾಧ್ಯವಾಗಲಿಲ್ಲವಾ? 41 ಗ್ರಾಮ ಪಂಚಾಯ್ತಿ ಏರಿಯಾದ ವಿದ್ಯಾರ್ಥಿಗಳಿಗೆ ಶಾಸಕ ಶೆಟ್ರು ವಿತರಿಸುವ ಬಸ್‌ಪಾಸ್‌ನ ಒಟ್ಟು ಮೊತ್ತವೇ 12 ಲಕ್ಷ ರೂಪಾಯಿ! ಇದೆಲ್ಲಿಂದ ಬಂತು? ನಂಬರ್ ದಂಧೆಯಲ್ಲೇ ಆತ ದುಡಿದಿದ್ದಾ? ಶಾಸಕನಾಗಿ ಕಮಾಯಿಸಿದ್ದಾ? ಇಂಥ ಸರಳ ಪ್ರಶ್ನೆಗಳೀಗ ಊರಲ್ಲೆಲ್ಲಾ ಎದ್ದಿದೆ!

ಅಷ್ಟಕ್ಕೂ ಶಾಸಕನೊಬ್ಬ ಅಂಗೈ ಅಗಲದ ಕ್ಷೇತ್ರದ ಸಮಸ್ಯೆ ಅರಿಯಲು ಅಥವಾ ರೇಷನ್ ಕಾರ್ಡ್-ವೃದ್ಧಾಪ್ಯವೇತನ-ಬಸ್ ಪಾಸ್ ಕೊಡಿಸಲು ಪಾದಯಾತ್ರೆ ಹೊರಡುತ್ತಾನೆ; ಹಳ್ಳಿಗಳಲ್ಲೇ ಕಂಬಳಿ ಹೊದ್ದು ಮಲಗಿ ಫೋಟೋ ಪೇಪರ್‌ಗಳಲ್ಲಿ



ಹಾಕಿಸಿಕೊಳ್ಳುತ್ತಾನೆಂಬುದೇ ಹಾಸ್ಯಾಸ್ಪದ; ಅಷ್ಟೇ ಅಲ್ಲ ನಾಚಿಕೆಗೇಡಿನದು. ಇದರ ಬದಲು ಜಿಲ್ಲಾ ಕೇಂದ್ರ-ರಾಜ್ಯಧಾನಿಗಳಲ್ಲಿ ವಾಸ್ತವ್ಯ ಮಾಡಿ ಜಿಲ್ಲಾ ಉಸ್ತುವಾರಿ ಮಂತ್ರಿ-ಹಿರಿಯ ಅಧಿಕಾರಿಗಳ ಕೊರಳಪಟ್ಟಿ ಹಿಡಿದು ಕ್ಷೇತ್ರದ ಅಭಿವೃದ್ಧಿಗೆ ವಿಶೇಷ ಅನುದಾನ-ನೀರಾವರಿ-ಮೀನುಗಾರಿಕಾ ಯೋಜನೆ-ಶಾಲಾಕಟ್ಟಡಗಳ ತರಲು ಶೆಟ್ಟರು ಪ್ರಯತ್ನಿಸಬಹುದಿತ್ತು. ಆಗಲಾದರೂ ಈ ನಾಲ್ಕು ವರ್ಷದಲ್ಲಿ ಎಮ್ಮೆಲ್ಲೆಯಾಗಿ ಕಳೆದುಕೊಂಡ ಮಾನ-ಮರ್ಯಾದೆಯಾದರೂ ಕೊಂಚ ತುಂಬಿಬರುತ್ತಿತ್ತೇನೋ?!

ಹಾಗೆ ನೋಡಿದರೆ 'ಜನಪ್ರಿಯ ಶಾಸಕ' ದಿನಕರ ಶೆಟ್ಟರಿಗೆ ಕ್ಷೇತ್ರದ ಬೇಕು-ಬೇಡಗಳೇನೂ ಗೊತ್ತಿರದಂಥದ್ದೇನೂ ಅಲ್ಲ. ನಾಲ್ಕು ವರ್ಷದ ಹಿಂದೆ ಇಲೆಕ್ಷನ್‌ಗೆ ನಿಂತಾಗಲೇ ದಿನಕರ ಶೆಟ್ಟಿ ಕ್ಷೇತ್ರದ ಸಮಸ್ಯೆ ಪಟ್ಟಿ ಮಾಡಿ, ಇದೆಲ್ಲ ಪರಿಹರಿಸುವ ಭಾಷಣ ಬಿಗಿದಿದ್ದರು; ಅಂದಿನ ಶಾಸಕ ಕೆಲಸಕ್ಕೆ ಬಾರದವನೆಂದೂ ತಾನು ಗೆದ್ದರೆ ಜನರಿಗೆ ಸ್ಪಂದಿಸುವೆನಾಗಿಯೂ ಬೊಂಬಡಾ ಬಜಾಯಿಸಿದ್ದ. ಹೀಗಿರುವಾಗ ಆತ ಪಾದಯಾತ್ರೆ ಮಾಡುವ ಅಥವಾ ಗ್ರಾಮದಲ್ಲಿ ರಾತ್ರಿ ಕಳೆದು ಬೆಳಗ್ಗೆ ಬಡವನ ಮನೆಯಲ್ಲಿ ಚಹಾ ಕುಡಿದ-ಊಟ ಮಾಡುವ ಶೋ ಮಾಡುವ ಅವಶ್ಯಕತೆಯೇ ಇರಲಿಲ್ಲ. ಆದರೆ ಯಾವ ಘಳಿಗೆಯಲ್ಲಾದರೂ ಎದುರಾಗಬಹುದಾದ ಅಸೆಂಬ್ಲಿ ಚುನಾವಣೆಯಲ್ಲಿ ಓಟು ಪಡೆದು ಗದ್ದುಗೆ ಗಟ್ಟಿ ಮಾಡಿಕೊಳ್ಳಲು ಈ ತರಹದ ಚೀಪ್ ಗಿಮಿಕ್ ಮಾಡುತ್ತಿದ್ದಾರೆ ಶಾಸಕರ ಶೆಟ್ರು ಎಂಬುದು ಆತನೇ ಸ್ವಯಂ ಸಾಬೀತುಪಡಿಸಿಕೊಂಡಂತಾಗಿದೆ.

ಒಟ್ಟಿನಲ್ಲಿ ಇಷ್ಟು ದಿನ ಶಾಸಕರ ನಿಧಿಯಿಂದ ಗಲ್ಲಿ-ಗಟಾರಕ್ಕೆ ಹಣ ಬಿಡುಗಡೆ ಮಾಡಿದ್ದನ್ನೇ ತನ್ನ ಕಿಸೆಯಿಂದ ಕೊಟ್ಟಂತೆ ಚೇಲಾಗಳಿಂದ ಚಮಚಾಗಿರಿಯ ಜಾಹೀರಾತು ಪತ್ರಿಕೆಗಳಲ್ಲಿ ಹಾಕಿಸಿಕೊಂಡು ಸಂಭ್ರಮಿಸುತ್ತಿದ್ದ ಶಾಸಕ ದಿನಕರ ಶೆಟ್ಟಿ ಈಗ ಪ್ರಚಾರ ಯಾತ್ರೆ-ಗ್ರಾಮ ಭೋಜನ ಎಂಬ ಹೊಸ ಪುಳ್ಚಾಟ ಮಾಡುತ್ತಿದ್ದಾರಷ್ಟೇ. ಇದು ಶೆಟ್ಟರ ರಾಜಕೀಯ ದಿವಾಳಿಕೋರತನ-ಶಾಸಕನ ಬಗ್ಗೆ ಜನರಿಗಿರುವ ಬೇಸರ-ತಾತ್ಸಾರದ ಪ್ರತೀಕವಾಗಿದೆ! ಶಾಸಕ ಶೆಟ್ಟರ ಸ್ಟಂಟ್‌ಗಳು ಕ್ಷೇತ್ರದ ಜನರಿಗೆ ಪುಕ್ಕಟೆ ಮನರಂಜನೆಯಂತೂ ನೀಡುತ್ತಿದೆ!

-ನಹುಷ

▶5

ಸೋಮಣ್ಣನ ಬಂಟರ ಅಟ್ಟಹಾಸ

ಗಂಗೊಂಡನಹಳ್ಳಿಗೆ ಕೌನ್ಸಿಲರ್ ಆಗೇ ತೀರುತ್ತಾನೆ ಎನ್ನುವಮಟ್ಟಿಗೆ ನಯಾಜ್‌ಗೆ ವರ್ಚಸ್ಸಿದೆ. ನಯಾಜ್ ಬದಿಗೊತ್ತಿ ತಾನು ಭಾವಿ ಕೌನ್ಸಿಲರ್ ಹುದ್ದೆಗೇರುವುದು ಹಳೇ ಪಂಟರ್ ಮನ್ಸೂರ್‌ನ ಲೆಕ್ಕಾಚಾರ.

ಬೆಂಗಳೂರಿನ ಮುಸ್ಲಿಂ ಅಂಡರ್‌ವರ್ಲ್ಡ್ ಮಟ್ಟಿಗೆ ಮನ್ಸೂರ್ ಎಂಬ ಶಬ್ದವನ್ನು ಯಾರೇ ಹಳೇ ರೌಡಿಯೊಬ್ಬ ಸಲೀಸಾಗಿ ಗುರುತಿಸಬಲ್ಲ. ಒಂದಾನೊಂದು ಕಾಲದಲ್ಲಿ ಕೊತ್ವಾಲ್ ಕೊಲೆ ಆರೋಪಿಯಾಗಿದ್ದ ಬಚ್ಚನ್‌ನ ಹತ್ತಿರದ ಸಂಬಂಧಿ ತಾನೆಂದು ಹೆಮ್ಮೆಯಿಂದ ಹೇಳಿಕೊಳ್ಳುವ ಮನ್ಸೂರ್‌ನದ್ದು ರಿಯಲ್ ಎಸ್ಟೇಟ್ ದಂಧೆ. ಗೋರಿಪಾಳ್ಯದಲ್ಲೇ ಇದ್ದರೆ ತಾನು ಕೌನ್ಸಿಲರ್ ಆಗುವುದು ದುಸ್ತರವೆನಿಸಿದ್ದರಿಂದಲೇ ಇತ್ತೀಚೆಗೆ ಗಂಗೊಂಡನಹಳ್ಳಿಗೆ ವಲಸೆ ಬಂದಿದ್ದಾನೆ. ಇಲ್ಲಿ ಈಗಾಗಲೇ ನಯಾಜ್ ಬಂದು ಬೇರೂರಿರುವುದರಿಂದ ಆತನ ಎದುರಾಳಿಗಳಾದ ರಫೀಕ್ ಮತ್ತು ಸಿರಾಜ್ ಜೊತೆ ಕೈಜೋಡಿಸಿದ್ದಾನೆ. ಮನ್ಸೂರ್‌ನನ್ನು ಬೆನ್ನಿಗಿಟ್ಟುಕೊಂಡ ಸಿರಾಜ್‌ಗೆ ತಾನು ಗಂಗೊಂಡನಹಳ್ಳಿಯ ಡಾನ್ ಆಗಬೇಕೆಂಬ ದುರಾಸೆ.

ಅಷ್ಟಕ್ಕೂ ಸಿರಾಜ್‌ನನ್ನು ಗಂಗೊಂಡನಹಳ್ಳಿಯ ದೈತ್ಯನನ್ನಾಗಿ ಬೆಳೆಸಲು ನಿಂತವಳು ಇದೇ ಏರಿಯಾದ ಬಡ್ಡಿರಾಣಿ ಮಮ್ತಾಜ್. ಸಿರಾಜ್ ಈಕೆಯ ಖಾಸ ಅಳಿಯ. ಮೂಲತಃ ತಮಿಳುನಾಡಿನವನಾದ ಸಿರಾಜ್ ಮೀಟರ್ ಬಡ್ಡಿ ಘಟವಾಣಿ ಮಮ್ತಾಜ್‌ಳ ಮಗಳನ್ನು ಮದುವೆಯಾಗಿ ಗಂಗೊಂಡನಹಳ್ಳಿಗೆ ಕಾಲಿಟ್ಟವನೇ ಅತ್ತೆಯ ಬಡ್ಡಿ ವಸೂಲಿ, ಸೆಟಲ್‌ಮೆಂಟ್, ಕಿತಾಪತಿ, ರೌಡಿಜಮ್ ಇತ್ಯಾದಿಗಳನ್ನೇ ತನ್ನ ಫುಲ್‌ಟೈಂ ದಂಧೆಯನ್ನಾಗಿ ಮಾಡಿಕೊಂಡ. ತನ್ನು ಎಂಬ ಪುಡಿ ರೌಡಿಯನ್ನು ಜೊತೆ ಹಾಕಿಕೊಂಡ. ಪುಡಿಸಾಲ ಕೊಟ್ಟು ಬಡ್ಡಿ, ಚಕ್ರಬಡ್ಡಿ ಏರಿಸಿ ಕೊನೆಗೆ ಬಡವರ ಜೋಪಡಿಯನ್ನೇ ವಶಪಡಿಸಿಕೊಳ್ಳುವ ಮಮ್ತಾಜ್‌ಳ ಗೂಂಡಾಗಿರಿಗೆ ಪೂರಕವಾಗಿಯೇ ಸಿರಾಜ್, ತನ್ನು ಜೋಡಿ ತಲೆ ಎತ್ತಿತು.

ಇಂಥದೊಂದು ಖತರ್‌ನಾಕ್ ಗ್ಯಾಂಗ್ ವಿರುದ್ಧ ದನಿಯೆತ್ತುವ ಧೈರ್ಯ ಮಾಡಿದ ನಯಾಜ್ ಅದಕ್ಕೆಂದು ಆಶ್ರಯಿಸಿದ್ದು ವಿಜಯನಗರದ ಶಾಸಕ ಕೃಷ್ಣಪ್ಪ ಮತ್ತು ಗೋರಿಪಾಳ್ಯದ ಕಾಂಗ್ರೆಸ್ ನಾಯಕ ಅಲ್ತಾಫ್‌ರನ್ನು. ಏಕೆಂದರೆ ರೌಡಿ ಸಿರಾಜ್ ಬೆನ್ನಿಗೆ ಕೇವಲ ಮನ್ಸೂರ್ ಮಾತ್ರವಲ್ಲದೆ ಗೋರಿಪಾಳ್ಯದ ಅಲ್ತಾಫ್ ಕಡುವೈರಿಗಳಾದ ಆರಿಫ್ ಮತ್ತಾತನ ಕ್ರಿಮಿನಲ್ ಪುತ್ರ ಇಮ್ರಾನ್ ಕೂಡ ನಿಂತಿದ್ದರು. ಅಲ್ತಾಫ್ ಸ್ನೇಹಿತನೆಂಬ ಒಂದೇ ಕಾರಣಕ್ಕೆ ನಯಾಜ್‌ನನ್ನು ಮುಗಿಸುವುದು ಗೋರಿಪಾಳ್ಯದ ಇಮ್ರಾನ್‌ನ ಹುನ್ನಾರವಾದರೆ ತಾನು ಗಂಗೊಂಡನಹಳ್ಳಿಗೆ ಡಾನ್ ಆಗಬೇಕೆಂಬ ದುರಾಸೆಗೆ ಸಿರಾಜ್ ಬಿದ್ದಿದ್ದ.

ನಯಾಜ್‌ನನ್ನೋ ಆತನ ಹುಡುಗರನ್ನೋ ಅಟಕಾಯಿಸಿ ಹೊಡೆಯಲೇಬೇಕೆಂದು ಕಾತರಿಸುತ್ತಿದ್ದ ಸಿರಾಜ್, ತನ್ನು, ರಫೀಕ್ ಗ್ಯಾಂಗ್‌ಗೆ ಶಾಸಕ ಪ್ರಿಯಕೃಷ್ಣ ಗಂಗೊಂಡನಹಳ್ಳಿಗೆ ಬರುವ ಸುದ್ದಿ ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂತಾಯ್ತು. ಮೊದಲೇ ಸಜ್ಜಾಗಿದ್ದ ರಫೀಕ್ ಕಾಲು ಕೆರೆದು ಕ್ಯಾತೆ ತೆಗೆದಿದ್ದಾನೆ. ತನಗೆ ಪ್ರಿಯಕೃಷ್ಣರ ಗನ್‌ಮನ್ ರಿವಾಲ್ವರ್ ತೋರಿಸಿದನೆಂದು ಸಿರಾಜ್‌ನ ಕಿವಿ ಕಚ್ಚಿದ್ದಾನೆ. ಇದನ್ನೇ ಕಾಯುತ್ತಿದ್ದ ಸಿರಾಜ್ ಕ್ಷಣಾರ್ಧದಲ್ಲೇ ಪ್ರಿಯಕೃಷ್ಣರ ಗನ್‌ಮನ್ ತನ್ನ ರಿವಾಲ್ವರ್‌ನಿಂದ ಮಸೀದಿ ಅಧ್ಯಕ್ಷ ರಫೀಕ್‌ನನ್ನು ಕೊಲ್ಲಲು ಬಂದನೆಂದೂ, ಹಾರಿಸಿದ ಗುಂಡಿನಿಂದ ಕೂದಲೆಳೆಯಲ್ಲಿ ರಫೀಕ್ ಬಚಾವಾದನೆಂದೂ, ಶಾಸಕರ ಗನ್‌ಮನ್ ಜೊತೆ ಸೇರಿಕೊಂಡು ನಯಾಜ್ ಮತ್ತಾತನ ಶಿಷ್ಯರು ರಫೀಕ್‌ನನ್ನು ಹೊಡೆದರೆಂದೂ ಇಡೀ ಏರಿಯಾ ತುಂಬ ಗುಲ್ಲೆಬ್ಬಿಸಿಬಿಟ್ಟ. ಜೊತೆಗೆ ಮನ್ಸೂರ್ ಗ್ಯಾಂಗ್ ಕೂಡ ಸೇರಿಕೊಂಡು ರಫೀಕ್, ತನ್ನು, ಸಿರಾಜ್ ಮುಂತಾದವರಲ್ಲದೆ ಬಡ್ಡಿರಾಣಿ ಮಮ್ತಾಜ್ ನೇತೃತ್ವದ ಮಹಿಳಾಪಡೆಯೂ ಜಮಾಯಿಸಿದೆ.


ಆ ಹೊತ್ತಿಗಾಗಲೇ ಶಾಲಾ ಕಟ್ಟಡವನ್ನು ಪರಿಶೀಲಿಸಿ ನಯಾಜ್‌ನ ಕಾಂಗ್ರೆಸ್ ಆಫೀಸಿಗೆ ಬಂದು ಇನ್ನೇನು ಮಕ್ಕಳಿಗೆ ಸ್ಕಾಲರ್‌ಶಿಪ್ ವಿತರಿಸಬೇಕೆಂದಿದ್ದ ಶಾಸಕ ಪ್ರಿಯಕೃಷ್ಣರಿಗೆ ಆಘಾತವಾಗುವಂತೆ ರಫೀಕ್, ಸಿರಾಜ್, ತನ್ನು, ಮನ್ಸೂರ್ ಮತ್ತು ಮಮ್ತಾಜ್ ನೇತೃತ್ವದ ನೂರಕ್ಕೂ ಅಧಿಕ ದುಷ್ಕರ್ಮಿಗಳ ತಂಡ ಏಕಾಏಕಿ ಕಾಂಗ್ರೆಸ್ ಕಚೇರಿಗೆ ನುಗ್ಗಿದೆ. ಸಿರಾಜ್‌ನ ಶಿಷ್ಯರು ಹಿಡಿದಿದ್ದ ರಾಡು, ಲಾಂಗು, ದೊಣ್ಣೆಗಳನ್ನು ನೋಡಿದ್ದೇ ಜನ ನೆರೆದಿದ್ದ ಕಾಂಗ್ರೆಸ್ ಕಾರ್ಯಕರ್ತರಿಗೆ ಸುದ್ದಿ ಮುಟ್ಟಿಸಿದ್ದಾರೆ. ತಕ್ಷಣವೇ ಚಂದ್ರಾಲೇಔಟ್ ಇನ್ಸ್‌ಪೆಕ್ಟರ್ ನಾಗರಾಜ್ ಮತ್ತವರ ಪಡೆ ಧಾವಿಸಿ ಬಂದಿದೆ. ಬಹುಶಃ ಪೊಲೀಸರಿಲ್ಲದೇ ಹೋಗಿದ್ದರೆ ದಾಳಿಕೋರರು ಶಾಸಕ ಪ್ರಿಯಕೃಷ್ಣರನ್ನು ಹೊಡೆಯುವ ನೆಪ ಮಾಡಿ ನಯಾಜ್‌ನನ್ನೋ ಆತನ ಹುಡುಗರನ್ನೋ ಹಿಡಿದು ಕತ್ತರಿಸುತ್ತಿದ್ದರೇನೊ!

ತಮಾಷೆಯೆಂದರೆ ಇಷ್ಟೆಲ್ಲಾ ಆದಮೇಲೂ ಇದೇ ರಫೀಕ್, ಸಿರಾಜ್, ಮಮ್ತಾಜ್ ಪಡೆ ಚಂದ್ರಾಲೇಔಟ್ ಪೊಲೀಸ್ ಠಾಣೆಗೆ ಬಂದು ಶಾಸಕರ ವಿರುದ್ಧವೇ ರಿವಾಲ್ವರ್‌ನಿಂದ ಕೊಲೆಗೆ ಯತ್ನಿಸಿದ ಬಗ್ಗೆ ದೂರು ನೀಡಿದೆ. ಎಲ್ಲಿ ಗಲಾಟೆಯಾಗುತ್ತೋ ಎಂದು ಹೆದರಿದ ಪ್ರಿಯಕೃಷ್ಣ ತಮ್ಮ ಕಾರ್ಯಕ್ರಮವನ್ನೇ ರದ್ದುಗೊಳಿಸಿ ಗಂಗೊಂಡನಹಳ್ಳಿಯಿಂದ ಜಾಗ ಖಾಲಿ ಮಾಡಿದ್ದಾರೆ. ಹಾಗೆ ನೋಡಿದರೆ ಪೊಲೀಸರು ಕೇಸು ದಾಖಲಿಸಬೇಕಿದ್ದದ್ದು ರಫೀಕ್ ಮತ್ತು ಸಿರಾಜ್ ಗ್ಯಾಂಗಿನ ವಿರುದ್ಧವೆ. ಆದರೆ ಮಂತ್ರಿ ಸೋಮಣ್ಣ ರಫೀಕ್ ಮತ್ತು ಸಿರಾಜ್ ಗ್ಯಾಂಗಿನ ವಿರುದ್ಧವೇ ಕೇಸು ಹಾಕ್ರೀ... ಬಿಡಬೇಕಲ್ಲ, ಎಮ್ಮೆಲ್ಲೆ ಮತ್ತವರ ಬೆಂಬಲಿಗರ ವಿರುದ್ಧವೇ ಕೇಸು ಹಾಕ್ರೀ... ಎಂದು ಪೊಲೀಸರಿಗೆ ಫೋನಿಸಿಬಿಟ್ಟರು. ಪೊಲೀಸರು ತಾನೇ ಸೋಮಣ್ಣನ ಆಣತಿ ಮೀರಿ ಏನು ಮಾಡಲು ಸಾಧ್ಯ?

ವಿಧಿಯಿಲ್ಲದೆ ಎರಡೂ ತಂಡಗಳನ್ನು ಕೂರಿಸಿ ರಾಜಿಪಂಚಾಯ್ತಿ ನಡೆಸಿ ಸಾಗ ಹಾಕಿದ್ದಾರೆ. ಅಲ್ಲಿಗೆ ರಫೀಕ್, ಸಿರಾಜ್ ಗ್ಯಾಂಗಿನ ಉದ್ದೇಶ ಅರ್ಧ ಈಡೇರಿದೆ. ತಮ್ಮ ಎದುರಾಳಿ ನಯಾಜ್‌ಗೆ ಬಿಸಿ ಮುಟ್ಟಿಸಿದಂತಾಯ್ತು. ಮಂತ್ರಿ ಸೋಮಣ್ಣನ ಶಾಭಾಶ್‌ಗಿರಿಯೂ ದಕ್ಕಿತು. ಶಾಸಕ ಪ್ರಿಯಕೃಷ್ಣರ ಕಾಂಗ್ರೆಸ್ ವಿರುದ್ಧ ಅಪಪ್ರಚಾರವೂ ಸಲೀಸಾಯ್ತು!

ಆದರೆ ಇಷ್ಟಕ್ಕೆ ಇದು ನಿಲ್ಲುತ್ತಾ? ಲೇಔಟ್ ಕೃಷ್ಣಪ್ಪ ಮತ್ತು ಸೋಮಣ್ಣರ ಜಿದ್ದಾಜಿದ್ದಿಯನ್ನು ರಫೀಕ್, ಸಿರಾಜ್ ಪಡೆ ಸದ್ಯ ತನ್ನ ಉದ್ದೇಶಕ್ಕೆ ಬಳಸಿಕೊಂಡಿದೆ. ಇವರಿಗೆ ಗೋರಿಪಾಳ್ಯದ ಪಾತಕಿಗಳಾದ ಇಮ್ರಾನ್, ಆರೀಫ್ ಕುಮ್ಮಕ್ಕಿದೆ. ಸದ್ಯ ನಯಾಜ್ ಬಚಾವಾಗಿದ್ದಾನೆ. ಇವತ್ತಲ್ಲಾ ನಾಳೆ ಗ್ಯಾಂಗ್‌ವಾರ್ ಸ್ಫೋಟಿಸಲ್ಲ ಎನ್ನಲು ಏನು ಗ್ಯಾರಂಟಿ? ಗೋರಿಪಾಳ್ಯದ ಗ್ಯಾಂಗ್‌ವಾರ್ ಅನ್ನು ತನ್ನ ರಾಜಕೀಯಕ್ಕೆ ಬಳಸಿಕೊಳ್ಳಲು ಹೋಗಿ ಅಲ್ತಾಫ್‌ನ ಇಬ್ಬರು ತಮ್ಮಂದಿರ ಹತ್ಯೆಗೆ ಕಾರಣನಾದ ಸೋಮಣ್ಣ ಈಗಾಗಲೇ ಪಾಠ ಕಲಿಯಬೇಕಾಗಿತ್ತು. ಈಗ ಅದೇ ಚಾಳಿಯನ್ನು ರಫೀಕ್, ಸಿರಾಜ್, ಮಮ್ತಾಜ್‌ರಂಥ ಪಾತಕಿಗಳನ್ನು ಬೆಳೆಸುವ ಮೂಲಕ ಮುಂದುವರೆಸಿದ್ದಾರೆಂದರೆ ಪ್ರಶಾಂತವಾಗಿದ್ದ ಗಂಗೊಂಡನಹಳ್ಳಿಗೆ ಬೆಂಕಿ ಬೀಳದೆ ಇರುತ್ತಾ? ಸೋಮಣ್ಣನ ಕ್ರಿಮಿನಲ್ ರಾಜಕೀಯಕ್ಕೆ ಇನ್ನೆಷ್ಟು ತಲೆ ಉರುಳಬೇಕು?


● ರಾ.ಸೋಮನಾಥ್



ಗಲಭೆ ನಡೆದ ಶಾಲಾ ಕಟ್ಟಡ

ವಿಶ್ವನಾಥ ಗೌಡನ ಕಿತಾಪತಿ

ಜೂನ್ 25ರ ಸೋಮವಾರ ಗಂಗೊಂಡನಹಳ್ಳಿಯಲ್ಲಿ ನಡೆದದ್ದೇ ಒಂದಾದರೆ ಪತ್ರಿಕೆ-ಟೀವಿಗಳಲ್ಲಿ ಸುದ್ದಿಯಾಗಿದ್ದೇ ಮತ್ತೊಂದು!




ಶಾಸಕ ಪ್ರಿಯಕೃಷ್ಣರ ಗನ್‌ಮನ್ ರಿವಾಲ್ವರ್ ತೋರಿಸಿದರೆಂದೂ, ಜೊತೆಗಿದ್ದ ಪ್ರಿಯಕೃಷ್ಣರ ಬೆಂಬಲಿಗರೇ ಗಲಾಟೆ ಮಾಡಿದರೆಂದೂ, ಕೃಷ್ಣಪ್ಪ ಬೆಂಬಲಿಗರ ಗೂಂಡಾಗಿರಿ ವಿರುದ್ಧ ಅಸಹಾಯಕ ಮುಸ್ಲಿಮರು ಪೊಲೀಸರಿಗೆ ದೂರು ಕೊಟ್ಟಿದ್ದಾರೆಂದೂ ಕುಚೋದ್ಯದ ವರದಿಗಳು ಹುಟ್ಟಿಕೊಂಡಿದ್ದರ ಹಿಂದಿದ್ದದ್ದು ಸೋಮಣ್ಣನ ಬಂಟ ವಿಶ್ವನಾಥನ ಕೈವಾಡ.

ಈ ವಿಶ್ವನಾಥಗೌಡ ಎಂಬ ಬೋಗಸ್ ಬಿಲ್ ಕಂಟ್ರ್ಯಾಕ್ಟರನನ್ನು ಇತ್ತೀಚೆಗಷ್ಟೇ ಸೋಮಣ್ಣ ಪಾಲಿಕೆಯ ನಾಮನಿರ್ದೇಶಿತ ಕೌನ್ಸಿಲರ್‌ನನ್ನಾಗಿ ನೇಮಿಸಿದ್ದಾರೆ. ಇದಕ್ಕೂ ಮುನ್ನ ಪಾಲಿಕೆ ಕಂಟ್ರಾಕ್ಟ್ ಮಾಡಿಕೊಂಡಿದ್ದು ಕೋಟಿಗಟ್ಟಲೇ ನುಂಗಿಹಾಕಿದ ಈತನ ವಿರುದ್ಧ ಜನ ಲೋಕಾಯುಕ್ತಕ್ಕೆ ದೂರು ನೀಡಿದ್ದಾರೆ. ತನಿಖೆಯಾದರೆ ವಿಶ್ವನಾಥ ಗೌಡ ಜೈಲಿಗೆ ಹೋಗುವುದು ಗ್ಯಾರಂಟಿ. ತನ್ನ ಬೋಗಸ್ ಕಾಮಗಾರಿ, ಕಾಂಟ್ರ್ಯಾಕ್ಟ್ ದಂಧೆಯನ್ನು ಸಂಭಾಳಿಸಬೇಕೆಂದರೆ ವಿಶ್ವನಾಥ ಗೌಡನಿಗೆ ಸೋಮಣ್ಣನ ಭಟ್ಟಂಗಿತನ ಬಿಟ್ಟರೆ ಬೇರೆ ಗತಿಯಿಲ್ಲ. ಸೋಮಣ್ಣನನ್ನು ಒಲೈಸಬೇಕೆಂದರೆ ಅವರ ರಾಜಕೀಯ ಎದುರಾಳಿ ಕೃಷ್ಣಪ್ಪ ಮತ್ತವರ ಪುತ್ರ ಪ್ರಿಯಕೃಷ್ಣರ ವಿರುದ್ಧ ಒಂದಲ್ಲ ಒಂದು ಕ್ಯಾತೆ ತೆಗೆಯುತ್ತಲೇ ಇರಬೇಕು.


ವಿಕಟವೆಂದರೆ ಈತ ಸೋಮಣ್ಣನ ರಾಶಿಗೆ ಕಾಲಿಟ್ಟ ಗಳಿಗೆಯಿಂದಲೇ ಸೋಮಣ್ಣನ ದುರ್ದೆಸೆ ಶುರುವಾಯಿತು. ಮಾಜಿ ಉಪ ಮೇಯರ್ ಪುಟ್ರಾಜುಗೂ ಸೋಮಣ್ಣನಿಗೂ ವೈಮನಸ್ಸು ಹುಟ್ಟು ಹಾಕಿದ್ದೆ ಈತ. ಈತನ ಮಾತು ನಂಬಿಯೇ ಸೋಮಣ್ಣ ತನ್ನ ಅನೇಕ ಬೆಂಬಲಿಗರನ್ನು ದೂರವಿಟ್ಟರು. ಈತನನ್ನು ಜೊತೆ ಹಾಕಿಕೊಂಡಿದ್ದರಿಂದಾಗಿಯೇ ಗೋವಿಂದರಾಜನಗರದಲ್ಲಿ ಸೋಲಾಯಿತು. ಜನ ರೋಸತ್ತರು. ಇಷ್ಟಿದ್ದೂ ಸೋಮಣ್ಣ ಈತನನ್ನು ಏಕೆ ಹತ್ತಿರ ಬಿಟ್ಟುಕೊಳ್ಳುತ್ತಾರೆಂದರೆ, ಬೇರೆ ಯಾರಿಗೂ ಇಲ್ಲದ ಮೀಡಿಯಾ ಕಾಂಟ್ರ್ಯಾಕ್ಟ್ ಈತನಿಗಿದೆಯಂತೆ!

ಒಂದೆರಡು ಸಂಜೆ ಪತ್ರಿಕೆಗಳು, ವಾರಪತ್ರಿಕೆಯೊಂದರ ಲಿಂಕು ಮತ್ತು ಕೆಲ ಟೀವಿಗಳ ಕ್ರೈಂ ವರದಿಗಾರರ ಜೊತೆಗೆ ವಿಶ್ವನಾಥನ ಗೌಡನ ಲಿಂಕಿದೆ. ಅಂಥ ಗತಿಗೆಟ್ಟ ವರದಿಗಾರರಿಗೆ ಪ್ರತಿ ಸಂಜೆ ಪಾನಗೋಷ್ಠಿಯಿಡುತ್ತಾನೆ. ಋಣಕ್ಕೆ ಬಿದ್ದ ಇಂಥ ವರದಿಗಾರರೇ ಪ್ರಿಯಕೃಷ್ಣರ ಗನ್‌ಮನ್ ಪುರಾಣದ ಕತೆ ಹೊಸೆದಿದ್ದಾರೆ. ಸೋಮಣ್ಣನ ದುರಾಚಾರಕ್ಕೆ ಶಾಪದಂತೆ ಒಕ್ಕರಿಸಿದ ವಿಶ್ವನಾಥ ಗೌಡನನ್ನು ಪಾಲಿಕೆಗೆ ನಾಮಕರಣ ಮಾಡಿದ್ದರ ವಿರುದ್ಧ ಈಗ ಬಿಜೆಪಿ ಕಾರ್ಯಕರ್ತರಲ್ಲೇ ಅಸಹನೆ ಭುಗಿಲೆದ್ದಿದೆ.



ರೇಣುಕಾಚಾರ್ಯ

ಹೊನ್ನಾಳಿ ರೇಣುಕಾಚಾರ್ಯನ ತಮ್ಮನೇ ಕ್ರಿಮಿನಲ್ ಗ್ಯಾಂಗಿಗೆ ರಕ್ಷಕ



ರೇಣುಕನ ತಮ್ಮ ರಾಜು

ಅಬಕಾರಿ ಮಂತ್ರಿ ರೇಣುಕಾಚಾರ್ಯರನ್ನು ಬೆಂಬಲಿಸಿ ಗೆಲ್ಲಿಸಿದ ತಪ್ಪಿಗೆ ಹೊನ್ನಾಳಿಯ ಜನಕ್ಕೆ ತಕ್ಕ ಶಿಕ್ಷೆಯಾಗಿದೆ!


ಸಿಕ್ಕಿಬಿದ್ದ ರಾಬರಿಗ್ಯಾಂಗ್ ನಡೆಸಿದ ದರೋಡೆ, ಚೈನ್ ಸ್ನಾಚಿಂಗ್, ಕನ್ನಗಳವು ಇತ್ಯಾದಿ ಪಾತಕಗಳಿಗೆಲ್ಲ ರೇಣುಕಾಚಾರ್ಯನ ಖಾಸಾ ತಮ್ಮ ಎಂ.ಪಿ. ರಾಜುವೇ ಗಾಡ್ ಫಾದರ್!

ಬಿಜೆಪಿ ಸರ್ಕಾರದ ಪಾಪದ ಫಲವೋ, ಬಿಜೆಪಿ ನಾಯಕರ ದುರಾಚಾರವೋ; ಹೊನ್ನಾಳಿ, ಚನ್ನಗಿರಿ ಮತ್ತು ಶಿವಮೊಗ್ಗದ ಸುತ್ತಮುತ್ತ ಕಳೆದೆರಡು ವರ್ಷಗಳಿಂದ ನಡೆಯುತ್ತಿದ್ದ ಚೈನ್ ಸ್ನಾಚಿಂಗ್, ರಾಬರಿ, ಕನ್ನಗಳವುಗಳಿಗೆ ಕಾರಣಕರ್ತರಾದ ಕ್ರಿಮಿನಲ್ ಪಡೆ ಕೊನೆಗೂ ಸಿಕ್ಕಿ ಬಿದ್ದಿದೆ. ದುರಂತವೆಂದರೆ ಇಂಥದೊಂದು ರಾಬರಿಗ್ಯಾಂಗ್ ರಕ್ಷಣೆಗೆ ನಿಂತಿರುವುದು ಮಂತ್ರಿ ರೇಣುಕಾಚಾರ್ಯನ ತಮ್ಮ ರಾಜು. ಈ ತನಕ ರಾಬರಿಗೈದ ಹೊನ್ನಾಳಿಯ ಪ್ರತಿಷ್ಠರೂ, ಬಿಜೆಪಿ ನಾಯಕರುಗಳ ಮಕ್ಕಳನ್ನೂ ಜೈಲು ಪಾಲಾಗದ ಹಾಗೆ ಕಾಪಾಡಿದ್ದೇ ಮಂತ್ರಿ ರೇಣುಕಾಚಾರ್ಯ!

ಅದು ಮಾಮೂಲಿಯ ಕ್ರಿಮಿನಲ್ ಗ್ಯಾಂಗೇನಲ್ಲ. ಕಳೆದ ಜೂನ್ 1ರಂದು ಚನ್ನಗಿರಿ ತಾಲ್ಲೂಕು ಬಸವಾಪಟ್ಟಣದಲ್ಲಿ ಸಂಜೆ ವಾಕಿಂಗ್ ಮಾಡುತ್ತಿದ್ದ ನರ್ಸ್ ಓರ್ವಳ ಮೇಲೆ ದುಷ್ಕರ್ಮಿಗಳ ದಾಳಿಯಾಗಿದೆ. ಐದಾರು ಮಂದಿಯಿದ್ದ ಸರಗಳ್ಳರ ಗ್ಯಾಂಗ್ ಏಕಾಏಕಿ ನರ್ಸ್‌ಳ ಕುತ್ತಿಗೆಗೆ ಕೈಹಾಕಿದ್ದೆ ಆಕೆಯ ಚಿನ್ನದ ತಾಳಿ ಕಿತ್ತು ಪರಾರಿಯಾಗಲೆತ್ನಿಸಿದೆ. ಅಷ್ಟರಲ್ಲೇ ಕಿರುಚಿಕೊಂಡ ನರ್ಸ್ ರಕ್ಷಣೆಗೆ ಧಾವಿಸಿದ ಸಾರ್ವಜನಿಕರು ಪರಾರಿಯಾಗುತ್ತಿದ್ದವರ ಪೈಕಿ ಒಬ್ಬನನ್ನು ಹಿಡಿಯುತ್ತಾರೆ. ಅವನು ಹೊನ್ನಾಳಿಯ ಲೋಕೇಶ್ ನಾಯ್ಕ. ಹೀಗೆ ಸಾರ್ವಜನಿಕರು ಮತ್ತು ಪೊಲೀಸರು ಸೇರಿ ಚೆನ್ನಟ್ಟಿ ಹಿಡಿದ ಸರಗಳ್ಳನನ್ನು ಚನ್ನಗಿರಿ ಸರ್ಕಲ್ ಇನ್ಸ್‌ಪೆಕ್ಟರ್ ಪಿ.ಕೆ.ಪಾಟೀಲ್ ವಶಕ್ಕೆ ತೆಗೆದುಕೊಂಡು ಬಾಯಿ ಬಿಡಿಸಿದರೆ ಇಡೀ ದರೋಡೆ ಗ್ಯಾಂಗಿನ ಭಯಾನಕ ಕಾಂಡವೇ ಬಯಲಾಗುತ್ತದೆ. ಪ್ರಕರಣದ ಆಳ, ಅಗಲ ಅರ್ಥಮಾಡಿಕೊಂಡ ದಾವಣಗೆರೆ ಎಸ್ಪಿ ಲಾಲೂರಾಮ್ ಸುವಿಸ್ತಾರ ತನಿಖೆಯ ಉದ್ದೇಶದಿಂದಲೇ ಹೊನ್ನಾಳಿಯ ಪಿಎಸ್‌ಐ ಕುಮಾರಸ್ವಾಮಿ ಮತ್ತು ಚನ್ನಗಿರಿ ಸರ್ಕಲ್ ಇನ್ಸ್ ಪೆಕ್ಟರ್ ಪಿ.ಕೆ.ಪಾಟೀಲ್‌ಗೆ ತನಿಖೆಯ ಹೊಣೆವಹಿಸಿ ಕೊಡುತ್ತಾರೆ. ಸತತ ಮೂರ್ನಾಲ್ಕು ದಿನಗಳ ಕಾಲ ಲೋಕೇಶ್‌ನಾಯ್ಕನನ್ನು ಬಾಯಿ ಬಿಡಿಸಿದ ಪೊಲೀಸರಿಗೆ ಕಳೆದೆರಡು ವರ್ಷಗಳಿಂದ ಚನ್ನಗಿರಿ, ಹೊನ್ನಾಳಿ ಮತ್ತು ಶಿವಮೊಗ್ಗ ಸುತ್ತಮುತ್ತ ನಡೆದಿದ್ದ ಹತ್ತಾರು ಸರಗಳ್ಳತನ, ರಾಬರಿ, ಮನೆಗಳವು ಪ್ರಕರಣಗಳಿಗೆ ಉತ್ತರ ಸಿಗುತ್ತದೆ.

ಸಿಕ್ಕಿಬಿದ್ದ ರಾಬರಿಗ್ಯಾಂಗ್‌ನ ನಾಯಕನಾಗಿದ್ದವನು ಮಂತ್ರಿ ರೇಣುಕಾಚಾರ್ಯನ ಖಾಸಾ ತಮ್ಮ ಎಂ.ಪಿ.ರಾಜುನ ಬಲಗೈ ಬಂಟ ಮತ್ತು ಬಲಾಢ್ಯ ಕಂಟ್ರಾಕ್ಟರ್ ಓರ್ವನ ಸ್ವಂತ ಮಗ!

ಜೊತೆಗೆ ರೇಣುಕಾಚಾರ್ಯರ ಬೆಂಬಲಿಗರೂ ಹೊನ್ನಾಳಿಯ ಬಿಜೆಪಿಯ ನಾಯಕರೂ ಆಗಿದ್ದ ಒಂದಿಬ್ಬರು ಪುಢಾರಿಗಳ ಮಕ್ಕಳೂ ಇದ್ದರು!



ಪಿ.ಕೆ. ಪಾಟೀಲ್

ಕಳೆದೆರಡು ವರ್ಷಗಳಿಂದ ಈ ಗ್ಯಾಂಗ್ ಹೊನ್ನಾಳಿ, ಚನ್ನಗಿರಿ, ಶಿವಮೊಗ್ಗದ ಆಜುಬಾಜಿನಲ್ಲಿ ಬೇಕಾಬಿಟ್ಟಿ ರಾಬರಿ, ಚೈನ್ ಸ್ನಾಚಿಂಗ್ ನಡೆಸಿತ್ತು. ಹಾಗೇ ದೋಚಿದ್ದ ಆಭರಣಗಳ ಪೈಕಿ ಮುಕ್ಕಾಲು ಕೆ.ಜಿಯಷ್ಟು ಚಿನ್ನವನ್ನು ಪೊಲೀಸರು ವಶಪಡಿಸಿಕೊಂಡಾಗಿತ್ತು. ಜೊತೆಗೆ ರಾಬರಿಗೆ ಬಳಸುತ್ತಿದ್ದ ಬೈಕು, ಲಾಂಗು, ಕಾರದ ಪುಡಿ ಎಲ್ಲವೂ ಜಪ್ತಿಯಾಯಿತು. ಯಾವತ್ತು ಪೊಲೀಸರು ಒಬ್ಬೊಬ್ಬರೇ ರಾಬರಿಗಳನ್ನು ಬೇಟೆ ಮಾಡಲು ನಿಂತರೋ ಹೊನ್ನಾಳಿಗೆ ಹೊನ್ನಾಳಿಯೇ ನಡುಗತೊಡಗಿತು. ಅದಕ್ಕೆ ಕಾರಣ ಮಂತ್ರಿ ರೇಣುಕಾಚಾರ್ಯನ ಬಲಗೈ ಬಂಟ ಮತ್ತು ರೇಣುಕನ ತಮ್ಮ ರಾಜುನ ಬೇನಾಮಿಯಂತಿದ್ದ ಪ್ರಥಮ ದರ್ಜೆ ಗುತ್ತಿಗೆದಾರ ರಾಮಮೂರ್ತಿಯ ಮಗ ರಾಕೇಶನೂ ರಾಬರಿ ಗ್ಯಾಂಗಿನಲ್ಲಿದ್ದ ಮತ್ತು ಸಿಕ್ಕಿಬಿದ್ದ ಹುಡುಗ ಆತನ ಹೆಸರನ್ನು ಬಾಯಿ ಬಿಟ್ಟಿದ್ದಾನೆಂಬ ಸುದ್ದಿ.



ಸಿಕ್ಕಿಬಿದ್ದ ರಾಬರಿ ಗ್ಯಾಂಗ್

ಹೊನ್ನಾಳಿಯ ಮಟ್ಟಿಗೆ ಸದ್ಯ ಅನಭಿಷಕ್ತ ದೊರೆಯಂತಿರುವವನು ರೇಣುಕಾಚಾರ್ಯನ ತಮ್ಮ ರಾಜು. ಇಲ್ಲಿನ ಪೊಲೀಸು, ಅಧಿಕಾರಿಗಳು, ಕಾಂಟ್ರಾಕ್ಟು, ಕಾರುಬಾರು ಎಲ್ಲವೂ ಆತನ ಮೂಗಿನ ನೇರಕ್ಕೆ ನಡೆಯಬೇಕು. ಮಂತ್ರಿಯ ತಮ್ಮ ರಾಜು ಪಾಲಿಗೆ ಕಾಂಟ್ರಾಕ್ಟರ್ ರಾಮಮೂರ್ತಿಯ ಮಾತೇ ವೇದವಾಕ್ಯ. ಆದರೆ ರಾಮಮೂರ್ತಿಯ ಮಗ ರಾಕೇಶನಿಗೆ ಶ್ರೀಮಂತಿಕೆಯ ಜೊತೆ ಮೈತುಂಬಾ ಶೋಕಿಯಿದೆ. ಹೊನ್ನಾಳಿಯ ಜನರೇ ಹೇಳುವಂತೆ ರಾಕೇಶ ತನ್ನದೇ ಒಂದು ಪಡ್ಡೆಗ್ಯಾಂಗ್ ಕಟ್ಟಿಕೊಂಡಿದ್ದ. ನ್ಯಾಮತಿಯ ಇಬ್ಬರು ಬಿಜೆಪಿಯ ಪ್ರತಿಷ್ಠಿತರ ಮಕ್ಕಳು, ಹೊನ್ನಾಳಿಯ ಶಾಂತ ಟಾಕೀಸ್ ಎದುರಿನ ಲೋಕಲ್ ಬಿಜೆಪಿ ಕಾರ್ಯಕರ್ತ ಮತ್ತು ಮಂತ್ರಿ ರೇಣುಕರ ಬೆಂಬಲಿಗ ಮೀನು ಸಿದ್ದಪ್ಪನ ಮಗ ಮೇಲಾ, ಮಂತ್ರಿ ತಮ್ಮ ರಾಜೂನ ರೈಟ್ ಹ್ಯಾಂಡ್ ಮತ್ತು ಹೊನ್ನಾಳಿ ಪಟ್ಟಣ ಪಂಚಾಯ್ತಿಯ ನಾಮನಿರ್ದೇಶನ ಸದಸ್ಯ ಹಂದಿರಾಜು ಅಲಿಯಾಸ್ ಗುಡ್ಡಜ್ಜಿ ರಾಜನೆಂಬ ಧಾಂಡಿಗ ಮುಂತಾದ ಕಿಡಿಗೇಡಿಗಳ ಹಿಂದೇ ರಾಕೇಶನ ಪಡೆಯಲ್ಲಿತ್ತು!

ಹೇಗೂ ರೇಣುಕಾಚಾರ್ಯ ಮಂತ್ರಿಯಾದ್ದರಿಂದ ತಮ್ಮನ್ನು ಯಾವ ಪೊಲೀಸರು ಮುಟ್ಟಲ್ಲ ಎಂಬ ಹಮ್ಮಿಗೆ ಬಿದ್ದೇ ಈ ಗ್ಯಾಂಗ್ ಕಿಡ್ನಾಪ್, ರಾಬರಿ, ಚೈನ್ ಸ್ನಾಚಿಂಗಿಗಿಳಿದಿತ್ತೇ?

ಹೊನ್ನಾಳಿಯ ಕೆಲ ಪತ್ರಕರ್ತರು ಮತ್ತು ಬಿಜೆಪಿ ನಿಷ್ಠ ಕಾರ್ಯಕರ್ತರ ಪ್ರಕಾರ ಪೊಲೀಸರು ರಾಕೇಶ, ಮೇಲಾ ಮತ್ತು ಹಂದಿ ರಾಜುನನ್ನ ಬಂಧಿಸುವುದು ಗ್ಯಾರಂಟಿಯೆಂಬ ಸುದ್ದಿ ಗೊತ್ತಾಗಿದ್ದೇ ರೇಣುಕರ ತಮ್ಮ ರಾಜು ಡೀಲಿಗಿಳಿದಿದ್ದಾನೆ. ಸರ್ಕಲ್ ಇನ್ಸ್‌ಪೆಕ್ಟರ್ ಪಿ.ಕೆ.ಪಾಟೀಲ್ ಮತ್ತು ಎಂ.ಪಿ. ರಾಜು ಮಧ್ಯೆ ಡೀಲು ಕುದುರಿದೆ. ರಾಮಮೂರ್ತಿ ಮಗ ರಾಕೇಶ, ಮೀನು ಸಿದ್ದಪ್ಪ ಮಗ ಮೇಲಾ, ಪಟ್ಟಣ ಪಂಚಾಯ್ತಿ ಮೆಂಬರ್ ಹಂದಿರಾಜು (ಈತನಿಗಿನ್ನು 28 ವರ್ಷ) ಮತ್ತು ಇತರೆ ಬಿಜೆಪಿ ನಾಯಕರ ಮಕ್ಕಳ ಕೈಬಿಟ್ಟು ದಿಕ್ಕುದೆಸೆಯಿಲ್ಲದ ಅಬ್ಬೆಪಾರಿಗಳನ್ನು ಕೇಸಿಗೆ ಸಿಲುಕಿಸಿ ಜೈಲಿಗೆ ದಬ್ಬಲು ಏನೇನು ಬೇಕೋ ಎಲ್ಲವನ್ನು ಮಂತ್ರಿ ತಮ್ಮ ರಾಜು ಕಲ್ಪಿಸಿದ್ದಾನೆ!

ಇದು ಹೊನ್ನಾಳಿಯ ಜನರೇ ಹೇಳುವ ಮಾತು. ಸದ್ಯ ಚನ್ನಗಿರಿ ಇನ್ಸ್‌ಪೆಕ್ಟರ್ ಪಾಟೀಲ್ ಮತ್ತು ಹೊನ್ನಾಳಿ ಪಿಎಸ್‌ಐ ಕುಮಾರಸ್ವಾಮಿ ತಂಡ, ಹೊನ್ನಾಳಿಯ ಶಿವರಾಜು, ಮುಬಾರಕ್, ಮಂಜು, ಅಣ್ಣಪ್ಪ ಮನೋಹರ, ಸುರೇಂದ್ರ ಮತ್ತು ಶಿವಮೂರ್ತಿ ಎಂಬ ಏಳು ಹುಡುಗರನ್ನು ಹಿಡಿದು ಜೈಲಿಗೆ ದಬ್ಬಿದೆ. ಇವರ್‍ಯಾರಿಗೂ ವಯಸ್ಸು ಇಪ್ಪತ್ತು ದಾಟಿಲ್ಲ. ಶುರುವಿನಲ್ಲಿ ಸಿಕ್ಕುಬಿದ್ದು ಬಾಯಿಬಿಟ್ಟವನು ಲೋಕೇಶ್ ನಾಯ್ಕನಾ ಅಥವಾ ಅವನೇ ಪರಾರಿಯಾಗಿದ್ದಾನಾ ಎಂಬ ಬಗ್ಗೆಯೂ ಪೊಲೀಸರು ಬಾಯಿಬಿಡುತ್ತಿಲ್ಲ, ಬಹುಶಃ ಬಿಜೆಪಿ ಪ್ರತಿಷ್ಠಿತರ ಮಕ್ಕಳ ಕ್ರೈಮ್ ಗೊತ್ತಿದ್ದದ್ದು ಈತನಿಗೆ ಮಾತ್ರವೆ?

ಯಾವುದಕ್ಕೂ ಪೊಲೀಸರಲ್ಲಿ ಉತ್ತರವಿಲ್ಲ, ಹೊನ್ನಾಳಿಯಲ್ಲಿ ಹೊಗೆಯಾಡುವ ವದಂತಿಗಳಿಗೂ ಲೆಕ್ಕವಿಲ್ಲ.

ಚನ್ನಗಿರಿ ಇನ್ಸ್‌ಪೆಕ್ಟರ್ ಪಿ.ಕೆ.ಪಾಟೀಲ್ ಹೇಳುವಂತೆ ಇದು 15 ಮಂದಿಯ ಕಿರಾತಕ ಪಡೆ. ಈಗ ಪರಾರಿಯಾಗಿರುವ ಲೋಕೇಶ್‌ನಾಯ್ಕನನ್ನೂ ಸೇರಿ ಪೊಲೀಸರು ಪತ್ತೆ ಹಚ್ಚಿರುವುದು ಕೇವಲ 8 ಮಂದಿಯನ್ನು ಮಾತ್ರ. ಹಾಗಾದರೆ ಉಳಿದ ಏಳು ಮಂದಿ ಯಾರು? ಅಪರಾಧಿಗಳ ಪತ್ತೆಯ ದೃಷ್ಟಿಯಿಂದ ಪೊಲೀಸರು ಬಾಯಿಬಿಡುತ್ತಿಲ್ಲ ಎಂದೇ ಇಟ್ಟುಕೊಂಡರೂ ಏಕೆ ಆ ಏಳು ಮಂದಿಯಲ್ಲಿ ಒಬ್ಬನನ್ನೂ ಈ ತನಕ ಹಿಡಿಯಲಾಗಿಲ್ಲ, ಕನಿಷ್ಠ ಚಾರ್ಜ್‌ಶೀಟಿನಲ್ಲಾದರೂ ಹೆಸರಿರಬೇಕಿತ್ತಲ್ಲವೇ? ಪೊಲೀಸರು ಮುಚ್ಚಿಡುತ್ತಿರುವುದು ಏನನ್ನು?

ನಿಜಕ್ಕೂ ರೇಣುಕಾಚಾರ್ಯರ ಬಲಗೈ ಬಂಟ ಕಂಟ್ರಾಕ್ಟರ್ ರಾಮಮೂರ್ತಿಯ ಮಗ ರಾಕೇಶ ನಿರಪರಾಧಿಯಾಗಿದ್ದರೆ ಆತನ ಹೆಸರೇಕೆ ರಾಬರಿಗ್ಯಾಂಗ್ ಜೊತೆ ಕೇಳಿಬರುತ್ತಿದೆ? ಇದು ರೇಣುಕರ ವಿರೋಧಿಗಳು ಮಾಡುತ್ತಿರುವ ಅಪಪ್ರಚಾರವೆಂದರೆ ಏಕೆ ಈ ಬಗ್ಗೆ ರೇಣುಕಾಚಾರ್ಯ ತೆಪ್ಪಗಾಗಿದ್ದಾರೆ?

ಇಂಥ ಅನೇಕ ವದಂತಿಗಳು ಹೊನ್ನಾಳಿಯಲ್ಲಿ ಹೊಗೆಯಾಡುತ್ತಿವೆಯೆಂದರೆ ಅದಕ್ಕೊಂದು ಕಾರಣ ಇರಲೇಬೇಕು. ರಾಕೇಶ್ ಸೇರಿದಂತೆ ಇಲ್ಲಿನ ಬಿಜೆಪಿ ಪ್ರಮುಖರ ಮಕ್ಕಳ ಅಟ್ಟಹಾಸವನ್ನು ಕಣ್ಣಾರೆ ಕಂಡೇ ಜನ ಹಕೀಕತ್ತು ಬಾಯಿಬಿಟ್ಟಿದ್ದಾರೆ. ದಾವಣಗೆರೆಯ ಎಸ್ಪಿ ಲಾಲೂರಾಮ್ ಪ್ರಾಮಾಣಿಕ ಮತ್ತು ದಕ್ಷ ಎಂಬ ಬಗ್ಗೆ ಎರಡು ಮಾತಿಲ್ಲ. ಆದರೆ ಕೈಕೆಳಗಿನ ಪೊಲೀಸ್ ಅಧಿಕಾರಿಗಳೆಲ್ಲ ಮಂತ್ರಿ ರೇಣುಕಾಚಾರ್ಯನ ಕೃಪೆಯಿಂದಲೇ ಬಂದವರು. ಅಸಲಿ ಕ್ರಿಮಿನಲ್‌ಗಳನ್ನು ಬಿಟ್ಟು ಯಾರೋ ಅಬ್ಬೆಪಾರಿಗಳನ್ನು ಕೇಸಿಗೆ ಸಿಲುಕಿಸಿದರೆ ಮುಂದೊಮ್ಮೆ ಮತ್ತೆ ಇದೇ ಗ್ಯಾಂಗ್ ಇಂಥದ್ದೇ ಕೃತ್ಯಕ್ಕೆ ಕೈಹಾಕುವುದಿಲ್ಲ ಎಂದು ಏನು ಗ್ಯಾರಂಟಿ?

ನಿಜಕ್ಕೂ ರೇಣುಕಾಚಾರ್ಯ ಅಥವಾ ಆತನ ತಮ್ಮ ರಾಬರಿಗ್ಯಾಂಗಿನ ರಕ್ಷಣೆಗೆ ನಿಂತಿದ್ದರೆ ಅದು ಅಕ್ಷಮ್ಯ ಅಪರಾಧವೆ. ಈ ಬಗ್ಗೆ ಸಿಬಿಐ ತನಿಖೆಯ ಹೊರತಾಗಿ ಬೇರೆ ಏನಾದರೂ ಸತ್ಯ ಬಯಲಾಗಲು ಸಾಧ್ಯವೆ?

ಅಂಥದ್ದೊಂದು ತನಿಖೆಗೆ ಒತ್ತಾಯಿಸುವವರಾದರೂ ಯಾರು?

• ರಾ.ಸೋಮನಾಥ್

ವಿಭಿನ್ನ ಲೇಖಕ ಮತ್ತು ವಿಶಿಷ್ಟ ಪ್ರಶಸ್ತಿ

ಜುಲೈ ಒಂದನೇ ತಾರೀಖು ಕನ್ನಡ ಪತ್ರಿಕೋದ್ಯಮ ದಿನ. ಈ ಬಾರಿ ಅದೇ ದಿನ ಬೆಂಗಳೂರಿನ ಗಾಂಧಿಭವನ ಒಂದು ಅರ್ಥಪೂರ್ಣ ಕಾರ್ಯಕ್ರಮಕ್ಕೆ ಸಾಕ್ಷಿಯಾಗಿತ್ತು, ಅಂದು ಭಾರತದ ಹೆಸರಾಂತ ಪತ್ರಕರ್ತ ಪಿ. ಸಾಯಿನಾಥ್‌ರ 'ಎವರಿಬಡಿ ಲವ್ಸ್ ಎ ಗುಡ್ ಡ್ರಾಟ್' ಕೃತಿಯ ಕನ್ನಡ ಭಾಷಾಂತರ ಅವತರಣಿಕೆ 'ಬರ ಅಂದ್ರೆ ಎಲ್ಲರಿಗೂ ಇಷ್ಟ' ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. ಅದಕ್ಕಿಂತ ಮುಖ್ಯವಾಗಿ ಸಾಮಾಜಿಕ ಸಮಸ್ಯೆಯನ್ನು ಮಾಧ್ಯಮದ ಮೂಲಕ ಬೆಳಕಿಗೆ ತಂದು ಅದರ ಬದಲಾವಣೆಗೆ ಕಾರಣರಾದವರಿಗೆ ನೀಡಲಾಗುವ 'ಕೌಂಟರ್ ಮೀಡಿಯಾ' ಪ್ರಶಸ್ತಿಯನ್ನು ಕನ್ನಡದ ಉದಯೋನ್ಮುಖ ಪತ್ರಿಕಾ ಪ್ರತಿಭೆಗಳಾದ ಟಿ.ಕೆ. ದಯಾನಂದ್ ಹಾಗೂ ವಿ.ಗಾಯತ್ರಿ ಅವರಿಗೆ ನೀಡಿ ಸನ್ಮಾನಿಸಿದ್ದು ಸಮಾರಂಭದ ವಿಶೇಷ. ಅಂದಹಾಗೆ ಈ ಪ್ರಶಸ್ತಿಯನ್ನು ಸಾಯಿನಾಥ್‌ರ 'ಎವರಿಬಡಿ ಲವ್ಸ್ ಎ ಗುಡ್ ಡ್ರಾಟ್' ಪುಸ್ತಕಕ್ಕೆ ಸಂದಾಯವಾದ ಗೌರವ ಸಂಭಾವನೆಯಿಂದ ನೀಡಲಾಗುತ್ತಿದೆ. ಈ ಪ್ರಶಸ್ತಿ 25 ಸಾವಿರ ರೂ ನಗದು ಹಾಗೂ ಡಿಜಿಟಲ್ ಕ್ಯಾಮೆರಾವನ್ನು ಒಳಗೊಂಡಿದೆ.

ದಿ ಹಿಂದೂ ಪತ್ರಿಕೆಯ ಗ್ರಾಮೀಣ ವಿಭಾಗದ ಸಂಪಾದಕರಾಗಿರುವ ಪಿ.ಸಾಯಿನಾಥ್ ಹಳ್ಳಿಯ ಜನಜೀವನವನ್ನು ಹತ್ತಿರದಿಂದ ಅರ್ಥಮಾಡಿಕೊಂಡಂತವರು. ಅದಕ್ಕೆಂದೇ ಅವರನ್ನು 'ರೂರಲ್ ರಿಪೋರ್ಟರ್' ಎಂತಲೇ ಗುರುತಿಸಲಾಗುತ್ತದೆ. ನಮ್ಮ ದೇಶದ ರೈತರ ಸವಾಲುಗಳು, ಬರದ ಬವಣೆ, ಅವರಲ್ಲಿನ ಆರೋಗ್ಯ ಸಮಸ್ಯೆಗಳು, ಬಡತನ, ಶೋಷಣೆ, ಹಳ್ಳಿಗಳ ಮೇಲೆ ಜಾಗತೀಕರಣದ ಪ್ರಭಾವ ಹೀಗೆ ಆಧುನಿಕ ಸಮಾಜ ನಿರ್ಲಕ್ಷಿಸುತ್ತಿರುವ ವಾಸ್ತವತೆಗಳನ್ನು ಅವರಷ್ಟು ಚೆನ್ನಾಗಿ ಬಲ್ಲವರು ಮತ್ತೊಬ್ಬರಿರಲಿಕ್ಕಿಲ್ಲ. ಈ ಕಾರಣಕ್ಕೇ ಅವರು ಮಿಕ್ಕೆಲ್ಲ ಪತ್ರಕರ್ತರು ಮತ್ತು ಲೇಖಕರಿಗಿಂತ ವಿಭಿನ್ನವಾಗಿ ನಿಲ್ಲುತ್ತಾರೆ.

ತಾವು ಅಧ್ಯಯನ ಮಾಡಿದ ಭಾರತೀಯ ಗ್ರಾಮೀಣ ಭಾಗದ ಬಡತನ ಮತ್ತು ಬರದ ಸಂಶೋಧನೆಯ ಕುರಿತು ಪಿ.ಸಾಯಿನಾಥ್‌ರು ಬರೆದಿದ್ದ 'ಎವರಿಬಡಿ ಲವ್ಸ್ ಎ ಗುಡ್ ಡ್ರಾಟ್' ಎನ್ನುವ ಪುಸ್ತಕವನ್ನು ಪೆಂಗ್ವಿನ್ ಪ್ರಕಾಶನ ಸಂಸ್ಥೆ ಅದನ್ನು ಪ್ರಕಟಿಸಿತ್ತು. ಈ ಪುಸ್ತಕದಿಂದ ಬರುವ ಗೌರವ ಸಂಭಾವನೆಯನ್ನು ತಮ್ಮ ಸ್ವಂತಕ್ಕೆ ಉಪಯೋಗಿಸಿಕೊಳ್ಳದೆ ಗ್ರಾಮೀಣ ಭಾಗದ ಅಧ್ಯಯನ ಮತ್ತು ವರದಿ ಪ್ರಕಟಣೆಗಳಲ್ಲಿ ಗಮನಾರ್ಹ ಸಾಧನೆ ಮಾಡಿದವರಿಗೆ ಪ್ರಶಸ್ತಿಯ ರೂಪದಲ್ಲಿ ನೀಡುತ್ತೇನೆಂದು ಅವರು ಅಂದೇ ತಿಳಿಸಿದ್ದರು. ಆ ಪುಸ್ತಕ ಎಲ್ಲರ ನಿರೀಕ್ಷೆ ಮೀರಿ ಜನಪ್ರಿಯವಾಗಿದ್ದು ಮಾತ್ರವಲ್ಲ, ಅವರಿಗೆ ಮ್ಯಾಗ್ಸೆಸ್ಸೆ ಪ್ರಶಸ್ತಿಯನ್ನೂ ತಂದುಕೊಟ್ಟಿತ್ತು. ತಮ್ಮ ಮಾತಿನಂತೆ ಕೌಂಟರ್ ಮೀಡಿಯಾ ಎಂಬ ಪ್ರಶಸ್ತಿಯನ್ನು ಸ್ಥಾಪಿಸಿ ಪ್ರತಿವರ್ಷ ನೀಡುತ್ತಾ ಬರುತ್ತಿದ್ದಾರೆ. ಈ ಬಾರಿ ರಾಜ್ಯದಲ್ಲಿ ಮಲ ಹೊರುವ ಅನಿಷ್ಟ ಪದ್ಧತಿ ಜೀವಂತವಾಗಿರುವುದನ್ನು ಗುರುತಿಸಿ, ವ್ಯಾಪಕ ಅಧ್ಯಯನ ನಡೆಸಿ ಸರ್ಕಾರದ ನೀತಿ ನಿರೂಪಣೆಗೆ ಕಾರಣರಾಗಿದ್ದಕ್ಕಾಗಿ ಟಿ. ಕೆ. ದಯಾನಂದ್ ಅವರನ್ನು ಹಾಗೂ ರೈತರ ಲೋಕದ ಸಂಕಷ್ಟಗಳನ್ನು ಮಾಧ್ಯಮದ ಮೂಲಕ ಬಿಚ್ಚಿಟ್ಟ ಕಾರಣಕ್ಕಾಗಿ ವಿ. ಗಾಯತ್ರಿ ಅವರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿತ್ತು.



ಈಗಾಗಲೇ ಹಲವಾರು ಭಾಷೆಗಳಿಗೆ ಅನುವಾದವಾಗಿರುವ ಆ ಕೃತಿಯನ್ನು ಪತ್ರಕರ್ತ ಜಿ.ಎನ್.ಮೋಹನ್ ಕನ್ನಡಕ್ಕೆ 'ಬರ ಅಂದ್ರೆ ಎಲ್ಲರಿಗೂ ಇಷ್ಟ' ಎನ್ನುವ ಹೆಸರಿನಲ್ಲಿ ಭಾಷಾಂತರಿಸಿದ್ದಾರೆ. ಅವತ್ತು ಆ ಪುಸ್ತಕವನ್ನೂ ಲೋಕಾರ್ಪಣೆ ಮಾಡಲಾಯಿತು. ಕನ್ನಡದ ಖ್ಯಾತ ಸಾಹಿತಿ ದೇವನೂರು ಮಹಾದೇವ ಪುಸ್ತಕ ಬಿಡುಗಡೆ ಮಾಡುವುದರ ಜೊತೆಗೆ ಆ ಇಬ್ಬರು ಪ್ರತಿಭೆಗಳಿಗೆ ಪ್ರಶಸ್ತಿ ನೀಡುವ ಜವಾಬ್ದಾರಿಯನ್ನೂ ನಿರ್ವಹಿಸಿದ್ದರು. ಕೊನೆಗೆ ಮಾಧ್ಯಮ ಮತ್ತು ಅಭಿವೃದ್ಧಿ ಕುರಿತು ಪಿ.ಸಾಯಿನಾಥರು ನೀಡಿದ ಉಪನ್ಯಾಸ ನಿಜಕ್ಕೂ ಮನೋಜ್ಞವಾಗಿತ್ತು.

ಆ ಸರಳ ಸಮಾರಂಭ ಕನ್ನಡ ಪತ್ರಿಕೋದ್ಯಮ ದಿನದ ಆಚರಣೆಗೆ ಸಾರ್ಥಕತೆ ತಂದುಕೊಟ್ಟಿದ್ದು ಮಾತ್ರ ಸುಳ್ಳಲ್ಲ........

ಚಿಕ್ಕಮಗಳೂರು

ಮಾನಭಂಗಕ್ಕೆ ಪ್ರಯತ್ನಿಸಿದ ಎಸ್‌ಐ ಸಸ್ಪೆಂಡ್

ಜನರ ರಕ್ಷಣೆಯ ಹೊಣೆ ಹೊತ್ತುಕೊಂಡ ಪೊಲೀಸರು ...ಕ್ಷಣೆಯಲ್ಲಿ ತೊಡಗಿದ್ದನ್ನು ಕಂಡಿದ್ದೇವೆ. ಭ್ರಷ್ಟ ಪೊಲೀಸರು ...ಚ ಸ್ವೀಕರಿಸುತ್ತಿದ್ದಾಗ ಸಿಕ್ಕಿಹಾಕಿಕೊಂಡಿದ್ದನ್ನೂ ನೋಡಿ ...ವೆ. ಆದರೆ ಎಸ್‌ಐ ಒಬ್ಬ ಮಹಿಳೆಯ ಮಾನಭಂಗಕ್ಕೆ ...ಯತ್ನಿಸಿ ಸಸ್ಪೆಂಡ್ ಆಗಿರುವುದನ್ನು ಬಹುಶಃ ಯಾರೂ ...ಲ್ಲಿಯ ತನಕ ಕಂಡುಕೇಳಿರಲಿಕ್ಕಿಲ್ಲ. ಅಂತಹದ್ದೊಂದು ...ಘಾತಕಾರಿ ಪ್ರಕರಣ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ...ಲ್ಲೂಕಿನ ಗೋಣಿಬೀಡು ಪೊಲೀಸ್ ಠಾಣೆಯಲ್ಲಿ ನಡೆದಿದೆ.

ಈ ಘಟನೆ ನಡೆದದ್ದು ಜೂನ್ 21ರ ರಾತ್ರಿ 10.30 ...ಅವತ್ತು ಗೋಣಿಬೀಡು ಪೊಲೀಸ್ ಠಾಣೆಯ ಎಎಸ್‌ಐ ...ಪೇಗೌಡ ಎಂಬುವವರು ವರ್ಗಾವಣೆಗೊಂಡಿದ್ದರ ...ನ್ನೆಲೆಯಲ್ಲಿ ಗುಂಡು ಮತ್ತು ತುಂಡಿನ ಪಾರ್ಟಿ ಏರ್ಪಟ್ಟಿತ್ತು.


ಜ್ಯೋತಿ

...ವಮಟ್ಟ ಕುಡಿದ ಪೊಲೀಸ್ ಸಿಬ್ಬಂದಿಯ ತಲೆ ಖಾಕಿ ...ಮಾಕಿನಿಂದ ತಿರುಗುತ್ತಿತ್ತು.

ಅದೇ ಹೊತ್ತಿಗೆ ಮಂಜುನಾಥ್ ಎಂಬುವವನು ...ಣೆಯ ಮೆಟ್ಟಿಲೇರಿದ. ತನ್ನ ಪತ್ನಿ ಜ್ಯೋತಿ ಈಗ ತನ್ನ ... ಮತ್ತು ತಮ್ಮ ಮಕ್ಕಳೊಂದಿಗೆ ಗೋಣಿಬೀಡುವಿನಲ್ಲಿ ...ಸಿಸುತ್ತಿದ್ದಾಳೆ. ಈಗ ಆ ಮನೆಯಿಂದ ಪರ ಪುರುಷನ ... ಕೇಳಿಸುತ್ತಿದೆ. ಆತ ತನ್ನ ಪತ್ನಿಯ ಜೊತೆ ಸರಸದಲ್ಲಿ ...ಡಗಿದ್ದಾನೆ. ಅಲ್ಲಿ ವೇಶ್ಯಾವಾಟಿಕೆ ನಡೆಯುತ್ತಿದೆ ಎಂದು ...ರೋಪಿಸಿದ.

ಇದನ್ನು ಕೇಳಿದ್ದೇ ತಡ, ಗೋಣಿಬೀಡು ಠಾಣೆಯ ...ಸ್‌ಐ ಸುಧಾಕರ ತೋನ್ಸೆಯ ಮೈಮೇಲೆ ಸಾಕ್ಷಾತ್ ...ಡಿನ ದೇವಿಯ ಮಹಿಮೆ ಕಾಣಿಸಿಕೊಂಡಿದೆ. ಆತ ...ಡಲೆ ತನ್ನ ಪೊಲೀಸ್ ಪೇದೆಗಳನ್ನು ಜ್ಯೋತಿ ಮನೆಯ ...ಲೆ ರೇಡು ಮಾಡಲು ಕಳುಹಿಸಿದ್ದಾನೆ.

ದಂಪತಿಯ ಹಿನ್ನೆಲೆ

...ಬೆಸ್ತ ಜನಾಂಗದ ಮಂಜುನಾಥ್ ಮತ್ತು ಒಕ್ಕಲಿಗ ...ಮುದಾಯದ ಜ್ಯೋತಿ ಹಿರಿಯರು ಸಮ್ಮುಖದಲ್ಲೇ ...01ರಲ್ಲಿ ಮದುವೆಯಾಗಿದ್ದರು. ಆದರೆ ಹೆಂಡದ ...ಸನಾಗಿದ್ದ ಪತ್ನಿಯನ್ನು ಪೀಡಿಸುತ್ತಿದ್ದ ಮಂಜುನಾಥನನ್ನು ...10ರಲ್ಲಿ ಜ್ಯೋತಿ ತೊರೆದಿದ್ದಳು. ಅಷ್ಟೇ ಅಲ್ಲ, ಆತನಿಂದ ...ಚ್ಛೇದನ ಕೋರಿ ನ್ಯಾಯಾಲಯದ ಮುಂದೆ ಒಂದು ...ರ್ಷದ ಹಿಂದೆಯೇ ಅರ್ಜಿಯನ್ನೂ ಸಲ್ಲಿಸಿದ್ದಳು.

...ಇಂತಹ ಮಂಜುನಾಥ್ ಬಂದು ತನ್ನ ಪತ್ನಿಯ ವಿರುದ್ಧ ...ಡಿದ ದೂರನ್ನು ಗೋಣಿಬೀಡು ಎಸ್‌ಐ ತೋನ್ಸೆ ...ಅಧಿಕೃತವಾಗಿ ದಾಖಲಿಸಿಕೊಂಡಿಲ್ಲ, ಎಫ್‌ಐಆರ್ ಅನ್ನೂ ...ಹಾರಿಸಿಲ್ಲ, ಮಂಜುನಾಥ್ ಆರೋಪಿಸಿದಂತೆ ಜ್ಯೋತಿ ...ಮನೆಯಲ್ಲಿ ವೇಶ್ಯಾವಾಟಿಕೆ ನಡೆಯುತ್ತಿದ್ದರೆ ನಿಯಮಗಳ ...ಪ್ರಕಾರ ಅದರ ಬಗ್ಗೆ ಹಿರಿಯ ಅಧಿಕಾರಿಗಳಿಗೆ ಕನಿಷ್ಟ ...ಮಾಹಿತಿಯನ್ನೂ ನೀಡಿಲ್ಲ, ಬದಲಾಗಿ ದೂರು ಕೊಟ್ಟ ...ಮಂಜುನಾಥನ ಜೊತೆ ತೋನ್ಸೆ ಇಬ್ಬರು ಪೇದೆಗಳನ್ನು ...ಆಕೆಯ ಮನೆಯತ್ತ ಕಳುಹಿಸಿದ.

...ಮಂಜುನಾಥನ ರಗಳೆಯಿಂದ ರೋಸತ್ತಿದ್ದ ಜ್ಯೋತಿ ...ಮನೆಯ ಕದವನ್ನು ತೆರೆಯಲು ನಿರಾಕರಿಸಿದಳು. ಆಗ ...ಪೇದೆಗಳು ತೋನ್ಸೆಗೆ ಫೋನ್ ಮಾಡಿ "ಈ ಯಮ್ಮ ...ಬಾಗಿಲು ತೆಗೀತಿಲ್ಲ ಸಾರ್" ಎಂದು ಹೇಳಿದರು. ಆಗ ...ತೋನ್ಸೆ ತಾನೇ ಫೀಲ್ಡಿಗೆ ಇಳಿದ. ಲಾಠಿಯನ್ನು ಗಿರಗಿರನೆ ...ತಿರುಗಿಸುತ್ತಾ ಆರು ಮಂದಿ ಸಿಬ್ಬಂದಿಗಳೊಂದಿಗೆ ಜ್ಯೋತಿ ...ಮನೆಯ ಮುಂದೆ ಪ್ರತ್ಯಕ್ಷನಾದ.

...ತೋನ್ಸೆ ಒಂದೇಸಮನೆ ಬಾಗಿಲು ಬಡಿದ. ಬೆಲ್‌ಅನ್ನು ...ಒತ್ತಿದ. ಜಪ್ಪಯ್ಯ ಅಂದರೂ ಜ್ಯೋತಿ ಬಾಗಿಲು ತೆರೆಯಲಿಲ್ಲ, ...ಆಗ ತೋನ್ಸೆ ಪೊಲೀಸ್ ಭಾಷೆ ಪ್ರಯೋಗಿಸಿದ. ತಾನು ...ಬಾಗಿಲನ್ನು ತೆರೆಯದಿದ್ದರೆ ತೋನ್ಸೆ ಬಾಗಿಲನ್ನೇ ...ಮುರಿದುಹಾಕುತ್ತಾನೆ ಎಂದು ಹೆದರಿದ ಜ್ಯೋತಿ ಕೊನೆಗೂ ...ಬಾಗಿಲು ತೆರೆದಳು.

...ಹುಲಿಯಂತೆ ಮನೆಯೊಳಗೆ ನುಗ್ಗಿದ ತೋನ್ಸೆ "ನಿನ್ನ ...ಮನೆಯಲ್ಲಿ ಯಾರಿದ್ದಾರೆ? ಎಷ್ಟು ಜನ ಗಂಡಸರು ಇದ್ದಾರೆ?" ...ಎಂದೆಲ್ಲ ಅರಚುತ್ತಾ ಮನೆಯ ಇಂಚಿಂಚೂ ಜಾಲಾಡಿದ. ...ಯಾರೂ ಸಿಗದಿದ್ದಾಗ "ಬೀರುವಿನಲ್ಲಿ ಗಂಡಸರನ್ನು ...ಬಚ್ಚಿಟ್ಟಿರಬೇಕು" ಎಂದು ಹೇಳಿ ಬೀರು ತೆಗೆದು ಅದನ್ನೂ ...ಜಾಲಾಡಿದ. ಜ್ಯೋತಿ ಹೇಳುವ ಪ್ರಕಾರ ಆಕೆ ಬೀರುವಿನಲ್ಲಿ ...ಇಟ್ಟಿದ್ದ ಐದು ಸಾವಿರ ರೂಪಾಯಿಗಳು ಕಾಣೆಯಾದವು.

ಯಾರೂ ಸಿಗದಿದ್ದಾಗ ಆಕ್ರೋಶಗೊಂಡ ತೋನ್ಸೆ ಜ್ಯೋತಿ ತೊಟ್ಟಿದ್ದ ನೈಟಿಯ ಕುತ್ತಿಗೆ ಹತ್ತಿರ ಕೈಹಾಕಿ ಆಕೆಯನ್ನು ಎಳೆದ. ಆಗ ಆಕೆಯ ನೈಟಿ ಹರಿದುಹೋಯಿತು. ಜೊತೆಗೆ ಆಕೆ ಕೊರಳಿಗೆ ಹಾಕಿಕೊಂಡಿದ್ದ 30 ಗ್ರಾಂ ಚಿನ್ನದ ಸರವೂ ಮಂಗಮಾಯವಾಯಿತು. ನೈಟಿ ಹರಿದಿದ್ದರಿಂದ ತನ್ನ ಮೈ ಮುಚ್ಚಿಕೊಳ್ಳಲು ಜ್ಯೋತಿ ತನ್ನ ಎದುರಿಗಿದ್ದ ಬೆಡ್‌ಶೀಟನ್ನು ಎಳೆದುಕೊಂಡಳು. ಆಗ ತೋನ್ಸೆ "ಇವಳೊಂದಿಗೆ ಪರ್ಸನಲ್ ಆಗಿ ನಾನು ಮಾತಾಡಬೇಕು, ನೀವು ಹೋಗಿ" ಎಂದು ತನ್ನ ಜೊತೆಗಿದ್ದ ಸಿಬ್ಬಂದಿಗಳನ್ನು ಹೊರಗೆ ಕಳುಹಿಸಿದ.

ತೋನ್ಸೆ ಎಂತಹ ನೀಚನೆಂದರೆ ಜ್ಯೋತಿ ತೊಟ್ಟಿದ್ದ ನೈಟಿಯನ್ನು ಕಿತ್ತುಹಾಕಲು ಪ್ರಯತ್ನಿಸಿದ. ಜ್ಯೋತಿ ಕೊಟ್ಟಿರುವ ದೂರಿನಲ್ಲಿ ಆಕೆ "ನನ್ನ ಎದೆಯನ್ನು ಗಟ್ಟಿಯಾಗಿ ಹಿಡ್ದು 'ಏನ್ ಸೈಜು ಮಾರಾಯ ಇದು? ಏನ್ ಫುಡ್ ತಿಂತೀಯಾ ನೀನು? ಗೋಣಿಬೀಡಿನಲ್ಲಿ ಇಂತಹ ರಿಸ್ಕ್ ಮಾಡ್ಕೊಂತಿರ್ಲಿಲ್ಲ, ನಿಜವಾಗ್ಲೂ ನಿನ್ ಗಂಡಾನಾ ಅವನು? ಅವನು ಸರಿಯಾಗಿ ಮೆಷಿನ್ ಬಿಟ್ಟಿದ್ರೆ ನೀನು ಈ ರೀತಿ ಮಾಡ್ತಾ ಇರ್ಲಿಲ್ಲ" ಎಂದು ತನಗೆ ತೋನ್ಸೆ ಕೈಯಲ್ಲಾದದ್ದನ್ನು ಹೇಳಿದ್ದಾಳೆ. ಕುಡಿದ ಅಮಲಿನಲ್ಲಿ ಹೀಗೆಲ್ಲ ಅಶ್ಲೀಲವಾಗಿ ಒದರಿದ ತೋನ್ಸೆ ಆನಂತರ ಆಕೆಯನ್ನು ಮಂಚದ ಮೇಲೆ ದೂಡಿ ಆಕೆಯ ಲಂಗವನ್ನು ಮೇಲಕ್ಕೆ ಎತ್ತಲು ಪ್ರಯತ್ನಿಸಿದ.


ಶಶಿಕುಮಾರ್

ತೋನ್ಸೆಯಿಂದ ಬಚಾವಾಗಲು ಜ್ಯೋತಿ ಜೋರಾಗಿ ಚೀರಿಕೊಂಡಿದ್ದಾಳೆ. ಆಕೆಯ ಪಕ್ಕದ ಮನೆಯ ಮೂವರು ಮುಸ್ಲಿಮ್ ಯುವಕರಿಗೆ ಆ ಅಪರಾತ್ರಿಯಲ್ಲಾಗುತ್ತಿದ್ದ ಗದ್ದಲದ ಸದ್ದು ಕೇಳಿಸಿದೆ. ಅವರು ಹೊರಗೆ ಬಂದು ನೋಡಿದಾಗ ಪರಿಸ್ಥಿತಿಯ ಅರಿವಾಗಿದೆ. ಅವರು ತೋನ್ಸೆಯ ಕೈಕಾಲು ಹಿಡಿದು "ಆಕೆಯನ್ನು ಬಿಟ್ಟುಬಿಡಿ" ಎಂದು ಬೇಡಿಕೊಂಡಿದ್ದಾರೆ. ಆದರೆ ತೋನ್ಸೆ ಅವರನ್ನು ದನಕ್ಕೆ ಬಡಿದಂತೆ ಬಡಿದಿದ್ದಾನೆ.

ಹೋಗುವ ಮುನ್ನ ತೋನ್ಸೆ "ನನ್ನೊಂದಿಗೆ ಸಹಕರಿಸದಿದ್ದರೆ ನಿನ್ನನ್ನು ಕೊಲೆ ಮಾಡುತ್ತೇನೆ. ನಿನ್ನ ಕೊಲೆಯನ್ನು ನಿನಗೆ ಸಹಾಯ ಮಾಡಲು ಬಂದವರ ಮೇಲೆ ಹಾಕುತ್ತೇನೆ. ಹಿಂದೂ-ಮುಸ್ಲಿಂ ಕೇಸ್ ಹಾಕಿ ನಿಮ್ಮನ್ನೆಲ್ಲ ಫಿಟ್ ಪಾಡುತ್ತೇನೆ" ಎಂದು ಎಲ್ಲರನ್ನು ಬೆದರಿಸಿದ್ದಾನೆ.

ಹಲ್ಲೆಗೊಳಗಾದ ಮೂವರು ಯುವಕರು ಮರುದಿನ ಮೂಡಿಗೆರೆ ಸರಕಾರಿ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದರು. ಅವರಿದ್ದ ಆಸ್ಪತ್ರೆಗೇ ತನ್ನ ಭಂಟರನ್ನು ಕಳುಹಿಸಿದ ತೋನ್ಸೆ ತನ್ನ ವಿರುದ್ಧ ದೂರು ಕೊಡಬಾರದೆಂದು ಅವರನ್ನು ಬೆದರಿಸಿದ. ಅವರೆಲ್ಲರೂ "ನನಗೆ ಯಾವುದೇ ವಿಚಾರ ಗೊತ್ತಿಲ್ಲ" ಎಂದು ಹೇಳಿದರು. ಹಾಗೆ ಅವರಿಂದ ಹೇಳಿಸುವ ಮೂಲಕ ತೋನ್ಸೆ ಕೇಸ್ ಅನ್ನು ಮುಗಿಸಲು ಯತ್ನಿಸಿದ.

ಜ್ಯೋತಿ ನೀಡಿದ್ದ ದೂರಿನ ಮೇರೆಗೆ ಎಸ್ಪಿ ಶಶಿಕುಮಾರ್ ಪ್ರಕರಣ ದಾಖಲಿಸಲು ಡಿವೈಎಸ್‌ಪಿ ವೇದಮೂರ್ತಿಗೆ ಸೂಚಿಸಿದ್ದಾರೆ. ಜೊತೆಗೆ ಎಸ್‌ಐ ಸುಧಾಕರ ತೋನ್ಸೆಯನ್ನು ಅಮಾನತ್ತು ಮಾಡಿ ತನಿಖೆಗೆ ಆದೇಶಿಸಿದ್ದಾರೆ.

ಜ್ಯೋತಿಯ ಇತಿಹಾಸ


ವಿಶೇಷವೆಂದರೆ ಗ್ರಾಮದಲ್ಲಿ ಜ್ಯೋತಿಗೆ ಉತ್ತಮ ಹೆಸರಿಲ್ಲ, ಅಲ್ಲಿನ ಯಾರೊಬ್ಬರೂ ಆಕೆಯನ್ನು ಸತಿಸಾವಿತ್ರಿ ಎನ್ನುವುದಿಲ್ಲ. ಎರಡು ವರ್ಷಗಳ ಹಿಂದೆ ದಾರದಹಳ್ಳಿ ಎಂಬಲ್ಲಿ ಪ್ಲಾಂಟರೊಬ್ಬರ ಕಾಫಿ ತೋಟದಲ್ಲಿ ಕೆಲಸ ಮಾಡಿಕೊಂಡಿದ್ದಾಗ ಪತ್ನಿಪೀಡಕ ಮಂಜುನಾಥನ ಮೇಲೆ ಜ್ಯೋತಿ ಮೂಡಿಗೆರೆ ಪೊಲೀಸ್ ಠಾಣೆಯಲ್ಲಿ ವರದಕ್ಷಿಣೆ ಕೇಸು ದಾಖಲಿಸಿದ್ದಳು. ಬಳಿಕ ಆತನೊಂದಿಗೆ ಬಾಳ್ವೆ ಅಸಾಧ್ಯ ಎನ್ನಿಸಿದಾಗ ಡೈವೋರ್ಸ್‌ಗಾಗಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಳು. ಈ ನಡುವೆ ಪತಿ, ಪತ್ನಿಗೆ ಯಾವುದೇ ಸಂಬಂಧವಿರಲಿಲ್ಲ. ಆದರೂ ಮಂಜುನಾಥ ಆ ದಿನ ಪೊಲೀಸರೊಂದಿಗೆ ಬಂದು ಈ ಅವಾಂತರಗಳನ್ನು ಸೃಷ್ಟಿಸಿದ್ದ.

ಮಂಜುನಾಥ್ ಹೇಳಿದ್ದ ಪ್ರಕಾರ ಜ್ಯೋತಿ ಮನೆಯಲ್ಲಿ ವೇಶ್ಯಾವಾಟಿಕೆ ನಡೆಯುತ್ತಿದ್ದರೆ ಆಕೆಯನ್ನು ಬಂಧಿಸಬೇಕಿತ್ತು. ಆಕೆಯ ಮೆಡಿಕಲ್ ಚೆಕಪ್ ಮಾಡಿಸಬೇಕಿತ್ತು. ಅದ್ಯಾವುದನ್ನೂ ಪೊಲೀಸರು ಮಾಡಿಲ್ಲ.

ಭ್ರಷ್ಟ ತೋನ್ಸೆ

ಇಲ್ಲಿ ಅಕ್ರಮ ಮರಳು ಗಣಿಗಾರಿಕೆ ಮತ್ತು ಸಾಗಾಟದ ಮಂದಿಗೆ, ಕಳ್ಳಕಾಕರಿಗೆ, ಖದೀಮರ ರಕ್ಷಣೆಗೆ ಬೆಂಗಾವಲಾಗಿದ್ದ ತೋನ್ಸೆಯನ್ನು ಹತ್ತಿರದಿಂದ ಬಲ್ಲವರು ಈಗ ಆತನನ್ನು ಕ್ಯಾಕರಿಸಿ ಉಗಿಯುತ್ತಿದ್ದಾರೆ. ಕೆಲವು ತಿಂಗಳುಗಳ ಹಿಂದೆ ಮೂಡಿಗೆರೆ ತಾಲ್ಲೂಕಿನ ಜೀವನದಿಯಾದ ಹೇಮಾವತಿಯು ಅಕ್ರಮ ಮರಳು ಗಣಿಗಾರಿಕೆಗೆ ಸಿಲುಕಿ ಬರಿದಾಗುತ್ತಿದ್ದರೆ ಈ ತೋನ್ಸೆ ಪ್ರಕರಣ ದಾಖಲಿಸುವುದಿರಲಿ, ಅತ್ತ ಕಡೆಗೆ ಸುಳಿದಾಡಲಿಲ್ಲ, ಬದಲಾಗಿ ಅಕ್ರಮ ಗಣಿಗಾರಿಕೆಯವರಿಂದ ಮಾಮೂಲು ತಿಂದು ಸುಮ್ಮನಾಗಿದ್ದ.


ಈಗ ಮಹಿಳೆಯೊಬ್ಬಳ ಮಾನಭಂಗಕ್ಕೆ ಪ್ರಯತ್ನಿಸಿ ತೋನ್ಸೆ ಸಸ್ಪೆಂಡ್ ಆಗಿದ್ದಾನೆ. ಈ ದುಷ್ಟನಿಗೆ ಎಂತಹ ಶಿಕ್ಷೆ ನೀಡಬೇಕು?


ಸುಧಾಕರ ತೋನ್ಸೆ

ಕುಡಿದ ಮತ್ತಿನಲ್ಲಿದ್ದ ಎಸ್‌ಐ ಸುಧಾಕರ ತೋನ್ಸೆ ಒಂದೇ ಸಮನೆ ಜ್ಯೋತಿಯ ಮನೆ ಬಾಗಿಲು ಬಡಿದ. ಬೆಲ್‌ಅನ್ನು ಒತ್ತಿದ. ಜಪ್ಪಯ್ಯ ಅಂದರೂ ಜ್ಯೋತಿ ಬಾಗಿಲು ತೆರೆಯಲಿಲ್ಲ. ಆಗ ತೋನ್ಸೆ ಪೊಲೀಸ್ ಭಾಷೆ ಪ್ರಯೋಗಿಸಿದ. ಹೆದರಿದ ಜ್ಯೋತಿ ಬಾಗಿಲು ತೆರೆದಳು. ಹುಲಿಯಂತೆ ಮನೆಯೊಳಗೆ ನುಗ್ಗಿದ ತೋನ್ಸೆ "ನಿನ್ನ ಮನೆಯಲ್ಲಿ ಯಾರಿದ್ದಾರೆ? ಎಷ್ಟು ಜನ ಗಂಡಸರು ಇದ್ದಾರೆ?" ಎಂದೆಲ್ಲ ಅರಚುತ್ತಾ ಮನೆಯ ಇಂಚಿಂಚೂ ಜಾಲಾಡಿದ. ಯಾರೂ ಸಿಗದಿದ್ದಾಗ "ಬೀರುವಿನಲ್ಲಿ ಗಂಡಸರನ್ನು ಬಚ್ಚಿಟ್ಟಿರಬೇಕು" ಎಂದು ಹೇಳಿ ಬೀರು ತೆಗೆದು ಅದನ್ನೂ ಜಾಲಾಡಿದ. ಜ್ಯೋತಿ ಹೇಳುವ ಪ್ರಕಾರ ಆಕೆ ಬೀರುವಿನಲ್ಲಿ ಇಟ್ಟಿದ್ದ ಐದು ಸಾವಿರ ರೂಪಾಯಿಗಳು ಕಾಣೆಯಾದವು. ಯಾರೂ ಸಿಗದಿದ್ದಾಗ ಆಕ್ರೋಶಗೊಂಡ ತೋನ್ಸೆ ಜ್ಯೋತಿ ತೊಟ್ಟಿದ್ದ ನೈಟಿಯ ಕುತ್ತಿಗೆ ಹತ್ತಿರ ಕೈಹಾಕಿ ಆಕೆಯನ್ನು ಎಳೆದ. ಆಗ ಆಕೆಯ ನೈಟಿ ಹರಿದುಹೋಯಿತು. ಜೊತೆಗೆ ಆಕೆ ಕೊರಳಿಗೆ ಹಾಕಿಕೊಂಡಿದ್ದ 30 ಗ್ರಾಂ ಚಿನ್ನದ ಸರವೂ ಮಂಗಮಾಯವಾಯಿತು. ಅನಂತರ ಇತರೆ ಸಿಬ್ಬಂದಿಯನ್ನು ಹೊರಗೆ ಕಳುಹಿಸಿದ ತೋನ್ಸೆ ಜ್ಯೋತಿಯ ಮೇಲೆ ಅತ್ಯಾಚಾರ ಎಸಗಲು ಮುಂದಾದ.....

■ ಅಜೀಜ್ ಕಿರುಗುಂದ


ತೋನ್ಸೆ ದಾಂಧಲೆ ನಡೆಸಿದ ಜ್ಯೋತಿಯ ಮನೆಯ ಒಳನೋಟ


ಆಸ್ಪತ್ರೆಯಲ್ಲಿ ದಾಖಲಾಗಿರುವ ಮುಸ್ಲಿಂ ಯುವಕರು........

ಅಕ್ರಮಗಳಿಗೆ ಕುಖ್ಯಾತಿ ಪಡೆದ ಗೋಣಿಬೀಡು ಠಾಣೆ

ಖಾಕಿ ವಲಯದಲ್ಲಿ ಗೋಣಿಬೀಡು ಪೊಲೀಸ್ ಠಾಣೆ ಜಿಲ್ಲೆಯಲ್ಲೇ ಅತ್ಯಂತ ಬೇಡಿಕೆ ಹೊಂದಿರುವ ಜಾಗವಾಗಿದೆ. ಯಾಕೆಂದರೆ ಇಲ್ಲಿ ಸಂಬಳದೊಂದಿಗೆ ಗಿಂಬಳವೂ ಸಾಕಷ್ಟು ಪ್ರಮಾಣದಲ್ಲಿ ದಕ್ಕುತ್ತದೆ. ಕಳೆದ ಆರು ವರ್ಷಗಳಲ್ಲಿ ಇಲ್ಲಿನ ಮೂರು ಪಿಎಸ್‌ಐಗಳು ಒಬ್ಬರ ಹಿಂದೊಬ್ಬರಂತೆ ವಿವಿಧ ಪ್ರಕರಣಗಳಲ್ಲಿ ಸಸ್ಪೆಂಡಾಗಿದ್ದಾರೆ.

ಮೊದಲು ನಾಗೇಗೌಡ ಎಂಬ ಎಸ್‌ಐ ಲಂಚ ತಿಂದು ಲೋಕಾಯುಕ್ತ ಬಲೆಗೆ ಬಿದ್ದ. ಆತನ ಸ್ಥಾನ ತುಂಬಲಿಕ್ಕೆ ಬಂದ ಸುನೀಲ್ ಕುಮಾರ್ ಡೀಸೆಲ್ ಮಾಫಿಯಾದೊಂದಿಗೆ ಶಾಮೀಲಾಗಿ ಮನೆ ಸೇರಿಕೊಂಡ. ಬಳಿಕ ಬಂದ ಸುಧಾಕರ ತೋನ್ಸೆ ಈಗ ಮಾನಭಂಗ ಪ್ರಕರಣದಲ್ಲಿ ಸಿಲುಕಿಕೊಂಡಿದ್ದಾನೆ.

ಮುಂದೆ ಇಲ್ಲಿಗೆ ಬರಲಿರುವವರ ಭವಿಷ್ಯ ಭಗವಂತನೇ ಬಲ್ಲ.


ಗೋಣಿಬೀಡು ಪೊಲೀಸ್ ಠಾಣೆ

ಜಾಕ್‌ಪಾಟ್

ಜಗದೀಶ್ ಶೆಟ್ಟರ್ ನೂತನ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕಾರ ಮಾಡುವ ಕ್ಷಣಗಣನೆ ಪ್ರಾರಂಭವಾಗಿದೆ. ಇದರರ್ಥ ಹಾಲಿ ಮುಖ್ಯಮಂತ್ರಿ ಸದಾನಂದ ಗೌಡರು ಮುಖ್ಯಮಂತ್ರಿ ಕುರ್ಚಿಯಿಂದ ಕೆಳಗಿಳಿಯುವುದು ಬಹುತೇಕ ಖಚಿತವಾಗಿದೆ. ಈಗ ಪ್ರಶ್ನೆ ಇರುವುದು ಇಷ್ಟೆ: ರಾಷ್ಟ್ರಪತಿ ಚುನಾವಣೆಯ ಮೊದಲು ಮುಖ್ಯಮಂತ್ರಿ ಬದಲಾಗುತ್ತಾರೋ? ಅಥವಾ ರಾಷ್ಟ್ರಪತಿ ಚುನಾವಣೆಯ ನಂತರವೋ ಎಂಬುದು.

ಬಿಜೆಪಿ ಪಕ್ಷದ ರಾಷ್ಟ್ರೀಯ ನಾಯಕ ಲಾಲ್‌ಕೃಷ್ಣ ಅಡ್ವಾನಿ ಅವರನ್ನು ಹೊರತುಪಡಿಸಿ ಬಹುತೇಕ ಎಲ್ಲ ದೆಹಲಿ ನಾಯಕರು ಜಗದೀಶ್ ಶೆಟ್ಟರ್ ಅವರು ಸಿ.ಎಂ. ಕುರ್ಚಿಯನ್ನು ಅಲಂಕರಿಸುವುದಕ್ಕೆ ತಮ್ಮ ಒಪ್ಪಿಗೆಯನ್ನು ನೀಡಿದ್ದಾರೆ. ಆದರೆ ಅಡ್ವಾಣಿ ಮಾತ್ರ ಇನ್ನೂ ತಮ್ಮ ಅಂತಿಮ ನಿರ್ಧಾರವನ್ನು ತಿಳಿಸಿಲ್ಲ. ಅಷ್ಟೇ ಅಲ್ಲ, ಅಡ್ವಾಣಿಯವರನ್ನು ಪ್ರತ್ಯೇಕವಾಗಿ ಭೇಟಿಯಾಗುವ ಜಗದೀಶ್ ಶೆಟ್ಟರ್ ಅವರ ಆಸೆ ನೆರವೇರದೆ ಅವರು ಬರಿಗೈಯಲ್ಲಿ ಬೆಂಗಳೂರಿಗೆ ವಾಪಸಾಗಿದ್ದಾರೆ. ಆದರೂ ಇಂದಲ್ಲ ನಾಳೆ ಅಡ್ವಾಣಿಯವರ ಆಶೀರ್ವಾದ ಪಡೆಯುವ ಹುಮ್ಮಸ್ಸಿನಲ್ಲಿ ಜಗದೀಶ್ ಶೆಟ್ಟರ್ ಮತ್ತವರ ಬಣ ಕಾರ್ಯವೆಸಗುತ್ತಿದೆ.

ಜಗದೀಶ್ ಶೆಟ್ಟರ್ ಮುಖ್ಯಮಂತ್ರಿ ಕುರ್ಚಿಯನ್ನು ಅಲಂಕರಿಸಿದ ತಕ್ಷಣ ಕರ್ನಾಟಕದ ಆಡಳಿತಾರೂಢ ಪಕ್ಷವಾದ ಬಿಜೆಪಿಯಲ್ಲಿನ ಆಂತರಿಕ ಕಲಹಗಳೆಲ್ಲವೂ ಮಾಯವಾದಂತೆಯೇ? ಎಂಬ ಪ್ರಶ್ನೆಗೆ ಮಾತ್ರ ಖಂಡಿತವಾಗಿಯೂ ಸಕಾರಾತ್ಮಕ ಉತ್ತರ ಸಿಗುವುದಿಲ್ಲ, ಏನೇ ಆದರೂ ಜಗದೀಶ್ ಶೆಟ್ಟರ್ ಪಟ್ಟಾಭಿಷೇಕ ಕೂಡ ಬಿಜೆಪಿಯಲ್ಲಿನ ಕಲಹಗಳಿಗೆ ಒಂದು ತಾತ್ಕಾಲಿಕ ಶಮನ ಎಂದೇ ಹೇಳಬಹುದು. ಪಕ್ಷದೊಳಗಿನ ಕೆಲವು ಶಾಸಕರು ಹೇಳುವ ಪ್ರಕಾರ ಶೆಟ್ಟರ್ ಪಟ್ಟಾಭಿಷೇಕದಿಂದ ಹೊಸ ರೀತಿಯ ಒಂದು ವಿವಾದ ಸೃಷ್ಟಿಯಾಗಬಹುದು. ಏನೇ ಆದರೂ ಬಿಜೆಪಿ ಆಂತರಿಕ ಕಲಹದಿಂದ ವಿಮುಕ್ತವಾಗಲು ಸಾಧ್ಯವೇ ಇಲ್ಲ ಎಂಬುದು ಸ್ವತಃ ಬಿಜೆಪಿ ಶಾಸಕರ ಅಭಿಪ್ರಾಯ.

ಯಡ್ಡಿಗೆ ಗೆಲುವಲ್ಲ

ಸದಾನಂದ ಗೌಡರ ಪದಚ್ಯುತಿ ಮತ್ತು ಜಗದೀಶ್ ಶೆಟ್ಟರ ಬಡ್ತಿ ಇವೆರಡು ಘಟನೆಗಳನ್ನು ಸಮೀಕರಿಸಿ ನೋಡಿದರೆ ಯಡಿಯೂರಪ್ಪ ಮತ್ತೆ ಪಕ್ಷ ಮತ್ತು ಸರ್ಕಾರದ ಮೇಲೆ ತನ್ನ ಹತೋಟಿಯನ್ನು ಸಾಧಿಸಿದಂತೆ ಕಾಣಿಸುತ್ತದೆ. ಅಷ್ಟೇ ಅಲ್ಲ, ಯಡಿಯೂರಪ್ಪನವರ ಒತ್ತಡ ತಂತ್ರಕ್ಕೆ ದೆಹಲಿ ವರಿಷ್ಠರು ಮಂಡಿಯೂರಿದಂತೆ ಕಾಣಿಸುವುದು ಕೂಡ ಸಹಜ. ಆದರೆ ಇಡೀ ಘಟನಾವಳಿಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿದರೆ ಜಗದೀಶ್ ಶೆಟ್ಟರ್ ಬಡ್ತಿ ಖಂಡಿತವಾಗಿಯೂ ಯಡಿಯೂರಪ್ಪನವರ ಗೆಲುವು ಅಲ್ಲ ಎಂದೇ ಪಕ್ಷದೊಳಗೆ ಅರ್ಥೈಸಲಾಗುತ್ತಿದೆ.

ಈ ವಾದ ಹೀಗಿದೆ: ಇಂದು ಜಗದೀಶ್ ಶೆಟ್ಟರನ್ನು ಮುಖ್ಯಮಂತ್ರಿ ಪದವಿಯತನಕ ಕರೆದುಕೊಂಡು ಹೋದ ಕೀರ್ತಿ ಖಂಡಿತವಾಗಿಯೂ ಯಡಿಯೂರಪ್ಪನವರಿಗೇ ಸಲ್ಲಬೇಕು. ಆದರೆ ಒಂದು ವೇಳೆ ಪಕ್ಷದ ವರಿಷ್ಠ ಲಾಲ್‌ಕೃಷ್ಣ ಅಡ್ವಾಣಿ ಈ ಬದಲಾವಣೆಗೆ ಒಪ್ಪಿಗೆ ನೀಡದೇ ಇದ್ದರೆ ಜಗದೀಶ್ ಶೆಟ್ಟರ್ ಖಂಡಿತವಾಗಿಯೂ ಮುಖ್ಯಮಂತ್ರಿ ಕುರ್ಚಿಯಲ್ಲಿ ಕುಳಿತುಕೊಳ್ಳಲು ಸಾಧ್ಯವೇ ಇಲ್ಲ, ಈಗ ಅಡ್ವಾಣಿಯವರ ಒಪ್ಪಿಗೆ ಸಿಗಲೇಬೇಕಾದರೆ ಜಗದೀಶ್ ಶೆಟ್ಟರ್ ತನ್ನ ಒಂದು ಕಾಲದ ಖಾಸಾ ದೋಸ್ತ್ ಅನಂತ್ ಕುಮಾರ್ ಅವರ ಸಹಾಯವನ್ನು ಪಡೆಯಲೇಬೇಕಾಗಿದೆ. ಹೀಗಾಗಿ ಸದ್ಯಕ್ಕೆ ತೆರೆಮರೆಯಲ್ಲಿ ಅನಂತ್‌ಕುಮಾರ್ ಮತ್ತು ಜಗದೀಶ್ ಶೆಟ್ಟರ್ ನಡುವೆ ಮಾತುಕತೆಗಳು ನಡೆಯುತ್ತಿವೆ. ಬಹುಶಃ ಅನಂತ್‌ಕುಮಾರ್ ಹಾಕಿರುವ ಷರತ್ತುಗಳನ್ನು ಜಗದೀಶ್ ಶೆಟ್ಟರ್ ಒಪ್ಪಿಕೊಂಡರೆ ಮಾತ್ರ ಅವರಿಗೆ ಅಡ್ವಾಣಿಯವರ ದರ್ಶನ ಭಾಗ್ಯ ಮತ್ತು ಅಡ್ವಾಣಿಯವರ ಆಶೀರ್ವಾದ ಸಿಗುತ್ತದೆ. ಇಲ್ಲದಿದ್ದರೆ ಎಷ್ಟೇ ವಾರಗಳ ಕಾಲ ಅಡ್ವಾಣಿಯವರ ಮನೆ ಬಾಗಿಲಲ್ಲಿ ನಿಂತರೂ ಜಗದೀಶ್ ಶೆಟ್ಟರಿಗೆ ಅಡ್ವಾಣಿಯವರನ್ನು ನೋಡಲು ಸಾಧ್ಯವೇ ಆಗುವುದಿಲ್ಲ, ಹೀಗಾಗಿ ಈಗ ಜಗದೀಶ್ ಶೆಟ್ಟರ್ ಅವರನ್ನು ಮುಖ್ಯಮಂತ್ರಿ ಮಾಡುವ ಅಥವಾ ಮಾಡದಿರುವ ಶಕ್ತಿ ಇರುವುದು ದೆಹಲಿಯಲ್ಲಿ ಬೀಡುಬಿಟ್ಟಿರುವ ಕರ್ನಾಟಕದ ನಾಯಕ ಮತ್ತು ಯಡಿಯೂರಪ್ಪನವರ ಸಾಂಪ್ರದಾಯಿಕ ವೈರಿಯಾದ ಅನಂತ್‌ಕುಮಾರ್ ಅವರಿಗೆ ಮಾತ್ರ.

ಒಂದು ವೇಳೆ ಶೆಟ್ಟರ್ ಮುಖ್ಯಮಂತ್ರಿಯಾದದ್ದೇ ಆದಲ್ಲಿ ಅವರು ತನ್ನ ನಿಷ್ಠೆ ಮತ್ತು ಒಲವನ್ನು ಸಂಪೂರ್ಣವಾಗಿ ಯಡಿಯೂರಪ್ಪನವರಿಗೆ ಧಾರೆ ಎರೆಯಲು ಸಾಧ್ಯವೇ ಇಲ್ಲ, ಅಂತಹ ಸಂದರ್ಭದಲ್ಲಿ ತನ್ನ ಹಳೆ ದೋಸ್ತ್ ಅನಂತ್‌ಕುಮಾರ್‌ಗೂ ಕೂಡ ಜಗದೀಶ್ ಶೆಟ್ಟರ್ ತಲೆಬಾಗಲೇಬೇಕಾಗುತ್ತದೆ. ಸಹಜವಾಗಿ ಜಗದೀಶ್ ಶೆಟ್ಟರ್ ಸುತ್ತಮುತ್ತ ಅನಂತ್‌ಕುಮಾರ್ ತನಗೆ ಬೇಕಾದ ಅಧಿಕಾರಿಗಳನ್ನು ಹಾಕಿಕೊಳ್ಳುತ್ತಾರೆ. ಅಷ್ಟೇ ಅಲ್ಲ, ಮಂತ್ರಿಮಂಡಲದಲ್ಲಿಯೂ ತನಗೆ ನಿಷ್ಠಾವಂತರಾಗಿರುವ ಶಾಸಕರಿಗೆ ದೊಡ್ಡ ದೊಡ್ಡ ಹುದ್ದೆಗಳನ್ನು ನೀಡೇ ನೀಡುತ್ತಾರೆ. ಈ ಸಂದರ್ಭದಲ್ಲಿ ಸಹಜವಾಗಿ ಯಡ್ಡಿ ಮತ್ತು ಅವರ ಬೆಂಬಲಿಗರು ಜಗದೀಶ್ ಶೆಟ್ಟರ ಮೇಲೆ ಕೆಂಡಾಮಂಡಲವಾಗುತ್ತಾರೆ. ಯಾವಾಗ ಜಗದೀಶ್ ಶೆಟ್ಟರ್ ತಮ್ಮ ವೈರಿಯಾದ ಅನಂತ್‌ಕುಮಾರ್ ತಾಳಕ್ಕೆ ತಕ್ಕಂತೆ ಕುಣಿಯುತ್ತಾರೋ ಆಗ ಮತ್ತೆ ಯಡ್ಡಿ ಬಣ ಜಗದೀಶ್ ಶೆಟ್ಟರ ಪದಚ್ಯುತಿಗೆ ಮುಂದಾದರೂ ಆಶ್ಚರ್ಯ ಪಡಬೇಕಾಗಿಲ್ಲ,

ಬಿಜೆಪಿ ಪಕ್ಷದ ತಮಾಷೆ ಹೇಗಿದೆ ನೋಡಿ. ಅಂದು ಯಡಿಯೂರಪ್ಪ ತಾನು ಅಧಿಕಾರದಿಂದ ಇಳಿಯುವಾಗ ಯಾವುದೇ ಕಾರಣಕ್ಕೂ ಅನಂತ್‌ಕುಮಾರ್‌ರ ಹಿಂಬಾಲಕ ಜಗದೀಶ್ ಶೆಟ್ಟರನ್ನು ಮುಖ್ಯಮಂತ್ರಿಯನ್ನಾಗಿ ಮಾಡಲೇ ಬಾರದೆಂದು ಹಟ ತೊಟ್ಟು ಪುಣ್ಯಕೋಟಿಯಂತೆ ಹಿಂದೆ ಬಂದರೆ ಒದೆಯದ, ಮುಂದೆ ಬಂದರೆ ಹಾಯದ ಸದಾನಂದ ಗೌಡರನ್ನು ಮುಖ್ಯಮಂತ್ರಿಯನ್ನಾಗಿಸಿದ್ದರು. ಆದರೆ ಈ ಪುಣ್ಯಕೋಟಿ ಒಮ್ಮೆ ಅಧಿಕಾರದ ಗದ್ದುಗೆಯನ್ನು ಏರಿದ ನಂತರ ಹೋರಿಯಂತೆ ಮುನ್ನುಗ್ಗುತ್ತ, ಒದೆಯುತ್ತ ತನ್ನ ಶಕ್ತಿಯನ್ನು ಪ್ರದರ್ಶಿಸಿತು. ಸಿ.ಎಂ. ಕುರ್ಚಿ ಅಲಂಕರಿಸುವ ಮೊದಲು ಸದಾನಂದ ಗೌಡರನ್ನು ವಿರೋಧಿಸುತ್ತಿದ್ದ ಅನಂತ್‌ಕುಮಾರ್ ಆನಂತರ ಆಲಂಗಿಸಿದರು. ಇತ್ತ ಯಡಿಯೂರಪ್ಪ ಗೌಡರು ಸಿ.ಎಂ. ಕುರ್ಚಿ ಹತ್ತುತ್ತಿರುವಾಗಲೇ ಅವರ ಕಾಲೆಳೆಯಲು ಆರಂಭಿಸಿದರು.

ಚೆಡ್ಡಿಗಳ ಕಿತ್ತಾಟಕ್ಕೆ ಅಂತ್ಯವಿಲ್ಲ

ಅಂತಹುದೇ ಒಂದು ಸರ್ಕಸ್ ಈ ಬಾರಿಯೂ ಪುರಸ್ಕರಿಸುವುದಿಲ್ಲ; ಆದರ ಬದಲಿಗೆ ವಿಧಾನಸಭೆಯನ್ ವಿಸರ್ಜಿಸಬಹುದು ಅಥವಾ ಬೇರೆ ಯಾರಾದರೊಬ್ಬರನ್ ಮುಖ್ಯಮಂತ್ರಿಯನ್ನಾಗಿ ಮಾಡಬಹುದು ಎಂಬುದೇ ಯಡಿಯೂರಪ್ಪನವರ ರಾಜಕೀಯ ತರ್ಕವಾಗಿತ್ತು ಹಾಗೇನಾದರೂ ಆದಲ್ಲಿ ಲಿಂಗಾಯತರನ್ನೆಲ್ಲ ಮತ್ ಹುರಿದುಂಬಿಸಿ ತನ್ನ ಹತೋಟಿಯಲ್ಲಿ ಇಟ್ಟುಕೊಳ್ಳಬಹುದು ಎಂಬುದು ಅವರ ಲೆಕ್ಕಾಚಾರವಾಗಿತ್ತು ಮತ್ತೊಂದೆಡೆ ತಾನು ಪ್ರಾಮಾಣಿಕವಾಗಿ ಜಗದೀಶ್ ಶೆಟ್ಟರನ್ನ ಮುಖ್ಯಮಂತ್ರಿಯನ್ನಾಗಿ ಮಾಡಲು ಭಗೀರಥ ಪ್ರಯತ್ ಮಾಡಿದ್ದೇನೆಂದು ಲಿಂಗಾಯತ ಸ್ವಾಮಿಗಳಿಗೆ ಹೇಳುವುದು ಅವರ ತಂತ್ರಗಾರಿಕೆಯಾಗಿತ್ತು, ಆದರೆ ಈಗ ಈ ತಂತ್ರಗಾರಿಕೆಯನ್ನು ಮೀರಿ ಹೈಕಮಾಂಡ್ ಜಗದೀಶ್ ಶೆಟ್ಟರನ್ನೇ ಮುಖ್ಯಮಂತ್ರಿಯನ್ನಾಗಿ ಮಾಡಲು ಹೊರಟಿರು ವುದು ಒಂದು ರೀತಿಯಲ್ಲಿ ಯಡ್ಡಿಗೆ ಕಸಿವಿಸಿಯನ್ನುಂಟು ಮಾಡಿದೆ ಎಂದೇ ಬಿಜೆಪಿ ಜನ ಮಾತನಾಡಿಕೊಳ್ಳುತ್ತಿದ್ದಾರೆ

ಹೋರಿಯಾದ ಪುಣ್ಯಕೋಟಿ

ಪುಣ್ಯಕೋಟಿಯಂತಿದ್ದ ಸದಾನಂದ ಗೌಡರು ಅಧಿಕಾರದ ಗದ್ದುಗೆಯೇರಿದ ನಂತರ ಯಡಿಯೂರಪ್ಪನವರ ವಿರುದ್ ತಿರುಗಿಬಿದ್ದ ಉದಾಹರಣೆಯನ್ನು ಯಡ್ಡಿಯ ಹಿಂಬಾಲಕರು ಇನ್ನೂ ಮರೆತಿಲ್ಲ, ಆ ಘಟನೆಯನ್ನೇ ನೆನಪಿಸಿಕೊಳ್ಳುತ್ ಪುನರಾವರ್ತನೆಯಾಗುತ್ತದೆ ಎಂಬುದೇ ಬಿಜೆಪಿ ಪಕ್ಷದಲ್ಲಿನ ಒಂದು ಅಭಿಪ್ರಾಯ. ಹೇಳಿಕೇಳಿ ಜಗದೀಶ್ ಶೆಟ್ಟರ್ ರಾಜಕೀಯವಾಗಿ ಅತ್ಯಂತ ಪ್ರಮುಖ ಸಮುದಾಯವಾದ ಲಿಂಗಾಯತ ಕೋಮಿನವರು. ಅವರೇನೂ ಸದಾನಂದ ಗೌಡರಷ್ಟು ಸಪ್ಪೆ ವ್ಯಕ್ತಿಯಲ್ಲ ಎಂಬುದು ಯಡ್ಡಿಗೆ ಚೆನ್ನಾಗಿ ಗೊತ್ತು, ತನ್ನದೇ ಕೋಮಿನ ವ್ಯಕ್ತಿಯಾದ ಜಗದೀಶ್ ಶೆಟ್ಟರ್ ಗಟ್ಟಿಯಾಗಿ ಸಿ.ಎಂ. ಕುರ್ಚಿಯಲ್ಲಿ ಕುಳಿತುಕೊಂಡರೆ ಮುಂದೆ ತನಗೆ ಅಪಾಯ ಕಾದಿಟ್ಟ ಬುತ್ತಿ ಎಂಬ ರಾಜಕೀಯ ಪ್ರಜ್ಞೆಯೂ ಯಡ್ಡಿಗೆ ಇದೆ. ಆ ಕಾರಣಕ್ಕೇ ಶೆಟ್ಟರ್ ಒಳ್ಳೆಯ ಆಡಳಿತ ನೀಡುವುದು ಯಡ್ಡಿಗೆ ಇಷ್ಟವಾಗದು. ಈತನ್ಮಧ್ಯೆ ಜಗದೀಶ್ ಶೆಟ್ಟರ್ ಮುಖ್ಯಮಂತ್ರಿಯಾದ ನಂತರ ಮತ್ತೆ ತನ್ನ ಎರಡು ದಶಕಗಳ ಕಾಲದ ಸ್ನೇಹಿತ ಅನಂತ್‌ಕುಮಾರ್‌ರತ್ತ ಸ್ನೇಹಹಸ್ತ ಚಾಚಿದ್ದೇ ಆದಲ್ಲಿ ಅದನ್ನು ಖಂಡಿತವಾಗಿಯೂ ಯಡ್ಡಿ ಒಪ್ಪಿಕೊಳ್ಳುವ ಮನೋಸ್ಥಿತಿಯಲ್ಲಿ ಇರುವುದೇ ಇಲ್ಲ,

ಬಿಜೆಪಿಯಲ್ಲಿ ಚಾಲ್ತಿಯಲ್ಲಿರುವ ಮತ್ತೊಂದು ಮಾತು ಬಹಳ ಕುತೂಹಲಕಾರಿಯಾಗಿದೆ. ಆದೇನೆಂದರೆ, ಯಾವುದೇ ಕಾರಣಕ್ಕೂ ಜಗದೀಶ್ ಶೆಟ್ಟರ್ ಮುಖ್ಯಮಂತ್ರಿ ಸ್ಥಾನವನ್ನು ಅಲಂಕರಿಸುವುದು ಯಡ್ಡಿಗೆ ಇಷ್ಟವಿಲ್ಲವಂತೆ. ಕಳೆದ ಬಾರಿ ಜಗದೀಶ್ ಶೆಟ್ಟರ್ ಸಿ.ಎಂ. ಆಗುವುದನ್ನು ತಪ್ಪಿಸಿದಾಗ ಅದರಿಂದ ಲಿಂಗಾಯತ ಜನಾಂಗದವರು ಮತ್ತು ಸ್ವಾಮೀಜಿಯವರು ತಮ್ಮನ್ನು ತಪ್ಪಾಗಿ ಅರ್ಥೈಸಿದ್ದು ಯಡ್ಡಿಗೆ ಚೆನ್ನಾಗಿ ಗೊತ್ತು, ಏನೇ ಆದರೂ ನಮ್ಮ ಸಮುದಾಯದ ಮತ್ತೊಬ್ಬ ವ್ಯಕ್ತಿ ಮುಖ್ಯಮಂತ್ರಿಯಾಗುವುದನ್ನು ತಪ್ಪಿಸಿ ಒಕ್ಕಲಿಗ ಜನಾಂಗದ ವ್ಯಕ್ತಿಯನ್ನು ಮುಖ್ಯಮಂತ್ರಿಯನ್ನಾಗಿ ಮಾಡಬಾರದಿತ್ತು ಎಂಬುದು ಬಹುತೇಕ ಎಲ್ಲ ವೀರಶೈವರ ಅಭಿಪ್ರಾಯ. ಹೀಗಾಗಿ ತನಗೆ ಅಂಟಿರುವ ಈ ಒಂದು ಅಪವಾದವನ್ನು ಹೋಗಲಾಡಿಸಲು ಈ ಬಾರಿ ಜಗದೀಶ್ ಶೆಟ್ಟರನ್ನೇ ಸಿ.ಎಂ. ಮಾಡಿ ಎಂದು ಯಡ್ಡಿ ಹೈಕಮಾಂಡ್‌ಗೆ ಮನವಿ ಮಾಡಿದ್ದು.

ಆದರೆ ವಾಸ್ತವವಾಗಿ ಹೈಕಮಾಂಡ್ ತನ್ನ ಮನವಿಯನ್ನು ಇದೇ ರೀತಿ ನಾಳೆ ಜಗದೀಶ್ ಶೆಟ್ಟರ್ ತಿರುಗಿಬಿದ್ದರ ಏನು ಮಾಡುವುದು? ಎಂದು ಯಡ್ಡಿಯ ಹಿಂಬಾಲಕರು ಲೆಕ್ಕಾಚಾರ ಹಾಕುತ್ತಿದ್ದಾರೆ. ಅದರಲ್ಲೂ ಮುಖ್ಯವಾಗಿ ಯಡ್ಡಿಯ ಪರಮಾಪ್ತೆ ಎಂದೇ ಗುರುತಿಸಿಕೊಂಡಿರುವ ಶೋಭಾ ಕರಂದ್ಲಾಜೆ ಯಾವುದೇ ಕಾರಣಕ್ಕೂ ಜಗದೀಶ್ ಶೆಟ್ಟರನ್ ಮುಖ್ಯಮಂತ್ರಿಯನ್ನಾಗಿ ಮಾಡುವುದು ಒಳ್ಳೆಯ ನಿರ್ಧಾರವಾಗಲಾರದು ಎಂದು ತನ್ನ ಅಭಿಪ್ರಾಯವನ್ ಮುಂದಿಟ್ಟಿದ್ದಾರಂತೆ. ಈ ಕಾರಣದಿಂದಲೋ ಏನೋ ಕಳೆದ ಒಂದು ವಾರದಿಂದ ರಾಜ್ಯ ಬಿಜೆಪಿಯಲ್ಲಿ ಆಂತರಿಕ ಕಲಹ ಭುಗಿಲೆದ್ದಿದ್ದರೂ ಶೋಭಾ ಕರಂದ್ಲಾಜೆ ಮಾತ್ರ ಯಾವುದೇ ಹೇಳಿಕೆ ನೀಡದೆ ಎಲ್ಲೂ ಪ್ರತ್ಯಕ್ಷವಾಗಿ ಕಾಣಿಸಿಕೊಳ್ಳದ ತೆರೆಮರೆಯಲ್ಲಿ ಮೌನಿಯಾಗಿದ್ದಾರೆ.

ಹೀಗೆ ಬಿಜೆಪಿಯ ಆಂತರಿಕ ಕಲಹ ದಿನಕ್ಕೊಂದು ರೂಪ ಪಡೆಯುತ್ತಿದೆ. ಯಾರನ್ನು ಮುಖ್ಯಮಂತ್ರಿ ಮಾಡಬೇಕು ಎಂಬುದೇ ಬಿಜೆಪಿಯ ರಾಷ್ಟ್ರೀಯ ನಾಯಕರಿಗೆ ಒಂದು ತಲೆನೋವಿನ ಸಂಗತಿಯಾಗಿದೆ. ಅತ್ಯಂತ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿರುವ ಸದಾನಂದ ಗೌಡರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿದರೆ ರಾಜ್ಯ ಪಕ್ಷದ ಇಮೇಜ್‌ಗೆ ಧಕ್ ಆಗುತ್ತದೆ ಎಂಬ ಭಯವೂ ಅವರಿಗಿದೆ. ಹಾಗಂತ ಸದಾನಂದ ಗೌಡರ ನೇತೃತ್ವದಲ್ಲಿ ಮುಂದಿನ ಚುನಾವಣೆಯನ್ ಎದುರಿಸಲು ಸಾಧ್ಯವಿಲ್ಲ ಎಂಬ ರಾಜಕೀಯ ಅರಿವೂ ದೆಹಲಿ ನಾಯಕರಿಗಿದೆ. ಹಾಗೆಯೇ ಒಂದು ವೇಳೆ ಜಗದೀಶ್ ಶೆಟ್ಟರನ್ನು ಮುಖ್ಯಮಂತ್ರಿ ಮಾಡಿದ್ದೇ ಆದಲ್ಲಿ ಭಂಡ ನಾಯಕ ಯಡಿಯೂರಪ್ಪನವರ ಮುಂದೆ ನಾವು ಶರಣಾದಂತಲ್ಲವೇ ಎಂಬ ಅಳುಕು ಕೂಡ ದೆಹಲಿ ನಾಯಕರನ್ನು ಕಾಡುತ್ತಿದೆ ಹಾಗಂತ ಬಿಜೆಪಿಗೆ ಅತ್ಯಂತ ಬೆಂಬಲ ನೀಡಿದ ಲಿಂಗಾಯತ ಸಮುದಾಯದ ಮತದಾರರನ್ನು ಓಲೈಸುವ ಕೆಲಸವನ್ ಹೇಗಾದರೂ ಮಾಡಲೇಬೇಕೆಂಬ ತೀರ್ಮಾನಕ್ಕೆ ಬಿಜೆಪಿ ಬದ್ಧವಾದಂತಿದೆ. ಹೀಗೆ ಜಾತಿಯ ಆಧಾರದಲ್ಲಿ ಬಿಜೆಪಿ ನಾಯಕರು ಯಾರನ್ನು ಮುಖ್ಯಮಂತ್ರಿ ಮಾಡಬೇಕೆಂಬ ಲೆಕ್ಕಾಚಾರದಲ್ಲಿ ಒದ್ದಾಡುತ್ತಿದ್ದಾರೆ. ಕರ್ನಾಟಕದ ಆಂತರಿ



ಗೆದ್ದು ಸೋತ ಯಡ್ಡಿ

"ಜಗದೀಶ್ ಶೆಟ್ಟರ್ ಅವರು ಮುಖ್ಯಮಂತ್ರಿ ಆಗುವುದು ಬೇಡ. ಸದಾನಂದ ಗೌಡರನ್ನು ಈಗ ಕುರ್ಚಿಯಿಂದ ತೆಗೆದರೆ ನಮ್ಮ ಪಕ್ಷ ಯಡಿಯೂರಪ್ಪನ ಧಮಕಿಗೆ ಮಣಿದಂತೆ. ಆದ್ದರಿಂದ ವಿಧಾನ ಸಭೆಯನ್ನು ವಿಸರ್ಜಿಸಿ ಚುನಾವಣೆಗೆ ಹೋಗಿ..."

– ಹೀಗೆಂದು ಕೊನೆ ಕ್ಷಣದಲ್ಲಿ ಅಡ್ಡಗಾಲು ಹಾಕಲು ನೋಡಿದ್ದು ಬಿಜೆಪಿಯ ಮುದಿ ನಾಯಕ ಎಲ್.ಕೆ.ಅಡ್ವಾನಿ.

ಆದರೆ ಈ ಅಡ್ವಾಣಿಯ ಮಾತಿಗೆ ಇವತ್ತು ಬಿಜೆಪಿಯಲ್ಲಿ ಎಷ್ಟು ಬೆಲೆ ಇದೆ? ಎಂಬ ಪ್ರಶ್ನೆಗೆ ಉತ್ತರ: "ಕಿಂಚಿತ್ತೂ ಬೆಲೆ ಇಲ್ಲವೇ ಇಲ್ಲ"

ಇದಕ್ಕೆ ಹಲವಾರು ಉದಾಹರಣೆಗಳನ್ನು ಕೊಡಬಹುದು. ಅವುಗಳಲ್ಲಿ ಪ್ರಮುಖವಾದದ್ದು ಬಿಜೆಪಿಯ ಸಂವಿಧಾನದ ತಿದ್ದುಪಡಿ. ಇಲ್ಲಿಯತನಕ ಆ ಪಕ್ಷದ ಸಂವಿಧಾನದ ಪ್ರಕಾರ ಯಾರೂ ಸತತ ಎರಡನೆ ಬಾರಿಗೆ ಬಿಜೆಪಿಯ ರಾಷ್ಟ್ರಾಧ್ಯಕ್ಷನಾಗುವಂತಿರಲಿಲ್ಲ, ಆದರೆ ಗಡ್ಕರಿ ಎಂಬ ಟೆಂಟ್ ಗಿರಾಕಿಯನ್ನು ಆ ಸ್ಥಾನದಲ್ಲಿ ಮುಂದುವರೆಸುವ ಏಕೈಕ ಉದ್ದೇಶದಿಂದ ಇತ್ತೀಚೆಗೆ ಮುಂಬೈಯಲ್ಲಿ ನಡೆದ ಪಕ್ಷದ ಸಭೆಯಲ್ಲಿ ಸಂವಿಧಾನವನ್ನೇ ಬದಲಾಯಿಸಲಾಯಿತು. ಈ ಮಹತ್ತರ ತಿದ್ದುಪಡಿಯನ್ನು ಕುರಿತು ಬಿಜೆಪಿಯಾಗಲಿ, ಅದರ ಪಿತೃ ಸಮಾನ ಸಂಸ್ಥೆಯಾದ ಆರೆಸ್ಸೆಸ್ ಆಗಲೀ ಅಡ್ವಾಣಿಯವರ ಅಭಿಪ್ರಾಯವನ್ನು ತೋರಿಕೆಗಾದರೂ ಕೋರುವ ಗೋಜಿಗೆ ಹೋಗಲಿಲ್ಲ,

ಹಾಗೆಯೇ ಗುಜರಾತಿನ ನರಹಂತಕ ಮುಖ್ಯಮಂತ್ರಿ, ನರೇಂದ್ರ ಮೋದಿಯನ್ನು ಸಂತೃಪ್ತಗೊಳಿಸಲು ಸಂಜಯ್ ಜೋಶಿ ಎಂಬ ಆರೆಸ್ಸೆಸ್ಸಿನ ಪ್ರಮುಖನನ್ನೇ ಬಿಜೆಪಿಯಿಂದ ಒದ್ದೋಡಿಸುವಾಗಲೂ ಅಡ್ವಾನಿಯ ಅಭಿಪ್ರಾಯವನ್ನು ಪಕ್ಷ ಕೇಳಲಿಲ್ಲ,









ಎಲ್ಲಕ್ಕಿಂತ ಮುಖ್ಯವಾಗಿ ಇದೇ ಅಡ್ವಾನಿ ಪಾಕಿಸ್ತಾನಕ್ಕೆ ಭೇಟಿ ನೀಡಿದಾಗ ಮೊಹಮೊದ್ ಅಲಿ ಜಿನ್ನಾರನ್ನು ಜಾತ್ಯತೀತ ನಾಯಕ ಎಂದು ಹೊಗಳಿದ್ದಕ್ಕೆ ಅಡ್ವಾನಿಯನ್ನೇ ಬಿಜೆಪಿಯ ರಾಷ್ಟ್ರಾಧ್ಯಕ್ಷ ಸ್ಥಾನದಿಂದ ಆರೆಸ್ಸೆಸ್ ಕಿತ್ತೊಗೆದಿತ್ತು,

ಇವತ್ತು ಬಿಜೆಪಿ ಮತ್ತು ಆರೆಸ್ಸೆಸ್ ಪಾಲಿಗೆ ಅಡ್ವಾಣಿ ಒಂದು ರೀತಿಯಲ್ಲು ಮುದಿ ಯಜಮಾನ. ಆತನ ವಯಸ್ಸಿಗೆ ಗೌರವ ಕೊಡಲಾಗುತ್ತದೆಯೇ ಹೊರತು ಅಭಿಪ್ರಾಯಗಳಿಗಲ್ಲ, ಪರಿಸ್ಥಿತಿ ಹೀಗಿರುವುದರಿಂದ ಅಡ್ವಾಣಿಯ ಅಡ್ಡಗಾಲು ಜಗದೀಶ್ ಶೆಟ್ಟರ್ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ದೂರವಿಡುವುದು ಕಷ್ಟಸಾಧ್ಯ.

ಆದರೆ ಯಡಿಯೂರಪ್ಪ ಈಗಲೂ ತೊಡರುಗಾಲನ್ನು ಹಾಕುತ್ತಿದ್ದಾರೆ. ಶೆಟ್ಟರ್ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿದ ನಂತರ ತನ್ನನ್ನು ಪಕ್ಷದ ರಾಜ್ಯಾಧ್ಯಕ್ಷನಾಗಿ ನೇಮಿಸಬೇಕು ಎಂಬುದು ಯಡ್ಡಿಯ ಡಿಮ್ಯಾಂಡು. ಅದಕ್ಕೆ ಕಾರಣ ಬರಲಿರುವ ಚುನಾವಣೆ ಸಂದರ್ಭದಲ್ಲಿ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಲ್ಲಿ ಮುಖ್ಯಮಂತ್ರಿಗಿಂತ ಪಕ್ಷದ ಅಧ್ಯಕ್ಷನಿಗೆ ಹೆಚ್ಚು ಶಕ್ತಿ ಇರುತ್ತದೆ. ಆಗ ತನ್ನ ಗುಂಪಿನವರಿಗೇ ಟಿಕೆಟ್ ಕೊಟ್ಟು ತಾನೇ ಮತ್ತೆ ಮುಖ್ಯಮಂತ್ರಿ ಆಗುವ ಹುನ್ನಾರ ಯಡ್ಡಿಯದ್ದು.

ಆದರೆ ಯಡ್ಡಿಯ ಈ ಡಿಮ್ಯಾಂಡಿಗೆ ಹೈಕಮಾಂಡ್ ಸೊಪ್ಪು ಹಾಕುತ್ತಿಲ್ಲ "ಶೆಟ್ಟರ್ ಮುಖ್ಯಮಂತ್ರಿ, ಅಶೋಕ್ ಮತ್ತು ಈಶ್ವರಪ್ಪ ಉಪ ಮುಖ್ಯಮಂತ್ರಿಗಳು ಮತ್ತು ಸದಾನಂದ ಗೌಡ ಪಕ್ಷದ ಅಧ್ಯಕ್ಷ ಆಗುತ್ತಾರೆ. ನೀವು ಭ್ರಷ್ಟಾಚಾರದ ಆರೋಪಗಳಿಂದ ಮುಕ್ತರಾದ ನಂತರವೇ ನಿಮಗೆ ಪಕ್ಷದಲ್ಲಿ ಸ್ಥಾನಮಾನ" ಎಂದು ಹೈಕಮಾಂಡ್ ಪಟ್ಟು ಹಿಡಿದಿದೆ. ಆದರೆ ಯಡ್ಡಿಗೆ ಗೊತ್ತು, ತನಗೆ ಯಾವ ಸ್ಥಾನವೂ ಸಿಗದಿದ್ದರೆ ತನ್ನ ರಾಜಕೀಯ ಭವಿಷ್ಯ ಅಂತ್ಯಗೊಂಡಂತೆ ಎಂದು.

ಕಳೆದ ಹತ್ತು ತಿಂಗಳುಗಳಿಂದ ಸದಾನಂದ ಗೌಡರ ವಿರುದ್ಧ ಹೋರಾಡುತ್ತಲೇ ಬಂದಿದ್ದ ಯಡ್ಡಿ ತನ್ನ ರಾಜಕೀಯದ ಅಸ್ತಿತ್ವಕ್ಕಾಗಿ ಪಗಡೆಯಾಗಿ ಉಪಯೋಗಿಸಿಕೊಂಡಿದ್ದು ಇದೇ ಜಗದೀಶ್ ಶೆಟ್ಟರ್‌ರನ್ನು, ಆದರೀಗ ಆ ಪಗಡೆಯೇ ಗೆದ್ದು, ಪಗಡೆಯನ್ನು ಆಡಿಸಿದ ಯಡ್ಡಿಯೇ ಸೋತಿದ್ದಾರೆ.

ಯಡ್ಡಿಯ ಪಾಪದ ಫಲ ಇದು ಎನ್ನಬಹುದೇ?

...ತೀಯ ಕಲಹವನ್ನು ಬಗೆಹರಿಸಲಾರದ ಸ್ಥಿತಿಗೆ ಬಿಜೆಪಿ ...ಯ ನಾಯಕರು ತಲುಪಿದ್ದಾರೆಂದರೆ ಅದು ಅವರ ...ತಿಕ ವಿವಾಳಿತನವನ್ನೂ ತೋರಿಸುತ್ತದೆ.

...ಹುಶ ಈ ಎಲ್ಲಾ ಕಾರಣದಿಂದಲೋ ಏನೋ ...ನಂದ ಗೌಡರ ಪದಚ್ಯುತಿ ಮತ್ತು ಹೊಸ ...ಮಂತ್ರಿಯ ಅಧಿಕಾರ ಸ್ವೀಕಾರ ಸಮಾರಂಭ ಇವೆರಡೂ ...ಗಳನ್ನು ಅಡ್ವಾಣಿ, ಅರುಣ್ ಜೇಟ್ಲಿ, ಗಡ್ಕರಿ, ಸುಷ್ಮಾ ...ಜ್ ಮೊದಲಾದ ದೆಹಲಿ ನಾಯಕರು ಅತ್ಯಂತ ಸೂಕ್ಷ್ಮವಾಗಿ ...ಲಿಸುತ್ತಿದ್ದಾರೆ. ಈ ಬಾರಿಯ ಆಯ್ಕೆ ಯಾವುದೇ ...ಕ್ಕೂ ಮತ್ತೊಮ್ಮೆ ಹೊಸ ವಿವಾದವನ್ನು ಹುಟ್ಟುಹಾಕ ...ರಬೇಕು ಎಂಬುದೇ ಅವರ ನಿಲುವು. ಹೀಗಾಗಿಯೇ ... ಮೊದಲ ಬಾರಿಗೆ ಮುಖ್ಯಮಂತ್ರಿಯ ಜೊತೆಗೆ ಒಂದು ...ಮುಖ್ಯಮಂತ್ರಿ ಸ್ಥಾನವನ್ನೂ ಕೂಡ ಸೃಷ್ಟಿಸುವ ಯೋಚನೆ ... ದೆಹಲಿ ವರಿಷ್ಠರು ಚಿಂತಿಸುತ್ತಿದ್ದಾರೆ. ಹಾಗೇನಾದರೂ ... ಆದಲ್ಲಿ ಗೃಹ ಸಚಿವರಾಗಿರುವ ಆರ್.ಅಶೋಕ್ ... ಸರ್ಕಾರದ ಮೊದಲ ಉಪಮುಖ್ಯಮಂತ್ರಿ ಯಾಗಿ ...ಕಾರ ಸ್ವೀಕಾರ ಮಾಡುವ ಸಾಧ್ಯತೆಗಳಿವೆ. ಈ ಉಪ ...ಖ್ಯಮಂತ್ರಿ ಸ್ಥಾನವನ್ನು ಹುಟ್ಟುಹಾಕುವ ಹಿಂದೆಯೂ ... ರಾಜಕೀಯ ತಂತ್ರಗಾರಿಕೆಯಿದೆ. ಅದೇನೆಂದರೆ ...ರದಲ್ಲಿ ಎರಡು ಶಕ್ತಿ ಕೇಂದ್ರಗಳನ್ನು ಸೃಷ್ಟಿಸಿದರೆ ...ಖ್ಯಮಂತ್ರಿ ಸರ್ವಾಧಿಕಾರಿಯಂತೆ ವರ್ತಿಸಲು ಸಾಧ್ಯವಿರಲ್ಲ ... ಲೆಕ್ಕಾಚಾರ. ಹೇಗೂ ಆರ್.ಅಶೋಕ್ ಹೇಳಿಕೇಳಿ ...ಬಿವಾದ ಒಕ್ಕಲಿಗ ಜನಾಂಗಕ್ಕೆ ಸೇರಿದವರು. ಮಾತ್ರವಲ್ಲ ... ಅನಂತ್‌ಕುಮಾರ್‌ರ ಪಟ್ಟದಶಿಷ್ಯ.

ಜಾತಿ ಲೆಕ್ಕಾಚಾರ

ಲಿಂಗಾಯತ ಸಮುದಾಯದ ವ್ಯಕ್ತಿ ಮುಖ್ಯಮಂತ್ರಿ ಗದ್ದುಗೆಯನ್ನು ಏರುವುದು, ಉಪ ಮುಖ್ಯಮಂತ್ರಿಯಾಗಿ ಒಕ್ಕಲಿಗ ಸಮುದಾಯದ ಅಶೋಕ್ ಕಾರ್ಯನಿರ್ವಹಿಸುವುದು ಮತ್ತು ಕುರುಬ ಜನಾಂಗದ ಈಶ್ವರಪ್ಪನವರು ಪಕ್ಷದ ಅಧ್ಯಕ್ಷರಾಗಿ ಮುಂದುವರೆಯುವುದು ಮತ್ತು ಈ ಜಾತಿಲೆಕ್ಕಾಚಾರದಲ್ಲಿ ಮುಂದಿನ ಚುನಾವಣೆಯಲ್ಲಿ ಬಿಜೆಪಿಗೆ ಲಾಭವೇ ಹೊರತು ನಷ್ಟವಿಲ್ಲ ಎಂಬುದು ಸದ್ಯಕ್ಕೆ ದೆಹಲಿ ನಾಯಕರು ಕಂಡುಕೊಂಡಿರುವ ಪರಿಹಾರ ಸೂತ್ರ. ಈ ಪರಿಹಾರ ಸೂತ್ರ ಅಥವಾ ಫಾರ್ಮುಲಾ ನಿಜಕ್ಕೂ ಎಷ್ಟರಮಟ್ಟಿಗೆ ಬಿಜೆಪಿಗೆ ಸಹಾಯವಾಗುತ್ತದೆ ಎಂಬುದು ಬೇರೆ ಮಾತು. ಏಕೆಂದರೆ ಈಗಾಗಲೇ ಬಿಜೆಪಿಯ ದಿನನಿತ್ಯದ ಅಂತಃಕಲಹದಿಂದ ಮತದಾರರು ಬೇಸತ್ತುಹೋಗಿದ್ದಾರೆ. ಹೀಗಾಗಿ ಬಿಜೆಪಿಯ ದೊಣ್ಣೆ ನಾಯಕರು ಏರ್‌ಕಂಡೀಷನರ್ ರೂಂನಲ್ಲಿ ಕುಳಿತುಕೊಂಡು ಏನೇ ಲೆಕ್ಕಾಚಾರ ಹಾಕಿದರೂ ರಾಜ್ಯದ ಜನತೆ ಮಾತ್ರ ಮುಂದಿನ ಚುನಾವಣೆಯಲ್ಲಿ ಬಿಜೆಪಿಗೆ ಪಾಠ ಕಲಿಸಲೇಬೇಕೆಂಬ ತೀರ್ಮಾನಕ್ಕೆ ಬಂದಿರುವುದು ಅವರಿಗೆ ಇನ್ನೂ ಗೊತ್ತಿಲ್ಲ. ಹೀಗಾಗಿ ಕರ್ನಾಟಕದಲ್ಲಿ ಸದ್ಯಕ್ಕೆ ಬಿಜೆಪಿ ವರಿಷ್ಠರು ಹೊಸ ಮುಖ್ಯಮಂತ್ರಿಯನ್ನು ಆಯ್ಕೆ ಮಾಡಬಹುದು. ಆದರೆ ಮತ್ತೆ ಮತದಾರರ ಬೆಂಬಲ, ವಿಶ್ವಾಸವನ್ನು ಪಡೆಯುವುದು ಕಷ್ಟವಾಗುತ್ತದೆ ಎಂಬುದು ಮಾತ್ರ ನಿರ್ವಿವಾದ.

• ಸದಾಶಿವ ಶೆಣೈ

ಶೆಟ್ಟರ್ ನೇತೃತ್ವದಲ್ಲಿ ಬಿಜೆಪಿ ಗೆಲ್ಲುತ್ತದೆಯೇ?



ಪ್ರಥಮ ಬಾರಿಗೆ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿ ಅದೆಷ್ಟು ಹೊಲಸೆದ್ದು ಹೋಗಿದೆ ಎಂದರೆ ನಾಲ್ಕು ವರ್ಷಗಳಲ್ಲಿ ಮೂರನೆ ಮುಖ್ಯಮಂತ್ರಿಯನ್ನು ರಾಜ್ಯದ ಮೇಲೆ ಹೇರುತ್ತಿದೆ.

ಮೊದಲನೆ ಮುಖ್ಯಮಂತ್ರಿ ತನ್ನ ಅಧಿಕಾರಾವಧಿಯನ್ನು ಹಣ ಮತ್ತು ಭೂಮಿ ದೋಚುವುದರಲ್ಲೇ ಕಳೆದರೆ, ಎರಡನೆ ಮಂತ್ರಿ ಸದಾನಂದ ಗೌಡ ಬೆವರನ್ನು ಒರೆಸಿಕೊಳ್ಳುವುದರಲ್ಲೇ ಸುಸ್ತಾದರು. ಈಗ ಚುನಾವಣೆಗೆ ಕೆಲವೇ ತಿಂಗಳು ಉಳಿದಿದೆ. ನೂತನ ಮುಖ್ಯಮಂತ್ರಿಯಾಗಿ ಜಗದೀಶ್ ಶೆಟ್ಟರ್ ಅದೆಷ್ಟೇ ತಿಪ್ಪರಲಾಗ ಹಾಕಿದರೂ ಅವರಿಂದ ಬಿಜೆಪಿಗೆ ಮಾನ, ಮರ್ಯಾದೆ ಮತ್ತು ಗೆಲುವನ್ನು ತರುವುದು ಅಸಾಧ್ಯ ಎಂಬ ಪರಿಸ್ಥಿತಿ ರಾಜ್ಯದಲ್ಲಿ ನಿರ್ಮಾಣವಾಗಿದೆ.

ಶೆಟ್ಟರ್, ಅಶೋಕ್, ಈಶ್ವರಪ್ಪ ಮತು ಸದಾನಂದ ಗೌಡರ ಮುಖ ನೋಡಿ ಅವರೆಲ್ಲರ ಜಾತಿಯ ಜನರು ಬಿಜೆಪಿಯನ್ನು ಮುಂದಿನ ಚುನಾವಣೆಯಲ್ಲಿ ಸುಲಭವಾಗಿ ಗೆಲ್ಲಿಸುತ್ತಾರೆ ಎಂದು ಬಿಜೆಪಿಯ ನಾಯಕರು ಭಾವಿಸಿರುವಂತಿದೆ.

ಆದರೆ ವಾಸ್ತವವಾಗಿ ಇಡೀ ಬಿಜೆಪಿಯ ಬಗ್ಗೆಯೇ ರಾಜ್ಯದ ಜನರಲ್ಲಿ ಹೇಸಿಗೆ ಹುಟ್ಟಿರುವುದರಿಂದ ಯಾವ ಜಾತಿಯ ಯಾವ ನಾಯಕನಿಂದಲೂ ಆ ಪಕ್ಷವನ್ನು ಗೆಲ್ಲಿಸುವುದು ಅಸಾಧ್ಯ...

...ಶೆಟ್ಟರ್: ಭಾಜಪ ಟ್ರಬಲ್‌ಶೂಟರ್

...ಜಗದೀಶ್ ಶೆಟ್ಟರ್ ಇನ್ನೇನು ಕರ್ನಾಟಕದ ಮುಖ್ಯ...ಮಂತ್ರಿ ಆಗಲಿದ್ದಾರೆ. ಗಂಡುಮೆಟ್ಟಿದ ಉತ್ತರ ಕರ್ನಾಟಕದ ...ವಾಡ ಜಿಲ್ಲೆಯವರಾದ ಶೆಟ್ಟರ್ ಈಗ ಸಂಘಪರಿವಾರದ ...ರಿಟ್ ಫೇಸ್. ಪಕ್ಷದ ಭೀಷ್ಮ ಪಿತಾಮಹ ಲಾಲಕೃಷ್ಣ ...ಣಿಯವರ ತೀವ್ರ ಪ್ರತಿರೋಧದ ನಡುವೆಯೂ ಆರೆಸ್ಸೆಸ್ ...ಅರ್ಥಾತ್ ರಾಷ್ಟ್ರೀಯ ಸ್ವಯಂಸೇವಕ ಸಂಘದ ನಾಯಕರು ... ಅವರಿಗೆ ಪಟ್ಟ ಕಟ್ಟುವ ಅನಿವಾರ್ಯತೆ ಈಗ ...ಯಾಗಿದೆ.

...ಸುಮಾರು ಮೂರೂವರೆ ದಶಕಗಳ ಕಾಲ ಆರೆಸ್ಸೆಸ್ ... ನಿಕಟ ಬಾಂಧವ್ಯ ಹೊಂದಿರುವ ಶೆಟ್ಟರ್ ಮುಂಬರುವ ...ನಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಭಾರತೀಯ ... ಪಕ್ಷದ ಗೆಲುವಿನ ಭರವಸೆಯಾಗಿ ರೂಪುಗೊಂಡಿದ್ದಾರೆ. ...ವವಾಗಿ ದಕ್ಷಿಣ ಭಾರತದಲ್ಲಿ ಪ್ರಪ್ರಥಮ ಬಾರಿಗೆ ...ಲಾವಣೆಗಾಗಿ ಭಾಜಪ" ಎನ್ನುವ ಘೋಷವಾಕ್ಯದೊಡನೆ ...ಕಾರದ ಚುಕ್ಕಾಣಿ ಹಿಡಿದ ಭಾಜಪ ತಾನು ನೀಡಿದ ...ಸೆಗೆ ತದ್ವಿರುದ್ಧವಾಗಿ ನಡೆದುಕೊಂಡಿತು. ಅಧಿಕಾರದಲ್ಲಿದ್ದ ... ವರ್ಷ ಒಂದು ತಿಂಗಳ ಅವಧಿಯಲ್ಲಿ ಬಿಜೆಪಿಯ ...ರದಲ್ಲಿ ಸಾಮರಸ್ಯಕ್ಕಿಂತ ಸಂಘರ್ಷವೇ ಪ್ರಭುತ್ವ ...ಪಿತ್ತು.

... 2008ರಲ್ಲಿ ಕೂದಲೆಳೆಯ ಅಂತರದಲ್ಲಿ ಬಹುಮತ ...ಮಲು ಸಾಧ್ಯವಾಗದಿದ್ದಾಗ ಯಡಿಯೂರಪ್ಪ ಪಕ್ಷೇತರರ ...ಬಲದಿಂದ ಸರ್ಕಾರ ರಚಿಸಿದರು. ನಿರಾತಂಕವಾಗಿ ಸರ್ಕಾರ ...ಸುವ ಸಾಧ್ಯತೆ ಇದ್ದರೂ, ಅನುಮಾನದ ಪಿಶಾಚಿ ...ಡಿಯೂರಪ್ಪನ ಹೆಗಲೇರಿತ್ತು. ಹೀಗಾಗಿ ಅವರು ...ವರಣ ಗೊಳಿಸಿದ್ದು 'ಆಪರೇಷನ್ ಕಮಲ'. ಇದರಿಂದ ...ನಸಭೆಯಲ್ಲಿ ಭಾಜಪ ತನ್ನ ಕಾಲ ಮೇಲೆ ನಿಲ್ಲುವ ...ಗಳಿಸಿತು. ಆದರೆ, ಇದು ಸುಭದ್ರ ಆಡಳಿತಕ್ಕೆ ದಿಕ್ಸೂಚಿ ...ಲ್ಲ. ಬದಲಿಗೆ, ಸ್ವೇಚ್ಛಾಚಾರದ ಆಡಳಿತಕ್ಕೆ ಸ್ಫೂರ್ತಿ ...ತು. ಭ್ರಷ್ಟಾಚಾರ ತಾಂಡವವಾಡ ತೊಡಗಿತು. ಜೊತೆಗೆ ...ರೇಷನ್ ಕಮಲ'ದಿಂದ ಭಾಜಪದಲ್ಲಿ ನಿಷ್ಠರು ಹಾಗು ...ಗರು ಎನ್ನುವ ಎರಡು ಗುಂಪುಗಳು ಸೃಷ್ಟಿಯಾದವು. ...ಪದೊಳಗೆ ಯಡಿಯೂರಪ್ಪ ಪ್ರಾಯೋಜಿತ ಗುಂಪು ...ಪತ್ಯ ಸಾಧಿಸಿತು. ಆ ಗುಂಪಿನಲ್ಲಿ ಬೇರೆ ಪಕ್ಷಗಳಿಂದ ...ವರದೇ ದರ್ಬಾರು.

...ಇದಿಷ್ಟು ಸಾಲದೆಂಬಂತೆ, ಭಾಜಪ ಭ್ರಷ್ಟಾಚಾರದ ...ಯಿತು. ಹತ್ತು ಹಲವು ಹಗರಣಗಳು ಸ್ಫೋಟಿಸ ...ಭಿಸಿದವು. ಸರ್ಕಾರದ ಸಚಿವರ ತಲೆ ಉರುಳ ...ರಂಭಿಸಿದವು. ಹತ್ತಕ್ಕೂ ಹೆಚ್ಚು ಸಚಿವರು ಭ್ರಷ್ಟಾಚಾರ, ...ಚಾರ, ಬ್ಲೂಫಿಲಂ ಹಗರಣಗಳಿಗೆ ಸಿಕ್ಕಾಗಿ ಸಚಿವ ... ತ್ಯಜಿಸಬೇಕಾಯಿತು. ... ಗಣಿಗಾರಿಕೆಗೆ ...ಧಿಸಿದ ಲೋಕಾಯುಕ್ತ ... ಸ್ವಯಂ ...ಯೂರಪ್ಪ ರಾಜೀನಾಮೆ ನೀಡಬೇಕಾಯಿತು. ಅಷ್ಟೇ ... ಅನೇಕ ಸಚಿವರು ... ದಾಖಲೆ ...ದರು.

...ಸದಾನಂದ ಗೌಡರ ... ಯಡಿಯೂರಪ್ಪ ಕೃಪಾಪೋಷಿತ ನಾಟಕ ...ಮೇಲುಗೈ ಸಾಧಿಸಿತು, ಭಾಜಪದ ಮೂಲ ... ಶೆಟ್ಟರ್ ಅವರನ್ನು ಮುಖ್ಯಮಂತ್ರಿ ಮಾಡಲು ... ಹಾಗಿದರೆ, ಯಡಿಯೂರಪ್ಪನ ಪಾಲಿಸಿಗರ ಗುಂಪು ... ನಿರ್ಧರಿಸಿತು, ...

ಮೊದಲಿನಿಂದಲೂ ಯಡಿಯೂರಪ್ಪನ ಅಸಹನೆಯ ರಾಜಕಾರಣದ ನಡುವೆಯೂ ಭಾಜಪದ ಲಿಂಗಾಯತ ಸಮುದಾಯದ ನಾಯಕ ಗಣದಲ್ಲಿ ಶೆಟ್ಟರ್ ಸದ್ದುಗದ್ದಲವಿಲ್ಲದೆ ಬೆಳೆಯತೊಡಗಿದ್ದರು. ಭಾಜಪದ ರಾಜ್ಯಾಧ್ಯಕ್ಷರಾಗಿ, ವಿರೋಧ ಪಕ್ಷದ ನಾಯಕರಾಗಿ, ವಿಧಾನಸಭೆಯ ಸ್ಪೀಕರ್ ಆಗಿ, ಸಚಿವರಾಗಿ ತಮಗೆ ವಹಿಸಿದ ಪ್ರತಿಯೊಂದು ಜವಾಬ್ದಾರಿಯ ಸ್ಥಾನಗಳಲ್ಲಿ ಶೆಟ್ಟರ್ ಛಾಪು ಮೂಡಲಾರಂಭಿಸಿದ್ದರು. ಇದು ಸಂಶಯ ಪಿಶಾಚಿ ಯಡಿಯೂರಪ್ಪ ಅವರಿಗೆ ನುಂಗಲಾರದ ತುತ್ತಾಯಿತು. ಅದಕ್ಕೆ ಅವರು ಶೆಟ್ಟರ್ ಬದಲಿಗೆ ಸದಾನಂದ ಗೌಡರನ್ನು ಬೆಂಬಲಿಸಿದರು.

ಈ ನಿರ್ಧಾರದಿಂದ ಯಡಿಯೂರಪ್ಪ ಅವರಿಗೆ ಲಾಭಕ್ಕಿಂತ ನಷ್ಟವೇ ಅಧಿಕ ಪ್ರಮಾಣದಲ್ಲಾಯಿತು. "ನೀನೇ ಸಾಕಿದಾ ಮುದ್ದಿನಾ ಗಿಣಿ... ನಿನ್ನಾ ಮುದ್ದಿನಾ ಗಿಣಿ ಹದ್ದಾಗಿ ಕುಕ್ಕಿತಲ್ಲೋ" ಎನ್ನುವ ಹಾಗೆ ಯಡಿಯೂರಪ್ಪ ಕೃಪಾಶೀರ್ವಾದದಿಂದ ಮುಖ್ಯಮಂತ್ರಿಯಾದ ಸದಾನಂದ ಗೌಡ, ಗುರುವಿಗೆ ತಿರುಮಂತ್ರ ಹೇಳಿದರು. ತಾನು ಮುಖ್ಯಮಂತ್ರಿಯಾಗಲು ಸಹಕರಿಸಿದ ಯಡಿಯೂರಪ್ಪ ಅವರಿಗೇ ಸೆಡ್ಡು ಹೊಡೆದರು. ಅಷ್ಟು ಮಾತ್ರವಲ್ಲ, ತಾವು ಮುಖ್ಯಮಂತ್ರಿ ಆದದ್ದು ಹೈಕಮಾಂಡ್ ಕೃಪೆಯಿಂದ, ಒಕ್ಕಲಿಗ ಸಮುದಾಯದ ಬೆಂಬಲದಿಂದ ಎಂದು ಘೋಷಿಸಿಬಿಟ್ಟರು.

ನಿಜವಾಗಿಯೂ ಯಡಿಯೂರಪ್ಪನವರ ಜಂಘಾಬಲ ಉಡುಗಿಸಿದ ಬೆಳವಣಿಗೆ ಯಾವುದೆಂದರೆ ಕರ್ನಾಟಕದ ಉದ್ದಗಲ ಯಡಿಯೂರಪ್ಪನವರೇ ತಮ್ಮ ಪ್ರಶ್ನಾತೀತ ನಾಯಕ ಎಂದು ಹೇಳುತ್ತಿದ್ದ ಲಿಂಗಾಯತ ಮತ ಬ್ಯಾಂಕ್ ತಮ್ಮ ಗಂಭೀರ ಅಸಮಾಧಾನವನ್ನು ಪ್ರದರ್ಶಿಸಲಾರಂಭಿಸಿದಾಗ.




'ಶೆಟ್ಟರ್ ಅವರನ್ನು ಮುಖ್ಯಮಂತ್ರಿ ಮಾಡುವ ... ಸದವಕಾಶವನ್ನು ಧೂಳೀಪಟ ಮಾಡಿದ್ದ ಯಡಿಯೂರಪ್ಪ ಅದ್ಯಾವ ರೀತಿ ಲಿಂಗಾಯತ ನಾಯಕ ಆಗುತ್ತಾರೆ' ಎನ್ನುವ ಪ್ರಶ್ನೆಯನ್ನು ವಿಶೇಷವಾಗಿ ಉತ್ತರ ಕರ್ನಾಟಕದ ಲಿಂಗಾಯತರು ಕೇಳಲಾರಂಭಿಸಿದ್ದರು. 'ಶೆಟ್ಟರ್ ಓರ್ವ ಸಂಭಾವಿತ, ಸಜ್ಜನ ಜನನಾಯಕ, ಜೊತೆಗೆ ತಮ್ಮ ಮೂರೂವರೆ ದಶಕಗಳ ರಾಜಕೀಯದ ಬದುಕಿನಲ್ಲಿ ದಕ್ಷತೆ, ಪ್ರಾಮಾಣಿಕತೆಗೆ ಹೆಸರಾಗಿರುವಂತಹ ಜನಾನುರಾಗಿ ಮುಖಂಡ. ಇಂತಹವರನ್ನು ಸಹಿಸದ ಯಡಿಯೂರಪ್ಪ ಮುತ್ಸಾವ ಲಿಂಗಾಯತ ನಾಯಕರನ್ನು ಬೆಳೆಸಲು ಸಾಧ್ಯ...?' ಎನ್ನುವ ಪ್ರಶ್ನೆ ಲಿಂಗಾಯತ ಸಮುದಾಯವನ್ನು ಕಾಡಲಾರಂಭಿಸಿತು. ವಾಸ್ತವವಾಗಿ ಈ ಬೆಳವಣಿಗೆ ಯಡಿಯೂರಪ್ಪನವರ ಬೆಂಬಲದ ನೆಲೆಯನ್ನೇ ಸಂಪೂರ್ಣವಾಗಿ ಛಿದ್ರಗೊಳಿಸಿತು.

ಒಂದೆಡೆ, ಶೆಟ್ಟರ್ ಅವರಿಗೆ ಗಣನೀಯ ಪ್ರಮಾಣದಲ್ಲಿ ಲಿಂಗಾಯತ ಮತಬ್ಯಾಂಕ್‌ನ ಬೆಂಬಲ ವ್ಯಕ್ತವಾಗತೊಡಗಿದರೆ, ಮತ್ತೊಂದೆಡೆ ಯಡಿಯೂರಪ್ಪನವರೊಂದಿಗಿದ್ದ ಲಿಂಗಾಯತೇತರ ಬೆಂಬಲಿಗರು ಸದಾನಂದ ಗೌಡರ ಪರವಾಗಿ ನಿಷ್ಠೆ ಬದಲಿಸುತ್ತಿದ್ದರೆ, ಇನ್ನೊಂದೆಡೆ ಯಡಿಯೂರಪ್ಪನವರು ನಂಬಿದ್ದ ಲಿಂಗಾಯತರೇ ಅವರ ವಿರುದ್ಧ ಅಸಮಾಧಾನ ವ್ಯಕ್ತಪಡಿಸಲಾರಂಭಿಸಿದರು.

ಮುಖ್ಯಮಂತ್ರಿಯಾಗಿ ಆಯ್ಕೆಯಾಗುವ ಸಂದರ್ಭದಲ್ಲಿ ಆರು ತಿಂಗಳ ಅವಧಿಯೊಳಗೆ ರಾಜೀನಾಮೆ ಕೊಡುವುದಾಗಿ ಆಣೆ - ಪ್ರಮಾಣ ಮಾಡಿದ್ದ ಸದಾನಂದ ಗೌಡ ತಾವು ಆಣೆ-ಪ್ರಮಾಣವನ್ನು ಮಾಡಿಯೇ ಇಲ್ಲ ಎಂದು ಹೇಳತೊಡಗಿದರು. ಇದರ ಜೊತೆಗೆ, ಒಂದಾದಮೇಲೊಂದು ನ್ಯಾಯಾಲಯದ ಮೊಕದ್ದಮೆಗಳು ಯಡಿಯೂರಪ್ಪನವರನ್ನು ಅಪ್ಪಳಿಸಿದವು. ಇಂತಹ ಸಂಕಷ್ಟಕರ ಸಂದರ್ಭದಲ್ಲಿ ಯಡಿಯೂರಪ್ಪ ತಮ್ಮ ಅಸ್ತಿತ್ವವನ್ನು ಕಾಪಾಡಿಕೊಳ್ಳುವ ಪ್ರಯತ್ನವನ್ನು ಮಾಡಲೇಬೇಕಾಗಿತ್ತು. ಸದಾನಂದ ಗೌಡ ನೇತೃತ್ವದ ಸರ್ಕಾರದಲ್ಲಿ ಯಡಿಯೂರಪ್ಪ ಕೃಪಾಪೋಷಿತ ನಾಟಕ ಮಂಡಳಿಯ ಅನೇಕ ಸಚಿವರಿಗೂ ಗೇಟ್‌ಪಾಸ್ ನೀಡುವಂತಹ ಪರಿಸ್ಥಿತಿ ನಿರ್ಮಾಣವಾಯಿತು. ಹತ್ತು ಹಲವು ಹಗರಣಗಳ ಕಾರಣದಿಂದ ಭಾಜಪ ಹೈಕಮಾಂಡ್ ಮತ್ತು ಸಂಘಪರಿವಾರ ಯಡಿಯೂರಪ್ಪನವರನ್ನು ಸಂಪೂರ್ಣ ಕಡೆಗಣಿಸಿತು. ಇಂಥ ಸಂದರ್ಭದಲ್ಲಿ ಯಡಿಯೂರಪ್ಪನವರಿಗೆ ಆಸರೆಯಾಗಿ ನಿಂತದ್ದು ಅವರಿಂದ ಮುಖ್ಯಮಂತ್ರಿ ಗಾದಿಗೆ ನಡೆದ ಚುನಾವಣೆಯಲ್ಲಿ ಪರಾಭವಗೊಂಡ ಶೆಟ್ಟರ್. ಒಂದು ವೇಳೆ ಶೆಟ್ಟರ್ ಅವರು ಯಡಿಯೂರಪ್ಪನವರ ಜೊತೆ ಗುರುತಿಸಿಕೊಳ್ಳದೆ ಹೋಗಿದ್ದಿದ್ದರೆ, ಆರೆಸ್ಸೆಸ್ ಮತ್ತು ಭಾಜಪದ ನಾಯಕರು ಯಡಿಯೂರಪ್ಪ ಮತ್ತವರ ಬೆಂಬಲಿಗರನ್ನು ಅತ್ಯಂತ ವ್ಯವಸ್ಥಿತವಾದ ರೀತಿಯಲ್ಲಿ ಭಾಜಪದಿಂದ ಹೊರಹಾಕುತ್ತಿದ್ದರು. ಇಂಥ ನಿರ್ಣಾಯಕ ಸಂದರ್ಭದಲ್ಲಿ ಶೆಟ್ಟರ್ ಯಡಿಯೂರಪ್ಪನವರಿಗೆ ನೆರವಾದರು.

ಸದಾನಂದ ಗೌಡರ ರಾಜೀನಾಮೆಗೆ ಒತ್ತಾಯಿಸಿ, ಹತ್ತು ಸಚಿವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕೆಂದು ಯಡಿಯೂರಪ್ಪ ನಿರ್ಧರಿಸಿದಾಗ ಅವರ ಗುಂಪಿನಲ್ಲಿದ್ದ ಅನೇಕರು ಮೀನಾ-ಮೇಷ ಎಣಿಸಿದರು. ಸಚಿವ ಪದವಿಗೆ ರಾಜೀನಾಮೆ ನೀಡಿದರೆ ಮುಂದೆ ತಮ್ಮ ಗತಿಯೇನು..? ಎಂದು ಕೆಲವರು ಗೊಣಗಿದ್ದೂ ಉಂಟು. ಇಂಥ ಪರಿಸ್ಥಿತಿಯಲ್ಲಿ ಶೆಟ್ಟರ್ ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುವ ನಿರ್ಧಾರ ತೆಗೆದುಕೊಂಡಿದ್ದರಿಂದ ಯಡಿಯೂರಪ್ಪನವರ ಗುಂಪು ನೆಮ್ಮದಿಯ ನಿಟ್ಟುಸಿರು ಬಿಡುವಂತಾಯಿತು. ಏಕೆಂದರೆ ಭಾಜಪ ಹೈಕಮಾಂಡ್ ಆಗಲಿ ಅಥವಾ ಆರೆಸ್ಸೆಸ್ ಶೆಟ್ಟರ್ ಅವರೂ ರಾಜೀನಾಮೆ ನೀಡಿದ್ದರಿಂದ ಎಲ್ಲರ ರಾಜೀನಾಮೆಯನ್ನು ಒಪ್ಪಿಕೊಳ್ಳುವ ಸಾಧ್ಯತೆ ಇರಲಿಲ್ಲ. ಒಂದು ವೇಳೆ ಎಲ್ಲರ ರಾಜೀನಾಮೆಯನ್ನು ಭಾಜಪ ಹೈಕಮಾಂಡ್ ಒಪ್ಪಿಕೊಂಡಿದ್ದರೆ ಭಾಜಪಗೆ ಲಿಂಗಾಯತ ಮತಬ್ಯಾಂಕ್ ಮೇಲೆ ಪ್ರಭಾವ ಬೀರುವ ಸಮರ್ಥ ನಾಯಕತ್ವವೇ ಇಲ್ಲದಂತಾಗುತ್ತಿತ್ತು.

ನಿಜ ಹೇಳಬೇಕೆಂದರೆ ಶೆಟ್ಟರ್ ಅವರು ಸಚಿವ ಪದವಿಗೆ ರಾಜೀನಾಮೆ ನೀಡಿದ್ದರಿಂದ ಯಡಿಯೂರಪ್ಪನವರಿಗೆ ಮುಖಭಂಗ ಆಗುವುದು ತಪ್ಪಿತು.





ಪತ್ನಿಯೊಂದಿಗೆ.....

ಅಷ್ಟು ಮಾತ್ರವಲ್ಲ ಮುಖ್ಯಮಂತ್ರಿ ಗಾದಿಯಿಂದ ಸದಾನಂದ ಗೌಡರನ್ನು ಪದಚ್ಯುತಗೊಳಿಸುವುದು ಅನಿವಾರ್ಯವಾಯಿತು.


ಭಾಜಪ ಹೈಕಮಾಂಡ್ ಈಗ ಸದಾನಂದ ಗೌಡರನ್ನು ಬದಲಾಯಿಸುವ ನಿರ್ಧಾರವನ್ನೇನೋ ತೆಗೆದುಕೊಂಡಿದೆ. ಅದಕ್ಕೆ ಕಾರಣ ಆರೆಸ್ಸೆಸ್ ಮತ್ತು ಭಾಜಪ ಹೈಕಮಾಂಡ್ ನಡೆಸಿದ ಸಮೀಕ್ಷೆಗಳು. ಈ ಸಮೀಕ್ಷೆಗಳು "ಸದಾನಂದ ಗೌಡರಿಗೆ ತಾವು ಪ್ರತಿನಿಧಿಸಿದ್ದ ಚಿಕ್ಕಮಗಳೂರು-ಉಡುಪಿ ಲೋಕಸಭಾ ಕ್ಷೇತ್ರವನ್ನು ಗೆಲ್ಲಲು ಸಾಧ್ಯವಾಗದಿದ್ದಾಗ ಕರ್ನಾಟಕದಾದ್ಯಂತ ಭಾಜಪಗೆ ಗೆಲುವು ತಂದುಕೊಡುವುದೂ ಅವರಿಂದ ಸಾಧ್ಯವಿಲ್ಲ. ಶೆಟ್ಟರ್ ಅವರನ್ನು ಮುಖ್ಯಮಂತ್ರಿ ಮಾಡಿದರೆ ಮಾತ್ರ ಮಂಕಾಗಿರುವ ಭಾಜಪದ ವರ್ಚಸ್ಸನ್ನು ವೃದ್ಧಿಸಲು ಸಾಧ್ಯ" ಎಂದು ಸ್ಪಷ್ಟ ಪಡಿಸಿವೆ.

ಪ್ರಸಕ್ತ ಹಿನ್ನೆಲೆಯಲ್ಲಿ ಭಾಜಪ ಹೈಕಮಾಂಡ್ ಶೆಟ್ಟರ್ ಅವರನ್ನು ಮುಖ್ಯಮಂತ್ರಿ ಗಾದಿಗೆ ಏರಿಸಲು ಅಂತಿಮವಾಗಿ ನಿರ್ಧಾರ ಕೈಗೊಂಡಿದೆ. ಆದರೆ ಭಾಜಪದ ನಾಲ್ಕು ವರ್ಷ ಒಂದು ತಿಂಗಳ ಆಡಳಿತದ ಸಿಂಹಾವಲೋಕನ ಮಾಡಿದಾಗ, ಶೆಟ್ಟರ್ ಅವರು ಮುಖ್ಯಮಂತ್ರಿಯಾಗಿ ಮುಂದೆ ಕ್ರಮಿಸಬೇಕಾದ ದಾರಿ ಅತ್ಯಂತ ದುರ್ಗಮವಾಗಿದೆ. ಭಾಜಪದ ಹಿಂದಿನ ಮುಖ್ಯಮಂತ್ರಿಗಳು ಮಾಡಿದ ಪಾಪದ ಹೊರೆ ಅಗಾಧವಾಗಿದೆ. ಇಂಥ ಅಗಾಧವಾದ ಪಾಪದ ಹೊರೆಯನ್ನು ಇಳಿಸಿ ಭಾಜಪಗೆ ಹೊಸ ಶಕ್ತಿ, ಸ್ಥೈರ್ಯವನ್ನು ನೀಡುವುದು ಅಷ್ಟು ಸುಲಭದ ಕೆಲಸವಲ್ಲ. ದಕ್ಷತೆ, ಪ್ರಾಮಾಣಿಕತೆ, ಸರಳತೆ, ಸಜ್ಜನಿಕೆಗೆ ಹೆಸರಾಗಿರುವ ಶೆಟ್ಟರ್ ಅವರು ಅತ್ಯಂತ ವಿವೇಕದ ಹೆಜ್ಜೆಗಳನ್ನು ಈಗ ಇಡಬೇಕಾಗಿದೆ. ಪಕ್ಷದ ಎಲ್ಲ ಗುಂಪುಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಎಲ್ಲರ ಭಾವನೆಗಳಿಗೆ ಸ್ಪಂದಿಸುವುದರ ಮೂಲಕ ಭಾಜಪಕ್ಕೆ ಮುಂದಿನ ಚುನಾವಣೆಯಲ್ಲಿ ಗೆಲುವು ದೊರಕಿಸಿಕೊಡುವ ಮಹತ್ತರವಾದ ಹೊಣೆಗಾರಿಕೆ ಅವರ ಮೇಲಿದೆ. ಇಂಥ ಜವಾಬ್ದಾರಿಯನ್ನು ... ಶೆಟ್ಟರ್ ಅವರಿಗೆ ... ...

ನಕಲಿ ಪೈಲ್ವಾನ್ ಯಶವಂತರಾವ್ ಜಾದವ್ ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷನಾಗಿ ನಡೆಸಿದ ದರ್ಬಾರು, ಅವ್ಯವಹಾರಗ[ಳ] ಕತೆಗಳಿಗೆ ಲೆಕ್ಕವಿಲ್ಲ. ಈ ಜಾದವ್‌ನ ಮುಂಡಾಮೋಚುವ ಕಾರ್ಯವೈಖರಿ ಎಂತಹದ್ದು ಎಂದರೆ ಈತ ಮೊದಲು ತನ್ನ ಹೆಂಡತಿಯ ತಾಯಿ ದುಗ್ಗಮ್ಮ[ನ] ಹೆಸರಿಗೆ ಕೋಟ್ಯಾಂತರ ರೂಪಾಯಿ ಬೆಲೆಯ ನಿವೇಶನವನ್ನು ಬಿಡಿಗಾಸಿಗೆ ಹರಾಜು ಮಾಡಿದ. ಆನಂತರ ಅದೇ ದುಗ್ಗಮ್ಮನ ಹೆಸರಿನಲ್ಲಿದ್ದ ನಿವೇಶನವನ್[ನು] ಆಕೆಯ ಮಗಳು – ಅಂದರೆ ಜಾದವ್‌ನ ಪತ್ನಿಯ – ಹೆಸರಿಗೆ ದಾನವಾಗಿ ಪಡೆದ. ಅಲ್ಲಿಗೆ ಜಾದವ್‌ನ ಕಿಸೆಗೆ ಆ ನಿವೇಶನ ಕಡಿಮೆ ಕಾಸಿಗೆ ಬಿದ್ದಿತು. ಈಗ ಅದೇ ನಿವೇಶನದಲ್ಲಿ ಜಾದವ್ ಸಾಹೇಬ ದೊಡ್ಡ ಶಾಂಪಿಗ್ ಕಾಂಪ್ಲೆಕ್ಸ್ ಕಟ್ಟಿಸಿದ್ದಾನೆ.

ದಾವಣಗೆರೆ: ನಗರಾಭಿವೃದ್ಧಿ ಪ್ರಾಧಿಕಾರವನ್ನೇ ನುಂಗಿದ ಜಾದವ[್]

ದಾವಣಗೆರೆಯಲ್ಲಿ ನಕಲಿ ಪೈಲ್ವಾನರುಗಳ ಟ್ರೆಂಡೊಂದು ಶುರುವಾಗಿದೆ. ಅದು ಆರಂಭಗೊಂಡದ್ದು 1996ರಿಂದೀಚೆಗೆ. ಹಾಗಂತ ಇಲ್ಲೀಗ ಸಾಚಾ ಪೈಲ್ವಾನರುಗಳಿಲ್ಲ ಎಂದೇನಲ್ಲ. ರಾಜ್ಯ ಮತ್ತು ದೇಶದಾದ್ಯಂತ ಚಾರ್ಲಿ ಪೈಲ್ವಾನ್ ಮತ್ತು ನಾಗಪ್ಪ ಪೈಲ್ವಾನ್ ದಾವಣಗೆರೆಯನ್ನು ಮೆರೆಸಿದ್ದರು. ಈಗಲೂ ಮಹಂತೇಶ್ ಪೈಲ್ವಾನ್ ದೇವನಗಿರಿಯ ಹೆಸರನ್ನು ಮೆರೆಸುತ್ತಿದ್ದಾರೆ. ಆದರೆ ಇಂಥಾ ಸಾಚಾ ಪೈಲ್ವಾನರುಗಳ ಕೀರ್ತಿಗೆ ಕಳಂಕ ತರುವಂತೆ ನಕಲಿ ಪೈಲ್ವಾನರುಗಳು ಈಗ ದಾವಣಗೆರೆಯಲ್ಲಿ ಬರಪೂರ ಮೆರೆಯುತ್ತಿರುವುದೇ ವಿಷಾದದ ಸಂಗತಿ.


ಸಿದ್ದೇಶ್ವರ

ಈ ನಕಲಿ ಪೈಲ್ವಾನರ ಟ್ರೆಂಡು ದೇವನಗಿರಿಯಲ್ಲಿ ಆರಂಭಗೊಂಡಿದ್ದು ಬಿಜೆಪಿಯ ರಾಷ್ಟ್ರ ನಾಯಕ ಅಡ್ವಾನಿಯ ರಥಯಾತ್ರೆ ಸಂದರ್ಭದಲ್ಲಿ. ಶತಮಾನಗಳಿಂದ ಕೋಮು ಸೌಹಾರ್ದತೆಯಿಂದಿದ್ದ ದೇವನಗರಿಯನ್ನು ಅದ್ಯಾವಾಗ ಅಡ್ವಾಣಿಯ ಅಧ್ವಾನ ರಥ ಯಾತ್ರೆ ಪ್ರವೇಶಿಸಿತೋ ಆಗಿನಿಂದ ಕೋಮುದಳ್ಳುರಿಯ ವಿಷಬೀಜ ಬಿತ್ತಿದ ಪ್ರಾಡಕ್ಟುಗಳಂತೆ ಇಲ್ಲಿ ನಕಲಿ ಪೈಲ್ವಾನರು ಗಳು ಹುಟ್ಟಿಕೊಂಡರು. ಇಲ್ಲಿಯ ಪಡ್ಡೆ ಹೈಕಳ ಎದೆ ಯೊಳಗೆ ಬಾಬರಿ ಮಸೀದಿ ವಿಷಯದಲ್ಲಿ ಅಲ್ಪಸಂಖ್ಯಾತರ ವಿರುದ್ಧ ಕೋಮುಭಾವನೆಯನ್ನು ಹುಟ್ಟಿಸಿ, ಹಿಂದೂ ಧರ್ಮದ ಸಮೂಹ ಸನ್ನಿಯನ್ನು ಬಿಜೆಪಿ ಸೃಷ್ಟಿಸಿತು. ಇದೆಲ್ಲದರ ಪರಿಣಾಮದಂತೆ ತಲೆ ಎತ್ತಿದವನು ಯಶವಂತ ರಾವ್ ಜಾದವ್ ಎಂಬ ನಕಲಿ ಪೈಲ್ವಾನ.

ಈ ನಕಲಿ ಪೈಲ್ವಾನ್ ಯಶವಂತರಾವ್ ಜಾದವ್ ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷನಾಗಿ ನಡೆಸಿದ ದರ್ಬಾರು, ಅವ್ಯವಹಾರಗಳ ಕತೆ ಇಲ್ಲಿದೆ.

ಕೆಮ್ಮಣ್ಣಿನಲ್ಲಿ ಹೊರಳಾಡಿದ


ಸುಗಂಧ ವೈನ್ಸ್ ಎಂಬ ಹೆಂಡದಂಗಡಿಯಲ್ಲಿ ಸಪ್ಲೈಯರಾಗಿದ್ದ ಜಾದವ್ ಹೊಂಡದ ಸರ್ಕಲ್‌ನಲ್ಲಿರುವ ಕೆರೆ ಗರಡಿ ಮನೆಯಲ್ಲಿ ತಾಲೀಮು ಶುರುಮಾಡಿದ. ಒಂದೆರಡು ಬಾರಿ ಅಖಾಡಕ್ಕಿಳಿದು ಕುಸ್ತಿ ಮಾಡಿದ. ಹಾಗಂತ ಈತ ತನ್ನ ಸಮಾಸಮಾ ಪೈಲ್ವಾನರ ರಟ್ಟೆ ಹಿಡಿದು ಬಡಿದಾಡಿದವನಲ್ಲ, ಅದು ಹೇಗೋ ತನ್ನ ಮೈಯಿಗೆ ಹನುಮಕಾಸೆ ಬಿಗಿದು ಗರಡಿಮನೆಯಲ್ಲಿ ಹದಗೊಂಡ ಕೆಮ್ಮಣ್ಣಿನಲ್ಲಿ ಹೊರಳಾಡಿದ ಎಂಬುದಷ್ಟೇ ಗ್ಯಾರಂಟಿ.

ಇಂಥಾ ಜಾದವ್ 1996ರಲ್ಲಿ ದಾವಣಗೆರೆಯ ರಾಜಕಾರಣಕ್ಕೆ ಎಂಟ್ರಿ ನೀಡಿದ. ಬಿಜೆಪಿಯಿಂದ ನಗರಸಭೆಯ ಸದಸ್ಯನಾದ. ಕೆಲವೇ ಸಮಯದಲ್ಲಿ ನಗರಸಭೆಯ ಅಧ್ಯಕ್ಷನೂ ಆದ. ಈತ ಅಧ್ಯಕ್ಷನಾಗಿದ್ದ ಅವಧಿ ಯಲ್ಲೇ ದಾವಣಗೆರೆ ನಗರಸಭೆಯಲ್ಲಿ ಡೋರ್ ನಂಬರ್ ಅವ್ಯವಹಾರ ನಡೆದು ಭ್ರಷ್ಟಾಚಾರದ ಹೊಸ ಪರಂಪರೆಗೆ ನಾಂದಿ ಹಾಡಿದ್ದು.

ಬರಿಗೈದಾಸ ಕೋಟ್ಯಾಧಿಪತಿ ಆದ

ಜಾದವ್ ನೋಡಲು ಪೈಲ್ವಾನನಂತೆಯೇ ಇದ್ದಾನೆ. ಬಲಿ ರಟ್ಟೆ, ಸೆಟೆದೆದೆ, ನಡಿಗೆಯ ಗತ್ತುಗಳು ಅವನ ಬಾಡಿಲಾಂಗ್‌ವೇಜಿಗೆ ತಕ್ಕನಾಗಿವೆ. ದಾವಣಗೆರೆ ಜನರ ವರಸೆಗಳೇ ವಿಚಿತ್ರ. ಒಬ್ಬನಿಗೆ ಮೈಕಟ್ಟಿದ್ದು ಆತ ದಡ್ಡನಾಗಿದ್ದರೂ ಪರವಾಗಿಲ್ಲ, ಅವನಿಗೆ ದಮ್ಮಿದೆ ಎಂದೊಪ್ಪಿಕೊಳ್ಳುವ ಜನ ಇಲ್ಲಿದ್ದಾರೆ. ಅಂತಹವರ ಎಡವಟ್ಟನಿಂದಾಗಿ 1996ರಲ್ಲಿ ಬರಿಗೈದಾಸನಾಗಿದ್ದ ಜಾದವ್ ಇವತ್ತು ಎಲ್ಲವನ್ನೂ ಹೊಂದಿರುವವನಾಗಿದ್ದಾನೆ.

90ರ ದಶಕದ ಮಧ್ಯದವರೆಗೂ ದಾವಣಗೆರೆಯಲ್ಲಿ ಕಾಂಗ್ರೆಸ್ಸಿನ ಶಾಮನೂರು ಶಿವಶಂಕರಪ್ಪನವರ ರಾಜಕಾರಣವೇ ಗಟ್ಟಿಯಾಗಿತ್ತು. ಶಿಕ್ಷಣ, ಬ್ಯಾಂಕು, ಜಾತಿ ಪ್ರಭಾವ, ಜೊತೆಗೊಂದಿಷ್ಟು ದಾನ-ಧರ್ಮ ಅಂತೆಲ್ಲ ಮಾಡಿದ್ದ ಶಾಮನೂರರಿಗೆ ಭರ್ಜರಿ ಹೆಸರಿತ್ತು. ಹಾಗೆ ನೋಡಿದರೆ ಶಾಮನೂರರ ತಂಡದ ಎದುರು ದಾವಣಗೆರೆಯಲ್ಲಿ ಯಾರೂ ಚುನಾವಣೆಯಲ್ಲಿ ನಿಂತು ಜಯಿಸಲು ಸಾಧ್ಯವಿಲ್ಲ ಎಂಬ ವಾತಾವರಣವಿತ್ತು. ಗ್ರಾಮ ಪಂಚಾಯತಿಗಳಿಂದ ಹಿಡಿದು ಲೋಕ ಸಭೆಯವರೆಗೂ ಶಾಮನೂರರು ಆಳುತ್ತಿದ್ದ ಕಾಲ ಅದಾಗಿತ್ತು. ಅದುವರೆಗೂ ದಾವಣಗೆರೆ ರ್‍ಾಜಕೀಯವಾಗಿ ಮಾನಮರ್ಯಾದೆಗೆ ಹೆಸರಾಗಿತ್ತು.


ಮಲ್ಲಿಕಾರ್ಜುನಪ್ಪ ದಂಪತಿಗಳು...

ಆದರೆ ಯಾವಾಗ ಬಿಜೆಪಿ ದೇಶದಲ್ಲೆಲ್ಲಾ ತನ್ನ ಹಿಂದೂತ್ವ ವಾದವನ್ನು ಬಿತ್ತುತ್ತಾ ಹೋಯಿತೋ ಆಗ ದಾವಣಗೆರೆಯಲ್ಲೂ ಅದರ ಶನಿಸಂತಾನವು ಹುಟ್ಟಿಕೊಂಡವು. ಅದೇ ಹೊತ್ತಿಗೆ ಭೀಮಸಮುದ್ರದ ಅಡಿಕೆ ದಲ್ಲಾಳಿ ಮಲ್ಲಿಕಾರ್ಜುನಪ್ಪ ಚಿತ್ರದುರ್ಗದಿಂದ ದಾವಣಗೆರೆ ವಲಸೆ ಬಂದು ಸಂಸತ್ ಚುನಾವಣೆಗೆ ಗಂಟು ಬಿದ್ದರು.


1990ರಲ್ಲಿ ದಾವಣಗೆರೆ ಲೋಕಸಭಾ ಕ್ಷೇತ್ರದಿಂದ ಕಾಂಗ್ರೆಸ್ ಪಕ್ಷದ ಚೆನ್ನಯ್ಯ ಒಡೆಯರ್ ಕೇವಲ 18 ಮತಗಳಿಂದ ಗೆದ್ದಿದ್ದರು. 1996ರಲ್ಲಿ ನಡೆದ ಚುನಾವಣೆಯಲ್ಲಿ ಅದೇ ಒಡೆಯರ್ ವಿರುದ್ಧ ಬಿಜೆಪಿಯ ಮಲ್ಲಿಕಾರ್ಜುನಪ್ಪ ಸ್ಪರ್ಧಿಸಿದ್ದರು. ಆಗಲೇ ಯಶವಂತರಾವ್ ಜಾದವ್‌ನ ಪೈಲ್ವಾನ್ ಮೈಕಟ್ಟು ಬಿಜೆಪಿಯ ಕೆಲಸಕ್ಕೆ ಬರುತ್ತದೆ ಎಂದು ಮಲ್ಲಿಕಾರ್ಜುನಪ್ಪನವರ ಮಗ ಸಿದ್ದೇಶ್ವರರಿಗೆ ಅನಿಸಿದ್ದು. ಆ ಕಾರಣಕ್ಕೆ ಸಿದ್ದೇಶ್ವರ ಈ ನಕಲಿ ಪೈಲ್ವಾನನ್ನು ಪ್ರೋತ್ಸಾಹಿಸಲಾರಂಭಿಸಿದರು. ಜಾದವ್ ಕೂಡ ಮಲ್ಲಿಕಾರ್ಜುನರ ಪರವಾಗಿ ರೌಡಿಗಳನ್ನು ಕರೆತಂದು ತನ್ನ ಸೇವೆ ಸಲ್ಲಿಸಿದ. ಇದೆಲ್ಲದರೊಂದಿಗೆ ಬಿಜೆಪಿ ಬಿತ್ತಿದ್ದ ಕೋಮುವಾದಿ ವಿಷವೂ ಕೆಲಸ ಮಾಡಿದ್ದರಿಂದ ಮಲ್ಲಿಕಾರ್ಜುನಪ್ಪ ಒಂದು ಲಕ್ಷ ಮತಗಳ ಅಂತರದಿಂದ ಸಂಸದರಾದರು.

2003ರಲ್ಲಿ ಮಲ್ಲಿಕಾರ್ಜುನಪ್ಪನವರು ನಿಧನ ಹೊಂದಿದರು. ಆಗ ಅವರ ಮಗ ಸಿದ್ದೇಶ್ವರ ತಾನೇ ತನ್ನ ಅಪ್ಪನ ರಾಜಕಾರಣಕ್ಕೆ ವಾರಸುದಾರ ಎಂದು ಗಂಟುಬಿದ್ದ. ಅಪ್ಪ ಶಿವನ ಪಾದ ಸೇರಿದ ಬೆನ್ನಲ್ಲೇ ಚುನಾವಣೆ ಎದುರಾಗಿದ್ದರಿಂದ ಮತದಾರರಲ್ಲಿ ಸಿದ್ದೇಶ್ವರರ ಬಗ್ಗೆ ಸಿಂಪಥಿ ಇತ್ತು, ಅದರ ಜೊತೆಗೆ ಅಡಿಕೆ ವ್ಯಾಪಾರಿ ಸಿದ್ದೇಶ್ವರರ ಬಳಿ ಹೇರಳವಾಗಿ ದುಡ್ಡಿತ್ತು. ಚುನಾವಣೆಯಲ್ಲಿ ಕಾಂಗ್ರೆಸ್ಸಿನವರ ಎದುರು ಬೀದಿಗಿಳಿದು ಬಡಿದಾಡಲು ಯಶವಂತರಾವ್ ಜಾದವ್ ತನ್ನ ಮೈಗೆ ಎಣ್ಣೆ ಹಚ್ಚಿ ಸಿದ್ಧನಾದ. ಇದೆಲ್ಲದರ ಫಲವಾಗಿ ಸಿದ್ದೇಶ್ವರ 2004ರಲ್ಲಿ ಲೋಕಸಭಾ ಚುನಾವಣೆಯಲ್ಲಿ ಗೆದ್ದು ಸಂಸದರಾದರು. ಹಾಗೆಯೇ 2008ರಲ್ಲೂ ಮತ್ತೆ ಗೆದ್ದರು.

ಹೀಗೆ ಮಲ್ಲಿಕಾರ್ಜುನಪ್ಪ ಮತ್ತು ಅವರ ಮಗ ಸಿದ್ದೇಶ್ವರರ ರಾಜಕಾರಣಕ್ಕೆ ಬೆಂಗಾವಲಾಗಿ ನಿಂತಿದ್ದ ಜಾದವ್‌ನ ರಾಜಕೀಯ ಅದೃಷ್ಟವೂ ಖುಲಾಯಿಸಿತು.

ಇದಕ್ಕೂ ಮುನ್ನ ಜಾದವ್ ಎರಡು ಬಾರಿ ದಾವಣಗೆರೆ ವಿಧಾನಸಭಾ ಚುನಾವಣೆಯಲ್ಲಿ ಶಾಮನೂರರ ವಿರುದ್ಧ ಸ್ಪರ್ಧಿಸಿ ಸೋತಿದ್ದ. 2008ರವರೆಗೂ ಅಖಂಡವಾಗಿದ್ದ ದಾವಣಗೆರೆ ವಿಧಾನಸಭಾ ಕ್ಷೇತ್ರ ಆ ವರ್ಷ ಉತ್ತರ ಮತ್ತು ದಕ್ಷಿಣ ವಿಧಾನಸಭಾ ಕ್ಷೇತ್ರಗಳಾಗಿ ವಿಭಜನೆಗೊಂಡಿತು. ಆಗ ಮೂರನೆ ಬಾರಿಗೆ ದಕ್ಷಿಣ ದಾವಣಗೆರೆ ಕ್ಷೇತ್ರದಿಂದ ಶಾಮನೂರರ ವಿರುದ್ಧ ಚುನಾವಣಾ ಕಣಕ್ಕೆ ಇಳಿದ ಜಾದವ್ ಮತ್ತೊಮ್ಮೆ ಅಮೋಘವಾಗಿ ಸೋತ.

ಹೀಗೆ ಮತದಾರರು ಜಾದವ್‌ನ ರಾಜಕೀಯ ಆಕಾಂಕ್ಷೆಗೆ


ಜಾದ[ವ್]

ಹಿನ್ನಡೆ ಗೀಚಿದ್ದರೂ ಸಂಸದ ಸಿದ್ದೇಶ್ವರ ಮಾತ್ರ ಜಾದವ್[...] ಕೈಹಿಡಿದು ಆತನನ್ನು ದಾವಣಗೆರೆ-ಹರಿಹರ ನಗರಾಭಿವ[ೃದ್ಧಿ] ಪ್ರಾಧಿಕಾರದ ಅಧ್ಯಕ್ಷಗಾಗಿಯಲ್ಲಿ ಕೂರಿಸಲು ಮುಂದಾದರು. ಆಗ ಇದರ ವಿರುದ್ಧ ಬಿಜೆಪಿಯೊಳಗೇ ಅಸಮಾಧಾ[ನ] ವ್ಯಕ್ತವಾಗಿತ್ತು. ತರಕಾರಿ ಮಂತ್ರಿ ರವೀಂದ್ರನಾಥರಂತ[ವರು] ಜಾದವ್‌ನನ್ನು ಪ್ರಾಧಿಕಾರದ ಅಧ್ಯಕ್ಷನನ್ನಾಗಿ ಮಾಡುವುದ[ನ್ನು] ಖಡಕ್ಕಾಗಿ ವಿರೋಧಿಸಿದ್ದರು. ಪಕ್ಷಕ್ಕಾಗಿ ಹಲವಾರು ವರ್ಷಗ[ಳ] ಕಾಲ ಮಣ್ಣು ಹೊತ್ತಿದ್ದ ಹಿರಿಯರೂ ಈ ಕ್ರಮವ[ನ್ನು] ಟೀಕಿಸಿದ್ದರು. ಆದರೆ ಸಿದ್ದೇಶ್ವರ ಜಾದವ್‌ನಿಗೆ ಈ ಸ[...] ಕೊಡುವ ಬಗ್ಗೆ ಪಟ್ಟು ಹಿಡಿದರು.

ಸಿದ್ದೇಶ್ವರ ಆಗಿನ ಮುಖ್ಯಮಂತ್ರಿ ಯಡ್ಡಿಯ ಪಾಳೆ[ಯ]ದಲ್ಲಿ ದುಡ್ಡಿನ ಧಣಿಯಾಗಿದ್ದರಲ್ಲದೆ, ಯಡ್ಡಿಗೆ ಪರಮಾ[ಪ್ತ]ನಾಗಿದ್ದರು. ಹಾಗೆಯೇ ದಾವಣಗೆರೆಯನ್ನು ನಲವತ್ತು ವ[ರ್ಷ]ಗಳಿಂದ ಆಳಿದ್ದ ಶಾಮನೂರರ ಕಾಂಗ್ರೆಸ್ ಭದ್ರಕೋಟೆಯ[ನ್ನು] ಭಗ್ನಗೊಳಿಸಬೇಕೆಂದರೆ ಜಾದವ್‌ನಂತಹ ಜಟ್ಟಿ ಬೇ[ಕು] ಎನ್ನುವ ಭ್ರಮೆಯನ್ನು ಸೃಷ್ಟಿಸಿದ್ದರು. ಈ ಎಲ್ಲ ಕಾರಣಗಳಿ[ಂದ] ಯಡ್ಡಿಯೂ ಸಿದ್ದೇಶ್ವರರ ಮಾತನ್ನು ತೆಗೆದುಹಾಕಲಿ[ಲ್ಲ]. ಪ್ರತಿಫಲವಾಗಿ ಜಾದನ್‌ನನ್ನು ದಾವಣಗೆರೆ-ಹರಿಹ[ರ] ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷನಾಗಿರುವುದರಲ್ಲಿ ಸಿದ್ದೇ[ಶ್ವರ] ಯಶಸ್ವಿಯಾದರು.

ಪ್ರಾಧಿಕಾರ ಎಂಬ ಹುಲ್ಲುಗಾವಲಿಗೆ ಅದ್ಯಾವಾಗ ಜಾದವ್ ಒಕ್ಕರಿಸಿದನೋ ಆಗಲೇ ಅದಕ್ಕೆ ಅಷ್ಟ ಶನಿ[ಯ] ಕಾಟ ಅಟಕಾಯಿಸಿಕೊಂಡದ್ದು. ಸುಗಂಧ ವೈನ್ಸ್[ನ] ಸಪ್ಲೈಯರ್ ಆಗಿದ್ದ ಜಾದವ್‌ನ ಅದೃಷ್ಟ ಖುಲಾಯಿಸಿದ[...]

ಮೂರು ವರ್ಷ ಐವತ್ತೊಂದು ದಿನಗಳ ಕಾಲ ಯ[...] ಅಡ್ಡಿ ಆತಂಕವಿಲ್ಲದಂತೆ ಪ್ರಾಧಿಕಾರದಲ್ಲಿ ಜಾದವ್ ಭರ್ಜ[ರಿ] ಅಧಿಕಾರ ನಡೆಸಿದನಲ್ಲದೆ ಬರಪೂರ ಭೋಜನವನ್[ನು] ಮಾಡಿದ. ಪ್ರಾಧಿಕಾರದ ಕಚೇರಿಯನ್ನೇ ತನ್ನ ರಿಯಲ್[...]

ಸೋತರೂ ಕಿಸೆ ತುಂಬಿಸಿಕೊಂಡ ಚಾಲಾಕಿ ಜಾದವ್

ಅಚ್ಚರಿಯ ಸಂಗತಿ ಯಾವುದೆಂದರೆ ಈ ಯಶವಂತರಾಜ್ ಜಾದವ್ ಮೂರು ಬಾರಿ ದಾವಣಗೆರೆ ವಿಧಾನಸಭಾ ಚುನಾವಣೆಯಲ್ಲಿ ಸೋತಿದ್ದರೂ ತನ್ನ ಕಿಸೆಯನ್ನು ತುಂಬಿಸಿಕೊಳ್ಳುವಲ್ಲಿ ಮಾತ್ರ ಸೋಲಲಿಲ್ಲ!


ಈತ ಪ್ರತಿ ಬಾರಿ ಸ್ಪರ್ಧಿಸಿದಾಗ ಕರ್ನಾಟಕದ ಉದ್ದಗಲ ಹಂಚಿಹೋಗಿರುವ ತನ್ನ ಸ್ವಜಾತಿ ಮರಾಠಿ ಸಮುದಾಯ ಹೆಂಡದ ದೊರೆಗಳಿಂದ ಫಂಡೆತ್ತಿದ. ಮಹಾರಾಷ್ಟ್ರದಿಂದಲೂ ಕೋಟ್ಯಾಂತರ ರೂಪಾಯಿಗಳ ಆಮದಾನಿ ಬಂತು. ಬಿಜೆಪಿ ಪಕ್ಷದಿಂದಲೂ ಆರ್ಥಿಕ ನೆರವು ಸಿಕ್ಕಿತು. ಅಷ್ಟೇ ಅಲ್ಲದೆ, ಬಿಜೆಪಿ ಸಂಸದ ಮತ್ತು ಅಡಿಕೆ ಧಣಿ ಸಿದ್ದೇಶ್ವರ ತಮ್ಮ ಬಂಟನಿಗೆ ಕೈ ಎತ್ತಿ ಕೊಟ್ಟರು. ಶಾಮನೂರು ವಿರೋಧಿಗಳೂ ಹಣ ನೀಡಿದರು. 2008ರ ಚುನಾವಣೆಯಲ್ಲಂತೂ ಬಳ್ಳಾರಿಯ ಗಣಿ ಕಳ್ಳ ರೆಡ್ಡಿ ಗ್ಯಾಂಗಿನಿಂದಲೂ ಬರೋಬ್ಬರಿ 30 ಲಕ್ಷ ರೂಪಾಯಿ ಸಂದಾಯವಾಯಿತು.


ಹೀಗೆ ವಿವಿಧ ಕಡೆಗಳಿಂದ ಹರಿದುಬಂದ ಕೋಟ್ಯಾಂತರ ರೂಪಾಯಿಗಳನ್ನೆಲ್ಲಾ ಚುನಾವಣೆಗೆ ವೆಚ್ಚ ಮಾಡದೆ ತನ್ನ ಜೇಬಿನಲ್ಲಿಟ್ಟುಕೊಂಡ ಚಾಲಾಕಿ ಜಾದವ್!

ತನ್ನ ವಸೂಲಿ ದಂಧೆಗೆ ಜಾದವ್ ನೇಮಿಸಿಕೊಂಡಿದ್ದು ಸುರೇಶ್ ಸಿಂಧೆ ಎಂಬ ಕಸುಬುದಾರನನ್ನು. ಈ ಹಿಂದೆ ಮೈಮುಚ್ಚಿಕೊಳ್ಳಲು ಸೆಟ್ಟಾಗೆ ಬಟ್ಟೆಯೂ ಇಲ್ಲದಿದ್ದ, ಮೆಟ್ಟಲು ಎಕ್ಕಡವೂ ಇಲ್ಲದಿದ್ದ ಈ ಸುರೇಶ್ ಈಗ ಹೇಗೆ ಬೆಳೆದಿದ್ದಾನೆಂದರೆ ಆತನ ಕೈಗಳ ಹತ್ತು ಬೊಟ್ಟುಗಳಲ್ಲೂ ಹತ್ತು ಬಂಗಾರದ ಉಂಗುರಗಳು, ಮುಂಗಟ್ಟಿನಲ್ಲಿ ಬ್ರೇಸ್‌ಲೆಟ್, ಕೊರಳು ಜೋತು ಬೀಳುವಂತಹ ದಪ್ಪನೆಯ ಚೈನ್ ಕಂಗೊಳಿಸುತ್ತಿರುತ್ತವೆ.

ಇನ್ನು ಚುನಾವಣೆಗೆ ನಿಂತಾಗಲೆಲ್ಲ ತನ್ನ ಬಳಿ 30x40ರ ನಿವೇಶನ ಹೊರತುಪಡಿಸಿದರೆ ಯಾವ ಆಸ್ತಿಯೂ ಇಲ್ಲ ಎಂದು ಚುನಾವಣಾ ಆಯೋಗಕ್ಕೆ ಆಸ್ತಿ ವಿವರ ನೀಡುತ್ತಿದ್ದ ಜಾದವ್ ಈಗ ಕೋಟ್ಯಾಧಿಪತಿಯಾಗಿದ್ದಾನೆ.

ಆದಾಯ ಇಲಾಖೆ ಜಾದವ್ ಮತ್ತು ಸುರೇಶ್ ಸಿಂಧೆಯ ಮನೆಯ ಮೇಲೆ ದಾಳಿ ಮಾಡಿದರೆ ಸಿಗುವ ಆಸ್ತಿಯನ್ನು ಕಂಡು ಸ್ವತಃ ಸಿದ್ದೇಶ್ವರರೇ ಬೆಚ್ಚಿ ಬೀಳಬಹುದು ಎಂದು ದಾವಣಗೆರೆಯ ಜನ ತಮಾಷೆ ಮಾಡುತ್ತಿದ್ದಾರೆ.


ಅಡಿಕೆ ಧಣಿ ಸಿದ್ದೇಶ್ವರ ತನ್ನ ದಿವಂಗತ ತಂದೆ-ತಾಯಿಗಳ ಮೂರ್ತಿಗಳನ್ನು ನಿರ್ಮಿಸಿರುವುದು ಮತ್ತು ಅವುಗಳಿಗೆ ಪ್ರದಕ್ಷಿಣೆ ಹಾಕುತ್ತಿರುವ ಅಡ್ವಾಣಿ, ಅನಂತ್‌ಕುಮಾರ್ ಮತ್ತು ಯಡ್ಡಿ



ಜಾದವ್ ಕಾಂಪ್ಲೆಕ್ಸ್

ದಂಧೆಯ ಅಡ್ಡೆಯಾಗಿ ಪರಿವರ್ತಿಸಿದ.

ಎಲ್ಲಕ್ಕಿಂತ ಮುಖ್ಯವಾಗಿ ದಾವಣಗೆರೆಯಲ್ಲಿ ಅತಿ ದುಬಾರಿ ಕ್ಷೇತ್ರವಾದ ...ಗಪ್ಪ ಬಡಾವಣೆಯಲ್ಲಿದ್ದ ಏಳು ಸರ್ಕಾರಿ ನಿವೇಶನಗಳನ್ನು ಈತ ...ವಾಗಿ ಮುಂಡಾ ಮೋಚಿದ. ಮೊದಲು ಸುದ್ದಿಯಲ್ಲೇ ಇರದ ಪತ್ರಿಕೆಗೆ ...ಶನಗಳ ಹರಾಜಿನ ಜಾಹೀರಾತು ನೀಡಿದ. ಅದು ಜನರ ಗಮನಕ್ಕೆ ... ನಕಲಿ ಹರಾಜಿನಲ್ಲಿ ಆ ನಿವೇಶನಗಳನ್ನೆಲ್ಲ ಮಾರಿ ಹಾಕಿದ.

ಜಾದವ್‌ನ ಮುಂಡಾಮೋಚುವ ಕಾರ್ಯವೈಖರಿ ಎಂತಹದ್ದು ...ನಕ್ಕೆ ಇಲ್ಲೊಂದು ಸ್ಪಷ್ಟ ಉದಾಹರಣೆ ಇದೆ ನೋಡಿ.

...ತ್ತು ನಿಜಲಿಂಗಪ್ಪ ಬಡಾವಣೆಯಲ್ಲಿ ಒಂದು ಚದುರ ಅಡಿಯ ಬೆಲೆಯೇ ... ರೂಪಾಯಿಯಷ್ಟಿದೆ. ಅಂದರೆ 60x40 ಅಡಿಯ ಸೈಟಿನ ಬೆಲೆ ...ಟ್ಟೆಯಲ್ಲಿ ಸುಮಾರು 50 ಲಕ್ಷವಾಗುತ್ತದೆ. ಆದರೆ ಪ್ರಾಧಿಕಾರ ಒಂದು ... ಅಡಿಗೆ ನಿಗದಿ ಮಾಡಿರುವ ರೇಟು ಕೇವಲ 120 ರೂಪಾಯಿ. ...ಅದೇ 60x40ಸೈಟಿನ ರೇಟು ಮೂರು ಲಕ್ಷ ರೂಪಾಯಿಗಳಿಗಿಂತಲೂ

...ನರ ಲಾಭ ಪಡೆಯಲು ಜಾದವ್ ಏನು ಮಾಡಿದ ಗೊತ್ತೆ? ತನ್ನ ...ಮ ತಾಯಿ ದುಗ್ಗಮ್ಮನ ಹೆಸರಿಗೆ ಕೋಟ್ಯಾಂತರ ರೂಪಾಯಿ ಬೆಲೆಯ ...ವನ್ನು ಬಿಡಿಗಾಸಿಗೆ ಹರಾಜು ಮಾಡಿದ. ಆನಂತರ ಅದೇ ದುಗ್ಗಮ್ಮನ ...ಲ್ಲಿದ್ದ ನಿವೇಶನವನ್ನು ಆಕೆಯ ಮಗಳು - ಅಂದರೆ ಜಾದವ್‌ನ - ಹೆಸರಿಗೆ ದಾನವಾಗಿ ಪಡೆದ. ಅಲ್ಲಿಗೆ ಜಾದವ್‌ನ ಕಿಸೆಗೆ ಆ ... ಕಡಿಮೆ ಕಾಸಿಗೆ ಸಿಕ್ಕಿತು. ಈಗ ಅದೇ ನಿವೇಶನದಲ್ಲಿ ಜಾದವ್ ... ದೊಡ್ಡ ಶಾಪಿಂಗ್ ಕಾಂಪ್ಲೆಕ್ಸ್ ಅನ್ನು ಕಟ್ಟಿಸಿದ್ದಾರೆ.

...ಮ ಸಾಲದೆಂಬಂತೆ ಮತ್ತೊಂದು ನಿವೇಶನವನ್ನು ಜಾದವ್ ತನ್ನ ...ಮಗನಾದ ವಿಜಯಕುಮಾರ ಎಂಬುವವರಿಗೆ ಮಾರಾಟ ಮಾಡಿಸಿದ. ...ಂದು ನಿವೇಶನವನ್ನು ತನ್ನ ಖಾಸಾ ಸಂಬಂಧಿ ಮತ್ತು ಪ್ರಾಧಿಕಾರದ ...ದ ಅಜಿತ್ ಸಾವಂತನ ಹೆಸರಿಗೂ ಮಾರಿದ.

...ರಿ ಸ್ವತ್ತನ್ನು ಲೂಟಿ ಮಾಡುವುದರಲ್ಲಿ ಬಿಜೆಪಿಯ ಚೆಡ್ಡಿಗಳು ಎತ್ತಿದ ...ಬುದು ಈಗ ಜಗಜ್ಜಾಹೀರಾಗಿದೆ. ಇಂಥ ಭೂ ದಾಹ "ನಾನು ...ಾಯನ ತುಂಡು, ನಮ್ಮನೆಯಲ್ಲೇ ಧರ್ಮ-ನೀತಿ ಜನ್ಮ ತಾಳಿದ್ದು" ... ಬೊಗಳೆ ಬಿಡುವ ತರಕಾರಿ ಮಂತ್ರಿ ರವೀಂದ್ರನಾಥರಲ್ಲೂ ...ಂಡಿದ್ದು ಅಚ್ಚರಿಯ ಸಂಗತಿ ಅಲ್ಲ.

...ದವ್‌ನನ್ನು ಪ್ರಾಧಿಕಾರದ ಅಧ್ಯಕ್ಷ ಗಾದಿಗೆ ತರುವುದನ್ನು ವಿರೋಧಿಸಿದ್ದ ...ನಾಥ್ ಇದೇ ಜಾದವ್‌ನ ನೆರವು ಪಡೆದು ತನ್ನ ಸಂಬಂಧಿ (ಅಳಿಯ) ...ದ ಎಂಬುವವನಿಗೂ ಒಂದು ನಿವೇಶನವನ್ನು ಮಂಜೂರು ಮಾಡಿಸಿದ್ದಾರೆ.

...ಷ್ಟೇ ಅಲ್ಲ, ಜಾದವ್ ಇಲ್ಲಿ ರಾಜಕೀಯವಾಗಿ ಬೆಳೆಯಲು ನೆರವಾಗಿದ್ದ ...ಮ್ಮೆ ಜನತಾದಳ ಇನ್ನೊಮ್ಮೆ ಕಾಂಗ್ರೆಸ್ ಅಂತೆಲ್ಲ ಅಲೆದು ಸುತ್ತಾಗಿ ... ಬಿಜೆಪಿ ಸೇರಿದ ಜಿಪ್ಪಿ ಶಿವಯೋಗಪ್ಪ ಎಂಬುವವರೂ ತನ್ನ ಮಗನಿಗೂ ...ನ ಕೃಪೆಯಿಂದ ಒಂದು ನಿವೇಶನ ಲಪಟಾಯಿಸಿಬಿಟ್ಟಿದ್ದಾರೆ.

...ದವ್‌ನ ಅಕ್ರಮ ವ್ಯವಹಾರವೊಂದು ಈಗ ತನಿಖೆಯಾಗುತ್ತಿದೆ. ಅದು ...ಗೆರೆ ಸರ್ವೆ ನಂಬರ್ 129 ರ ಜಮೀನಿಗೆ ಸಂಬಂಧಪಟ್ಟಿದ್ದು. ... ಅನುಮತಿಯೂ ಇಲ್ಲದೆ, ಕೃಷಿ ಭೂಮಿಯನ್ನು ಪರಿವರ್ತಿಸುವ ...ಗೂ ಹೋಗದೆ, ಎಲ್ಲಾ ನೀತಿ-ನಿಯಮಾವಳಿಗಳನ್ನು ಗಾಳಿಗೆ ತೂರಿ ...ಮಿಯನ್ನು ಒಟ್ಟು 27 ನಿವೇಶನಗಳನ್ನಾಗಿ ವಿಂಗಡಿಸಲಾಗಿದೆ. ಹಾಗೆ ... ಲೇಔಟ್ ಅಭಿವೃದ್ಧಿಪಡಿಸುವ ನೆಪದಲ್ಲಿ ಪ್ರಾಧಿಕಾರದಿಂದ 32 ...ಪಾಯಿ. ಖರ್ಚು ಆಗಿರುವಂತೆ ತೋರಿಸಿ ಬಹಳಷ್ಟು ಹಣವನ್ನು ... ಜೇಬಿಗೆ ಇಳಿಸಿದ್ದಾನೆನ್ನುವ ಆಪಾದನೆ ಸರಕಾರದ ಮಟ್ಟದಲ್ಲಿ ...ದೆ.

[illegible] ಜಾದವ್ ಪ್ರಾಧಿಕಾರದ ಅಧ್ಯಕ್ಷನಾಗಿದ್ದ ಅವಧಿಯಲ್ಲಾದ [illegible] ಮಾಡಿದ ಸ್ವಜನಪಕ್ಷಪಾತಗಳನ್ನು ಸರಿಯಾದ [illegible] ಈತ ದಾವಣಗೆರೆ ಜಿಲ್ಲಾ ಜೈಲಿನಲ್ಲಿ ಮುದ್ದೆ [illegible] ಗ್ಯಾರಂಟಿ ಎಂಬುದು ಸುಳ್ಳಲ್ಲ!

- ಟಿ.ಎನ್. ಷಣ್ಮುಖ

ಈಗ ಹುಬ್ಬಳ್ಳಿಯ ಖ್ಯಾತ ಅಂಜುಮನ್ ಸಂಸ್ಥೆಗೆ ಚುನಾವಣೆ ನಡೆಯಲಿದೆ. 2008ರಲ್ಲಿ 8,439 ಆಜೀವ ಸದಸ್ಯರನ್ನು ಹೊಂದಿದ್ದ ಅಂಜುಮನ್ ಸಂಸ್ಥೆ ಈಗ 7,901 ಆಜೀವ ಸದಸ್ಯರನ್ನು ಹೊಂದಿದೆ. ಅಂದರೆ ಕಳೆದ ನಾಲ್ಕು ವರ್ಷಗಳಲ್ಲಿ 1,062 ಸದಸ್ಯರು ಹೊಸದಾಗಿ ಸೇರ್ಪಡೆಗೊಂಡಿದ್ದಾರೆ. ಈ ಹೊಸ ಸದಸ್ಯರನ್ನು ಸೇರ್ಪಡೆ ಮಾಡಿಕೊಳ್ಳುವುದಕ್ಕೆ ಯೂಸಫ್ ಸವಣೂರ ಹಾಗೂ ಹಿಂಡಸಗೇರಿ ಬೆವರು ಸುರಿಸಿದ್ದಾರೆ. ಇವರಿಬ್ಬರು ಸಂಸ್ಥೆಯ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡೇ ತಮ್ಮ ಸ್ವಂತ ಖರ್ಚಿನಲ್ಲಿ ಹೊಸ ಸದಸ್ಯರನ್ನು ಸೇರಿಸಿಕೊಂಡು ಚುನಾವಣಾ ಅಖಾಡಕ್ಕೆ ಇಳಿದಿದ್ದಾರೆ. ಈಗ ಅಧ್ಯಕ್ಷ ಸ್ಪರ್ಧೆಯಲ್ಲಿರುವ ಮೂವರಲ್ಲಿ ಅಂಜುಮನ್ ಸಂಸ್ಥೆಗೆ ನಿಜವಾಗಲೂ ದುಡಿದವರೆಂದರೆ ಹೊನ್ನಳ್ಳಿ ಮಾತ್ರ.

ರಣರಂಗವಾಗಲಿರುವ ಹುಬ್ಬಳ್ಳಿ ಅಂಜುಮನ್ ಚುನಾವಣೆ

ಒಂದು ಶತಮಾನಕ್ಕಿಂತಲೂ ಹೆಚ್ಚು ಇತಿಹಾಸವಿರುವ ಹುಬ್ಬಳ್ಳಿಯ ಅಂಜುಮನ್ ಇಸ್ಲಾಂ ಸಂಸ್ಥೆಯ ಮೇಲೆ ಹಿಡಿತ ಸಾಧಿಸಲು ವಿವಿಧ ಗುಂಪುಗಳು ಪ್ರಯತ್ನಿಸುತ್ತಿವೆ. ಇದೇ ಜುಲೈ 8 ರಂದು ಈ ಸಂಸ್ಥೆಯ ಚುನಾವಣೆ ನಡೆಯಲಿದ್ದು ಹಾಲಿ ಅಧ್ಯಕ್ಷ ಯೂಸಫ್ ಸವಣೂರ, ಮಾಜಿ ಅಧ್ಯಕ್ಷರಾದ ಜಬ್ಬಾರ್ ಖಾನ್ ಹೊನ್ನಳ್ಳಿ ಮತ್ತು ಎ.ಎಂ.ಹಿಂಡಸಗೇರಿಗಳು ತಮ್ಮ ತಮ್ಮ ಗುಂಪು ಕಟ್ಟಿಕೊಂಡು ಆಖಾಡಕ್ಕೆ ಇಳಿದಿರುವುದು ಈ ಚುನಾವಣೆ ರಣರಂಗವಾಗಲಿರುವ ಲಕ್ಷಣಗಳು ಸ್ಪಷ್ಟವಾಗಿಸಿವೆ.

ಈ ಚುನಾವಣೆಯಲ್ಲಿ ಈಗಾಗಲೇ ವಕ್ಫ್ ಆಸ್ತಿ ಮಾರಾಟ ಹಗರಣದಲ್ಲಿ ಸಿಲುಕಿರುವ ಮಾಜಿ ಕಾಂಗ್ರೆಸ್ ಸಚಿವ ಹಿಂಡಸಗೇರಿ ತನ್ನ ಖಾಸ ಸಹೋದರ ನಾಜೀಮ ಹಿಂಡಸಗೇರಿಯನ್ನು ಅಂಜುಮನ್ ಅಧ್ಯಕ್ಷ ಕುರ್ಚಿಗೆ ತಗುಲಿ ಹಾಕಲು ಇಲ್ಲದ ಸಾಹಸಕ್ಕೆ ಮುಂದಾಗಿದ್ದಾರೆ. ಇದನ್ನು ನೋಡಿ ಹುಬ್ಬಳ್ಳಿ ಮುಸ್ಲಿಮರು "ಮೊದಲು ವಕ್ಫ್ ಆಸ್ತಿ ಮಾರಾಟದಿಂದ ಮುಖಕ್ಕೆ ಮೆತ್ತಿರುವ ಕಪ್ಪು ಮಸಿಯನ್ನು ಅಳಿಸಿಕೊಂಡು ನಮ್ಮ ಮುಂದೆ ಬರಲಿ" ಎಂದು ನಗಾಡುತ್ತಿದ್ದಾರೆ.

ಇಷ್ಟೇ ಅಲ್ಲದೆ, ಈ ಹಿಂದೆ ಹಿಂಡಸಗೇರಿಯನ್ನು ಸದಾ ಬೆಂಬಲಿಸುತ್ತಾ ಬಂದಿದ್ದ ಮಾಜಿ ಅಂಜುಮನ್ ಸಹಕಾರ್ಯದರ್ಶಿ ಅನ್ವರ ಮುಧೋಳ, ಶಫಿ ಮುದ್ದೆಬಿಹಾಳ, ಫರೀದಿ ಬೆಂಗಳೂರಿ ಅವರುಗಳೆಲ್ಲ ಹಿಂಡಸಗೇರಿಯ ಕುಟುಂಬ ರಾಜಕಾರಣಕ್ಕೆ ಬೇಸತ್ತು ಈಗ ತಟಸ್ಥರಾಗಿದ್ದಾರೆ. ಹುಬ್ಬಳಿಯ ಮುಸಲ್ಮಾನರಂತೂ "ಇಲ್ಲಿಯವರೆಗೆ ಹಿಂಡಸಗೇರಿ ಅಂಜುಮನ್ ಸಂಸ್ಥೆಯನ್ನು ಆಳಿದ್ದು, ಸಚಿವನಾಗಿ ಅಧಿಕಾರ ಅನುಭವಿಸಿದ್ದು ಸಾಕಾಗಲಿಲ್ಲವೇ? ಈಗ ತನ್ನ ಸಹೋದರ ನಾಜೀಮ ಹಿಂಡಸಗೇರಿಯನ್ನು ತಂದು ಕೂಡ್ರಿಸುತ್ತಿರುವುದು ಎಷ್ಟು ಸರಿ?" ಎಂದು ಪ್ರಶ್ನಿಸುತ್ತಿದ್ದಾರೆ. ಇದನ್ನೇ ಅಂಜುಮನ್ ಸಂಸ್ಥೆಯ ಮಾಜಿ ಅಧ್ಯಕ್ಷ ಹಾಗೂ ಮಾಜಿ ಸಚಿವ ಜಬ್ಬಾರ್ ಖಾನ್ ಹೊನ್ನಳ್ಳಿ ತನ್ನ ಚುನಾವಣಾ ದಾಳವಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆ.



ಹೊನ್ನಳ್ಳಿ



ಹಿಂಡಸಗೇರಿ



ಸವಣೂರ

ಇದೇ ಹೊತ್ತಿಗೆ ಹಾಲಿ ಅಧ್ಯಕ್ಷ ಯೂಸಫ್ ಸವಣೂರ ಮತ್ತೊಂದು ತಂಡದೊಡನೆ ಚುನಾವಣಾ ಕಣದಲ್ಲಿದ್ದಾರೆ. ಈ ಸವಣೂರರ ಮೂರು ವರ್ಷಗಳ ಅಧಿಕಾರದ ಅವಧಿ ಕಳೆದ ಮೇ 24, 2012ರಂದು ಕೊನೆಗೊಂಡಿದ್ದು ಆಗಲೇ ಚುನಾವಣೆ ನಡೆಯಬೇಕಿತ್ತು, ಆದರೆ ಹಿಂಡಸಗೇರಿ ಕುಟುಂಬ ಹಲವಾರು ನೆಪಗಳನ್ನು ತೆಗೆದು ಈ ಚುನಾವಣೆ ಮುಂದೆಹೋಗುವಂತೆ ನೋಡಿಕೊಂಡಿತ್ತು. ಒಮ್ಮೆ ಈ ಚುನಾವಣೆಗೆ ಹಿಂಡಸಗೇರಿಯ ಗುಂಪು ವಕ್ಫ್ ಬೋರ್ಡಿನಿಂದ ತಡೆಯಾಜ್ಞೆ ತಂದಿತ್ತು. ಅದನ್ನು ಪ್ರಶ್ನಿಸಿ ಯೂಸಫ್ ಸವಣೂರ ಧಾರವಾಡದ ಹೈಕೋರ್ಟ್ ಸಂಚಾರಿ ಪೀಠದ ಮುಂದೆ ಅರ್ಜಿ ಸಲ್ಲಿಸಿದ್ದರು. ಪರಿಣಾಮವಾಗಿ ವಕ್ಫ್ ಬೋರ್ಡ್ ನೀಡಿದ್ದ ತಡೆಯಾಜ್ಞೆ ತೆರವುಗೊಂಡಿತ್ತು.

ಚುನಾವಣೆಗೇಕೆ ಇಷ್ಟು ಮಹತ್ವ?

ಹುಬ್ಬಳ್ಳಿಯ ಅಂಜುಮನ್ ಸಂಸ್ಥೆಗೆ ಮೂರು ವರ್ಷಕ್ಕೊಮ್ಮೆ ನಡೆಯುವ ಚುನಾವಣೆ ಭಾರಿ ಮಹತ್ವವನ್ನು ಪಡೆಯುತ್ತಿರುವುದಕ್ಕೆ ಕಾರಣವೂ ಇದೆ. ಅದೇನೆಂದರೆ ಅಂಜುಮನ್ ಸಂಸ್ಥೆಯ ಚುಕ್ಕಾಣಿ ಹಿಡಿದವರು ಹುಬ್ಬಳ್ಳಿ ನಗರದ ಶಾಸಕರಾಗುವುದು ಗ್ಯಾರಂಟಿ ಎಂಬಂತಾಗಿದೆ. ಅದಕ್ಕಾಗಿಯೇ ಹಿಂಡಸಗೇರಿ ಅಂಜುಮನ್ ಸಂಸ್ಥೆಯ ಕುರ್ಚಿಗೆ 1986 ರಿಂದ 1996ರ ತನಕ ಬರೋಬ್ಬರಿ ಹತ್ತು ವರ್ಷಗಳ ಕಾಲ ಗೂಟಾ ಹೊಡೆದುಕೊಂಡು

ಅಂಜುಮನ್ ಸಂಸ್ಥೆ ಬಾಡಿಗೆಗೆ ನೀಡಿರುವ ವಾಣಿಜ್ಯ ಮಳಿಗೆ



ಕುಳಿತು ಬಿಟ್ಟಿದ್ದು. ಆದರೆ ಹಿಂಡಸಗೇರಿಯ ಮೂಲಕವೇ ಕಾಂಗ್ರೆಸ್ ಸೇರಿದ ಜಬ್ಬಾರ್ ಖಾನ್ ಹೊನ್ನಳ್ಳಿ 1996ರಲ್ಲಿ ಅಂಜುಮನ್ ಸಂಸ್ಥೆಯ ಅಧ್ಯಕ್ಷಗಾದಿಯನ್ನು ಹಿಂಡಸಗೇರಿ [illegible] ಕಸಿದುಕೊಂಡಿದ್ದರು. ಆನಂತರ 1999ರಲ್ಲಿ ನಡೆದ ಚುನಾವಣೆಯಲ್ಲಿ [illegible] ಶಾಸಕರಾಗಿಯೂ ಗೆದ್ದರು.

ಈಗ ಮತ್ತೆ ಈ ಸಂಸ್ಥೆಗೆ [illegible]. 2008ರಲ್ಲಿ 8,439 ಆಜೀವ ಸದಸ್ಯರನ್ನು ಹೊಂದಿದ್ದ ಅಂಜುಮನ್ ಸಂಸ್ಥೆ ಈಗ 7,901

ಆಜೀವ ಸದಸ್ಯರನ್ನು ಹೊಂದಿದೆ. ಅಂದರೆ ಕಳೆದ ನಾಲ್ಕು ವರ್ಷಗಳಲ್ಲಿ 1,062 ಸದಸ್ಯರು ಹೊಸದಾಗಿ ಸೇರ್ಪಡೆಗೊಂಡಿದ್ದಾರೆ.

ಈ ಹೊಸ ಸದಸ್ಯರನ್ನು ಸೇರ್ಪಡೆ ಮಾಡಿಕೊಳ್ಳುವುದಕ್ಕೆ ಯೂಸಫ್ ಸವಣೂರ ಹಾಗೂ ಹಿಂಡಸಗೇರಿ ಬೆವರು ಸುರಿಸಿದ್ದಾರೆ. ಇವರಿಬ್ಬರು ಸಂಸ್ಥೆಯ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡೇ ತಮ್ಮ ಸ್ವಂತದ ಖರ್ಚಿನಲ್ಲಿ ಹೊಸ ಸದಸ್ಯರನ್ನು ಸೇರಿಸಿಕೊಂಡು ಚುನಾವಣಾ ಅಖಾಡಕ್ಕೆ ಇಳಿದಿದ್ದಾರೆ.

ಈ ಸಂಸ್ಥೆಯಲ್ಲಿ ಆಜೀವ ಸದಸ್ಯತ್ವ ಹೊಂದಲು 17 ಸಾವಿರ ರೂಪಾಯಿ, ಪೋಷಕ ಸದಸ್ಯತ್ವಕ್ಕೆ ಎರಡು ಸಾವಿರ ರೂಪಾಯಿ ಮತ್ತು ಸಾಮಾನ್ಯ ಸದಸ್ಯತ್ವಕ್ಕೆ ಒಂದು ಸಾವಿರ ರೂಪಾಯಿ ಶುಲ್ಕ ಕಟ್ಟಬೇಕು. ಅಂದರೆ 2008 ರಿಂದ 2012ರವರೆಗೆ ಸೇರ್ಪಡೆಗೊಂಡಿರುವ ಬರೋಬರಿ 7991 ಜನರಿಗೆ ಆಜೀವ ಸದಸ್ಯತ್ವವನ್ನು ಕೊಡಿಸಲು ಹಿಂಡಸಗೇರಿ ಹಾಗೂ ಸವಣೂರ ಒಟ್ಟು ಹರಿಸಿದ್ದು ಸುಮಾರು 90 ಲಕ್ಷ ರೂಪಾಯಿಗಳನ್ನು. ಇದಕ್ಕೆಂದು ಹಿಂಡಸಗೇರಿ ಬ್ಯಾಂಕ್ ಡಿ.ಡಿ. ನೀಡಿದರೆ, ಸವಣೂರ ಎಣಿಸಿದ್ದು ಅಸಲಿ ನೋಟುಗಳನ್ನೇ. ಅಂಜುಮನ್ ಸಂಸ್ಥೆಯ ಬ್ಯಾಂಕ್ ಅಕೌಂಟ್ ಘಂಟಿಕೇರಿಯ ನೆಹರೂ ಕಾಲೇಜಿನಲ್ಲಿರುವ ಸೆಂಟ್ರಲ್ ಬ್ಯಾಂಕ್ ಬ್ರ್ಯಾಂಚ್‌ನಲ್ಲಿ. ಆದರೆ ಅದೇ ಬ್ಯಾಂಕಿನಲ್ಲಿ ಸವಣೂರರ ವೈಯಕ್ತಿಕ ಖಾತೆ ಕೂಡ ಇದೆ. ಆದ್ದರಿಂದ ಜನ "ಸವಣೂರು ಸಂಸ್ಥೆಯ ಹಣವನ್ನು ಯಾವ ಖಾತೆಗೆ ಜಮಾ ಮಾಡಿದನೋ?" ಎಂದು ತಮಾಷೆ ಮಾಡುತ್ತಿದ್ದಾರೆ. ಯಾಕೆಂದರೆ ಸದ್ಯಕ್ಕೆ ಅಂಜುಮನ್ ಸಂಸ್ಥೆಯ ಖಾತೆಯಲ್ಲಿರುವ ಬ್ಯಾಲೆನ್ಸ್ 64 ಲಕ್ಷ ರೂಪಾಯಿಗಳು ಮಾತ್ರ. ಹೊಸದಾಗಿ ಸದಸ್ಯರಾದರ ಹೆಸರಿನಲ್ಲಿ ಕಟ್ಟಿದ 90 ಲಕ್ಷ ರೂಪಾಯಿಗಳಾದರೂ ಬ್ಯಾಂಕ್‌ನಲ್ಲಿರಬೇಕಿತ್ತಲ್ಲವೇ? ಆ ಹಣ ಎಲ್ಲಿಗೆ ಹೋಯಿತು?

ವಿಧಾನಸಭಾ ಚುನಾವಣೆ ತಯಾರಿ

ಇತ್ತೀಚೆಗೆ ವಿಧಾನ ಪರಿಷತ್ ಚುನಾವಣೆಯಲ್ಲಿ ಸೋತು, ವಕ್ಫ್ ಆಸ್ತಿ ಮಾರಾಟ ಹಗರಣದಿಂದ ಗಾಯಗೊಂಡಿರುವ ಹಿಂಡಸಗೇರಿ ತಾವಲ್ಲದಿದ್ದರೂ ತಮ್ಮ ಸಹೋದರ ನಾಜೀಮ ಹಿಂಡಸಗೇರಿಯನ್ನು ಅಂಜುಮನ್ ಸಂಸ್ಥೆಯ ಅಧ್ಯಕ್ಷಗಾದಿಯಲ್ಲಿ ಕೂರಿಸುವ ಮೂಲಕ ತಮ್ಮ ಶಕ್ತಿ ತೋರಿಸಲು ಹೊರಟಿದ್ದಾರೆ. ಈಗಾಗಲೇ ಧಾರವಾಡ ಶಹರ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಕಾಂಗ್ರೆಸ್ ಟಿಕೆಟ್ ಬಯಸಿರುವ ಹೊನ್ನಳ್ಳಿಯನ್ನು ಈ ಚುನಾವಣೆಯಲ್ಲಿ ಸೋಲಿಸಿದರೆ ತನ್ನ ತಮ್ಮ ನಾಜೀಮ ಹಿಂಡಸಗೇರಿಗೇ

▶16

1.50 ಕೋಟಿ ಆದಾಯವಿರುವ ಸಂಸ್ಥೆ

ಹುಬ್ಬಳ್ಳಿ ಅಂಜುಮನ್ ಸಂಸ್ಥೆ ಬರೋಬ್ಬರಿ 23 ವಿದ್ಯಾ ಸಂಸ್ಥೆಗಳನ್ನು ನಡೆಸುತ್ತಿದೆ. ಕಳೆದ ಹತ್ತು ವರ್ಷಗಳಲ್ಲಿ 14 ವಿವಿಧ ಕೋರ್ಸ್‌ಗಳ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ. ಇದಕ್ಕಾಗಿ ಮಾಜಿ ಸಚಿವ ಹೊನ್ನಳ್ಳಿ ತನ್ನ ಮಂತ್ರಿ ಸ್ಥಾನವನ್ನು ಉಪಯೋಗಿಸಿ ಸಂಸ್ಥೆ ವಿಸ್ತರಿಸಿದ್ದು ಸುಳ್ಳೇನಲ್ಲ.

ಹಾಗೆಯೇ ಕೆಲವು ವಿದ್ಯಾಸಂಸ್ಥೆಗಳನ್ನು ಸ್ಥಳಾಂತರಿಸಿ 26 ಲಕ್ಷ ಖರ್ಚು ಮಾಡಿ ಹೊಸ ಆಸ್ಪತ್ರೆಯೊಂದನ್ನು ತೆರೆಯಲಾಗಿದೆ. ಹುಬ್ಬಳ್ಳಿಯ ಇತರೆ ಖಾಸಗಿ ನರ್ಸಿಂಗ್‌ಹೋಮ್‌ಗಳಿಗಿಂತ ಈ ಆಸ್ಪತ್ರೆಯಲ್ಲಿ ಖರ್ಚು ಕಡಿಮೆ. ಇಲ್ಲಿ ಪ್ರತಿ ತಿಂಗಳು ಒಂದು ಲಕ್ಷ ಹಣ ಸಂಗ್ರಹವಾಗುತ್ತಿದೆ.

ಅಂಜುಮನ್ ಸಂಸ್ಥೆ ಕಟ್ಟಿಸಿ ಬಾಡಿಗೆಗೆ ನೀಡಿರುವ ವಾಣಿಜ್ಯ ಮಳಿಗೆಗಳಿಂದ ವಾರ್ಷಿಕ ಸುಮಾರು 50 ಲಕ್ಷ ರೂಪಾಯಿ ಬರುತ್ತಿದೆ. ಮದುವೆ ಸಮಾರಂಭಗಳು ನಡೆಯುವ 'ಶಾದಿ ಮಹಲ್' ಒಂದೇ 50 ಲಕ್ಷ ರೂಪಾಯಿಗಳನ್ನು ತಂದುಕೊಡುತ್ತಿದೆ. ಇನ್ನು ವಿದ್ಯಾಸಂಸ್ಥೆಗಳು ಪಡೆಯುವ ಡೊನೇಶನ್‌ನಿಂದ ಬರುವ ಆದಾಯವೇ ವರ್ಷಕ್ಕೆ 50 ಲಕ್ಷ.

ಅಂದರೆ ಅಂಜುಮನ್ ಸಂಸ್ಥೆ ಬರೋಬ್ಬರಿ 1.50 ಕೋಟಿ ಆದಾಯವಿರುವ ಸಂಸ್ಥೆ ಆಗಿದೆ.

ಈ ಸಂಸ್ಥೆಯ ಅಧ್ಯಕ್ಷಗಾದಿಗಾಗಿ [illegible]

ಶಿಕ್ಷಣ ಕುರಿತು ಚೆನ್ನೈನಲ್ಲೊಂದು ಐತಿಹಾಸಿಕ ಸಮಾವೇಶ

"ಭಾರತದ ಶಿಕ್ಷಣ ವ್ಯವಸ್ಥೆಯಲ್ಲಿನ ಶಿಕ್ಷಣದ ವ್ಯಾಪಾರೀಕರಣವನ್ನು ವಿರೋಧಿಸುವ ಎಲ್ಲರಿಗೂ ಸ್ವಾಗತ. ಶಿಕ್ಷಣದ ಖಾಸಗೀಕರಣವನ್ನು ವಿರೋಧಿಸುವವರಿಗೆ ಮಾತ್ರ ಪ್ರವೇಶ"

ಸ್ವಾಗತ ಕಮಾನಿನ ಮೇಲಿದ್ದ ಈ ಬರಹವೇ ಸಮಾವೇಶದ ಸಂಘಟಕರ ನಿಖರವಾದ ನಿಲುವನ್ನು ಸಾರಿ ಹೇಳುತ್ತಿತ್ತು. ಜೂನ್ 30 ಹಾಗೂ ಜುಲೈ 1, 2012ರಂದು ಚೆನ್ನೈನ ವಳ್ಳುವರ್‌ಕೋಟಂನಲ್ಲಿ ನಡೆದ ವಿಚಾರಮಂಥನ ಅದನ್ನು ಮತ್ತಷ್ಟು ಸ್ಪಷ್ಟಪಡಿಸಿತು.

'ಶಿಕ್ಷಣದ ವ್ಯಾಪಾರವನ್ನು ನಿರ್ಮೂಲನೆ ಮಾಡೋಣ, ನೈಜ ಸಮಾನ ಶಾಲಾ ವ್ಯವಸ್ಥೆಯನ್ನು ಸ್ಥಾಪಿಸೋಣ' ಎಂಬ ಘೋಷವಾಕ್ಯದೊಂದಿಗೆ, 'ಸಮಾನ ಶಾಲಾ ವ್ಯವಸ್ಥೆಗಾಗಿ ತಮಿಳುನಾಡು ರಾಜ್ಯ ಒಕ್ಕೂಟ' ಹಾಗೂ 'ಶಿಕ್ಷಣದ ಹಕ್ಕಿಗಾಗಿ ಅಖಿಲ ಭಾರತ ವೇದಿಕೆ (All India Forum for Right to Education-AIFRTE)' ಜಂಟಿಯಾಗಿ ಈ ಐತಿಹಾಸಿಕ ಸಮಾವೇಶವನ್ನು ಆಯೋಜಿಸಿದ್ದವು. ದೇಶದ ಎಲ್ಲಾ ಭಾಗಗಳಿಂದ ಶಿಕ್ಷಣದ ಪ್ರಜಾತಾಂತ್ರೀಕರಣದ ಪ್ರಯತ್ನದಲ್ಲಿ ಆಸಕ್ತರಾದ ಹಾಗೂ ಸಮಾನ ಶಿಕ್ಷಣದ ಹೋರಾಟದಲ್ಲಿ ತೊಡಗಿರುವ ಸಂಘಟನೆಗಳು, ಒಕ್ಕೂಟಗಳು, ವಿದ್ಯಾರ್ಥಿಗಳು, ಅಧ್ಯಾಪಕರು, ಚಿಂತಕರು, ಬರಹಗಾರರು, ನ್ಯಾಯವಾದಿಗಳು ಮೊದಲಾದ ಸಾವಿರಾರು ಮಂದಿ ಅಲ್ಲಿ ನೆರೆದಿದ್ದರು. ಈ ದೇಶದ ಅತ್ಯುನ್ನತ ಸ್ಥಾನಗಳನ್ನಲಂಕರಿಸಿದ್ದ ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಾಧೀಶರಿಂದ ಮೊದಲ್ಗೊಂಡು, ಸುಮಾರು 15 ಹಾಲಿ/ವಿಶ್ರಾಂತ ವಿಶ್ವವಿದ್ಯಾಲಯಗಳ ಉಪಕುಲಪತಿಗಳು, ಮಾನವ ಹಕ್ಕು ಆಯೋಗಗಳ ಅಧ್ಯಕ್ಷರುಗಳು, ಹೈಕೋರ್ಟ್‌ಗಳ ಹಾಲಿ ನ್ಯಾಯಾಧೀಶರುಗಳು, ದೇಶದ ಪ್ರತಿಷ್ಠಿತ ವಿಶ್ವವಿದ್ಯಾಲಯಗಳ ಪ್ರೊಫೆಸರುಗಳವರೆಗೆ ಅಸಂಖ್ಯಾತ ತಜ್ಞರು ಎರಡೂ ದಿನಗಳ ಗೋಷ್ಠಿಗಳಲ್ಲಿ ಪಾಲ್ಗೊಂಡು, ಈ ಹೋರಾಟಕ್ಕೆ ಪೂರಕವಾಗಿ ಅತ್ಯಂತ ಬದ್ಧತೆ ಹಾಗೂ ಸ್ಪಷ್ಟತೆಯೊಂದಿಗೆ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದ್ದು ಒಂದು ವಿಶಿಷ್ಟವಾದ ಅನುಭವವಾಗಿತ್ತು.

ಇಡೀ ಕಾರ್ಯಕ್ರಮದ ಹಾಗೂ ಸಮಾನ ಶಿಕ್ಷಣಕ್ಕಾಗಿನ ಜನಾಂದೋಲನದ ಭಾರತದ ಪ್ರಮುಖ ವಕ್ತಾರರಲ್ಲೊಬ್ಬರಾದ ಡಾ.ಅನಿಲ್ ಸದ್ಗೋಪಾಲ್ ಮೊದಲ ಗೋಷ್ಠಿಯಲ್ಲಿ ಹೇಳಿದ ಒಂದು ಮಾತು ಯಾವ ರೀತಿಯಿಂದಲೂ ಉತ್ಪ್ರೇಕ್ಷೆಯಾಗಿರಲಿಲ್ಲ. 'ಸ್ವಾತಂತ್ರ್ಯಾನಂತರ ಈ ದೇಶದ ಶಿಕ್ಷಣ ವ್ಯವಸ್ಥೆ ಹೇಗಿರಬೇಕು ಎಂಬುದರ ಬಗ್ಗೆ ಸ್ಪಷ್ಟತೆಯನ್ನು, ಮುನ್ನೋಟವನ್ನು ಹೊಂದಿರುವ ಈ ಪ್ರಮಾಣದ ದೊಡ್ಡ ಸಮಾವೇಶ ಇದೇ ಆಗಿದೆ. ಹಾಗಾಗಿ ಇದು ಎಲ್ಲಾ ಅರ್ಥದಲ್ಲೂ ಐತಿಹಾಸಿಕವಾದುದು.'

ಕಾರ್ಯಕ್ರಮದ ಉದ್ಘಾಟನೆಯನ್ನು ಪ್ರಖ್ಯಾತ ಇತಿಹಾಸ ತಜ್ಞರಾದ ಕೆ.ಎನ್.ಪಣಿಕ್ಕರ್‌ರವರು ಮಾಡಿದರು. ಉದ್ಘಾಟನಾ ಗೋಷ್ಠಿಯು ಭಾರತದಲ್ಲಿ ಸಾರ್ವತ್ರಿಕ ಹಾಗೂ ಸಮಾನ ಶಿಕ್ಷಣ ವ್ಯವಸ್ಥೆಗಾಗಿ ಸ್ವಾತಂತ್ರ್ಯಪೂರ್ವದಿಂದಲೂ ನಡೆಯುತ್ತಾ ಬಂದಿರುವ ಅನೇಕಾನೇಕ ಪ್ರಯತ್ನಗಳನ್ನು ನಮ್ಮೆದುರು ಬಿಚ್ಚಿಟ್ಟಿತು. ಆ ಗೋಷ್ಠಿಯಲ್ಲಿ ದೇಶದ ಪ್ರಗತಿಪರ ಹಾಗೂ ಗೌರವಾನ್ವಿತ ಶಿಕ್ಷಣತಜ್ಞರಾದ ಪ್ರೊ. ಅನಿಲ್ ಸದ್ಗೋಪಾಲ್, ಪ್ರೊ.ಜಿ. ಹರಗೋಪಾಲ್, ಪ್ರೊ. ಮಧುಪ್ರಸಾದ್ ಮೊದಲಾದವರು ಈ ವಿಚಾರದ ಬಗ್ಗೆ ವಿಷದವಾಗಿ ವಿಚಾರಮಂಡನೆ ಮಾಡಿದರು. ಅಧ್ಯಕ್ಷತೆಯನ್ನು ಲಕ್ನೋ ವಿಶ್ವವಿದ್ಯಾಲಯದ ಉಪಕುಲಪತಿಯಾದ ಪ್ರೊ. ರೂಪ್‌ರೇಖ ವರ್ಮಾ ವಹಿಸಿದ್ದರು.

'ಸಂವಿಧಾನದ ಆಶಯಗಳು ಹಾಗೂ ನ್ಯಾಯಾಂಗದ ಧೋರಣೆ'ಯನ್ನು ಕುರಿತ ಗೋಷ್ಠಿಯ ಅಧ್ಯಕ್ಷತೆಯನ್ನು ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಾಧೀಶರಾದ ಶ್ರೀ ಎ.ಕೆ.ಗಂಗೂಲಿಯವರು ವಹಿಸಿದ್ದರು. ಮದ್ರಾಸ್ ಉಚ್ಚ ನ್ಯಾಯಾಲಯದ ನಿವೃತ್ತ ಮುಖ್ಯನ್ಯಾಯಾಧೀಶರಾದ ಶ್ರೀ ಎ.ಪಿ.ಶಾ, ಮದ್ರಾಸ್ ಉಚ್ಚ ನ್ಯಾಯಾಲಯದ ಹಾಲಿ ನ್ಯಾಯಾಧೀಶರಾದ ಶ್ರೀ ಕೆ.ಚಂದ್ರು, ಶ್ರೀ ಎನ್.ಜಿ.ಆರ್ ಪ್ರಸಾದ್ ಮೊದಲಾದವರು ವಿಸ್ತಾರವಾಗಿ ಭಾರತದ ನ್ಯಾಯಾಲಯಗಳು ಸಮಾನತೆ ಹಾಗೂ ಅದಕ್ಕಾಗಿ ಶಿಕ್ಷಣ ನೀತಿನಿರೂಪಣೆಗಳಿಗೆ ಸಂಬಂಧಿಸಿ ತೆಗೆದುಕೊಂಡ ನಿಲುವುಗಳನ್ನು ವಿಮರ್ಶಾತ್ಮಕವಾಗಿ ವಿವರಿಸಿದರು.

ಐತಿಹಾಸಿಕವಾಗಿಯೇ ಭಾರತದ ಮೇಲೆ ಹೇರಲ್ಪಟ್ಟ ಶಿಕ್ಷಣ ವ್ಯವಸ್ಥೆಗಳು ಈ ದೇಶದ ವಿಕೃತ ಜಾತಿ ಶೋಷಣೆಯನ್ನೂ, ಎಲ್ಲ ಬಗೆಯ ವರ್ಗ ಲಿಂಗ ಅಸಮಾನತೆಗಳನ್ನು ಸಮರ್ಥಿಸುವಂತಹವೇ ಆಗಿದ್ದವು. ಭಾರತದ 'ಸುವರ್ಣಯುಗ'ವೆಂದು ಕರೆಸಿಕೊಳ್ಳುವ ವೇದಕಾಲದ 'ಗುರುಕುಲ' ವ್ಯವಸ್ಥೆಯಿಂದ ಮೊದಲ್ಗೊಂಡು, 'ಆಧುನಿಕ ಚಿಂತನೆಗಳ ಹರಿಕಾರ'ರೆಂದು ತಾವೇ ಕರೆದುಕೊಂಡ ಬ್ರಿಟಿಷರ ಮಾಹತುಶಾಹಿ ಶಿಕ್ಷಣಪದ್ಧತಿಯವರೆಗೆ, ಎಲ್ಲವೂ ನಮ್ಮ ದೇಶದ ಮೈಮೇಲಿನ ಬಿರುಕುಗಳನ್ನು ಮತ್ತಷ್ಟು ಆಳಗೊಳಿಸಿದವು. 1835ರಲ್ಲಿ ಒಂದೆಡೆ ಬ್ರಿಟಿಷ್ ಆಡಳಿತಗಾರನೂ ಆಗಿದ್ದು ಮತ್ತೊಂದೆಡೆ ಅವರು ರೂಪಿಸಿದ ಶಿಕ್ಷಣ ವೇದಿಕೆಯ ಮುಖಂಡನೂ ಆಗಿ ದ್ವಿಪಾತ್ರ ವಹಿಸಿದ್ದ ಮೆಕಾಲೆ ತನ್ನ ವರದಿಯನ್ನು ಮುಂದಿಟ್ಟ. ಅದರ ಬುನಾದಿಯೇ ಅತ್ಯಂತ ತಾರತಮ್ಯದ ಪೂರ್ವಾಗ್ರಹಪೀಡಿತ ನಿಲುವುಗಳಿಂದ ಪ್ರೇರಿತವಾಗಿತ್ತು ಹಾಗೂ ಬ್ರಿಟಿಷ್ ಮೇಲರಿಮೆಯನ್ನು ಢಾಳಾಗಿ ಹೊರಚೆಲ್ಲುತ್ತಿತ್ತು. ಕೇವಲ ಮೂರೇಮೂರು ಅಂಶಗಳಲ್ಲಿ ನಾವಿದನ್ನು ಅರಿಯಬಹುದು.

- ಎಲ್ಲಾ ಭಾರತೀಯ ಭಾಷೆಗಳೂ ಯುರೋಪಿಯನ್ ಭಾಷೆಗಳಿಗಿಂತ ಕೀಳುಮಟ್ಟದವು. ಅವು ಯುರೋಪಿಯನ್ ಭಾಷೆಗಳಂತೆ ಆಧುನಿಕ ಜ್ಞಾನವನ್ನು ವ್ಯಕ್ತಪಡಿಸುವ ಸಾಮರ್ಥ್ಯವನ್ನೇ ಹೊಂದಿಲ್ಲ"
- ಬ್ರಿಟಿಷ್ ಆಡಳಿತಕ್ಕೆ ಇಡೀ ಭಾರತವನ್ನು ಶಿಕ್ಷಿತಗೊಳಿಸುವುದು ಅಗತ್ಯವೂ ಇಲ್ಲ, ಸಾಧ್ಯವೂ ಇಲ್ಲ, ಆದ್ದರಿಂದ ಲಭ್ಯ ಸಂಪನ್ಮೂಲಗಳಲ್ಲಿ ಭಾರತದ ಕುಲೀನ ಮನೆತನಗಳ ಯುವಜನತೆಯನ್ನು ಶಿಕ್ಷಿತಗೊಳಿಸಬೇಕು."
- ಈ ಶಿಕ್ಷಣವು ಬಣ್ಣ ಮತ್ತು ರೂಪದಲ್ಲಿ ಭಾರತೀಯರಾದ, ಹೃದಯ ಮತ್ತು ಮೆದುಳಿನಲ್ಲಿ ಬ್ರಿಟಿಷರಾದ ಯುವಕರ ಸೇನೆಯನ್ನು ತಯಾರಿಸಬೇಕು. ಅವರು ತಮ್ಮ ಬ್ರಿಟಿಷ್ ಧಣಿಗಳ ಆದೇಶವನ್ನು ಪಾಲಿಸಲು ಸದಾ ಸಿದ್ಧರಾಗಿರಬೇಕು"

ಈ ಮಾದರಿ ಶಿಕ್ಷಣ ಪದ್ಧತಿಯನ್ನು ಮೊದಮೊದಲಿನ ಸಮಾನ ಶಾಲಾ ವ್ಯವಸ್ಥೆಯ ರೂವಾರಿಗಳಲ್ಲಿ ಒಬ್ಬರಾದ ಖ್ಯಾತ ಸಮಾಜ ಸುಧಾರಕ ಜ್ಯೋತಿಬಾ ಫುಲೆಯವರು ಅತ್ಯಂತ ಕಟುವಾಗಿ ವಿರೋಧಿಸುತ್ತಾರೆ. ಬೌದ್ಧಿಕ ವಿರೋಧ ಮಾತ್ರವಲ್ಲದೆ, ಸ್ವತಃ ಸಾವಿತ್ರಿಬಾಯಿ ಫುಲೆಯವರು 1848ರಲ್ಲಿ ಭಾರತದ ಮೊಟ್ಟಮೊದಲ ಸಮಾನ ಶಾಲೆಯನ್ನು ಸ್ಥಾಪಿಸುತ್ತಾರೆ. ಅದುವರೆಗೆ ಕನಸು ಮಾತ್ರವೇ ಆಗಿದ್ದ ದೇಶದ ಎಲ್ಲಾ ಶ್ರೇಣಿಗಳ ಜಾತಿಹಿನ್ನೆಲೆಗಳ ಎಲ್ಲಾ ಮಕ್ಕಳೂ- ಬಾಲಕರು ಮಾತ್ರವಲ್ಲದೆ ಬಾಲಕಿಯರೂ ಕೂಡಾ ಹಾಗೂ ಅಸ್ಪೃಶ್ಯರನ್ನಾಗಿಸಿ ಊರ ಹೊರಗಿರಿಸಲ್ಪಟ್ಟಿದ್ದ ಅತ್ಯಂತ ಶೋಷಿತ ಸಮುದಾಯಗಳ ಮಕ್ಕಳೂ ಕೂಡಾ- ಈ ಶಾಲೆಗಳಲ್ಲಿ ಸಮಾನವಾಗಿ ಪ್ರವೇಶ ಪಡೆದರು. ಅಷ್ಟೇಕೆ ಮೇಲ್ಜಾತಿಗಳ ಬಾಲವಿಧವೆಯರನ್ನೂ ಕೂಡಾ ದಂಪತಿಗಳು ಶಾಲೆಗಳಿಗೆ ಕರೆತಂದರು. 1882ರಲ್ಲಿ ಹಂಟರ್ ಕಮೀಷನ್ನಿನ ಮುಂದೆ ಜ್ಯೋತಿಬಾ ಫುಲೆಯವರು ಪ್ರಸ್ತುತಪಡಿಸಿದ ಮನವಿ ಪತ್ರದಲ್ಲಿ (ಫುಲೆ ಮೆಮೊರಾಂಡಮ್ ಎಂದೇ ಖ್ಯಾತ) ಬ್ರಿಟಿಷ್ ಮಾಹತುಶಾಹಿ ಶಿಕ್ಷಣ ಪದ್ಧತಿ ಭಾರತದ ಜಾತಿಗ್ರಸ್ತ ಸಮಾಜದಲ್ಲಿ ಆಳಗೊಳಿಸುತ್ತಿರುವ ಅಸಮಾನತೆಯ ಬಗ್ಗೆ ತೀವ್ರವಾದ ಆಕ್ರೋಶ ಹಾಗೂ ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ. "ಬ್ರಿಟಿಷ್ ಸರಕಾರವು ಈ ದೇಶದ ಶ್ರಮಜೀವಿಗಳ, ಶೋಷಿತರ ಬಿಡುವಿಲ್ಲದ ದುಡಿಮೆಯ ಫಲವಾಗಿ ಸೃಷ್ಟಿಯಾಗುತ್ತಿರುವ ಅಗಾಧ ಸಂಪತ್ತನ್ನು ಸಂಗ್ರಹಿಸಿ, ಅವರ ಮಕ್ಕಳನ್ನು ಶಿಕ್ಷಿತರನ್ನಾಗಿಸುವ ಬದಲಿಗೆ, ಕೇವಲ ಮೇಲ್ಜಾತಿ-ಮೇಲ್ವರ್ಗಗಳ ಕುಲೀನ ಮನೆತನಗಳ ಮಕ್ಕಳಿಗಷ್ಟೇ ಶಿಕ್ಷಣ ವ್ಯವಸ್ಥೆಯನ್ನು ತೆರೆದಿಟ್ಟಿರುವುದು ಆಕ್ಷೇಪಣೀಯ. ತಮ್ಮ ದೇಶದಲ್ಲಿ ಇಂತಹ ಅಸಮಾನತೆಯ ವಿರುದ್ಧ ಕ್ರಾಂತಿಯನ್ನೇ ನಡೆಸಿದ ಜನರು, ಭಾರತದಲ್ಲಿ ಮಾತ್ರ ಅದಕ್ಕೆ ತದ್ವಿರುದ್ಧವಾಗಿ ನಡೆದುಕೊಳ್ಳುತ್ತಿರುವುದು ವಿರೋಧಾಭಾಸವಲ್ಲವೇ?" ಎಂದು ಪ್ರಶ್ನಿಸುತ್ತಾರೆ. ವಿಪರ್ಯಾಸವೆಂದರೆ, ಬ್ರಿಟಿಷರು ತೊಲಗಿದ ನಂತರವೂ ಹೆಚ್ಚೂಕಡಿಮೆ ಅದೇ ಪರಿಸ್ಥಿತಿ ಮುಂದುವರೆದಿದೆ!

ಅದರಲ್ಲೂ ಜಾಗತೀಕರಣದ ಕಾಲಘಟ್ಟದಲ್ಲಂತೂ ಇದು ಹಸಿಯಾಗಿ ನಮ್ಮ ಕಣ್ಣೆದುರಿಗಿದೆ. ಸ್ವಾತಂತ್ರ್ಯಾನಂತರ 90ರ ದಶಕದವರೆಗೆ ಆಶಯಾತ್ಮಕವಾಗಿಯಾದರೂ, ಕೆಲವೊಮ್ಮೆ ಪ್ರಾಯೋಗಿಕವಾಗಿಯೂ ದೇಶದ ಎಲ್ಲಾ ಮಕ್ಕಳಿಗೂ ಶಿಕ್ಷಣದ ವಿಚಾರ ಚರ್ಚೆಯಾಗಿದೆ; ಕೆಲವು ಪ್ರಯತ್ನಗಳೂ ಆಗಿವೆ. ಡಾ.ಬಿ.ಆರ್. ಅಂಬೇಡ್ಕರ್‌ರವರು ಸಂವಿಧಾನದ ಕುರಿತ ಚರ್ಚೆಗಳಲ್ಲಿ ಶಿಕ್ಷಣದ ಹಕ್ಕನ್ನು ಮೂಲಭೂತ ಹಕ್ಕುಗಳಲ್ಲಿ ಒಂದನ್ನಾಗಿ ಮಾಡಲು ಅಗಾಧ ಪ್ರಯತ್ನ ನಡೆಸಿ[...] ನಾವು ಕಾಣಬಹುದು. ಆದರೆ ಅದು ಒಂಟಿದನಿ[...] ಉಳಿಯಬೇಕಾಯಿತು. ಅದರಿಂದಾಗಿಯೇ ಅಂ[...] ಯತ್ನವಾಗಿ ಅಂಬೇಡ್ಕರ್‌ರವರು ರಾಜ್ಯನಿರ್ದೇಶಕ ತತ್ವ[...] ಭಾಗವಾಗಿ ಅದನ್ನು ಸೇರ್ಪಡೆಗೊಳಿಸಿದರು. ರಾಜ್ಯ ನಿರ್ದೇ[...] ತತ್ವಗಳ ಕಲಂ 41, ದೇಶದ ಎಲ್ಲಾ ಮಕ್ಕಳಿಗೂ ಉ[...] ಹಾಗೂ ಕಡ್ಡಾಯ ಶಿಕ್ಷಣವನ್ನು ಖಾತ್ರಿಗೊಳಿಸು[...] ಹಾಗೆಯೇ ಕಲಂ 45, 'ಮುಂದಿನ ಹತ್ತು ವರ್ಷದೊಳ[...] 14 ವರ್ಷದೊಳಗಿನ ಎಲ್ಲ ಮಕ್ಕಳಿಗೂ ಕಡ್ಡಾಯ ಉ[...] ಶಿಕ್ಷಣ' ಎಂದು ಹೇಳುತ್ತದೆ. ಬೇರೆ ಯಾವ[...] ಕಲಮುಗಳಿಗೂ ಇಲ್ಲದ ಈ ಸಮಯದ ಮಿತಿ[...] ಶಿಕ್ಷಣಕ್ಕೆ ಸಂವಿಧಾನ ಕರ್ತೃಗಳು ನೀಡಿದ್ದ ಪ್ರಾಮು[...] ಹಾಗೂ ಅದರ ಅಗತ್ಯವನ್ನು ಸ್ಪಷ್ಟಪಡಿಸುತ್ತದೆ. ಆ[...] ಇಲ್ಲಿಯವರೆಗೂ ಭಾರತದ ಸರ್ಕಾರಗಳು ಅ[...] ನಿರ್ಲಕ್ಷಿಸುತ್ತಲೇ ಬಂದಿವೆ.

90ರ ನಂತರವಂತೂ ಜಾಗತೀಕರಣದ ಪರಿಣಾಮ[...] ಸರ್ಕಾರ ನೇರವಾಗಿಯೇ ಖಾಸಗೀ ಬಂಡವಾಳಿಗರ ಪರ[...] ನೀತಿಗಳನ್ನು ಜಾರಿಮಾಡುತ್ತಿವೆ. 1992ರಲ್ಲಿ ನ[...] ಉನ್ನಿಕೃಷ್ಣನ್ ವರ್ಸಸ್ ಆಂಧ್ರಪ್ರದೇಶ ಸರ್ಕಾರ ಪ್ರಕರ[...] ತೀರ್ಪನ್ನೇ ಗಮನಿಸಿದರೆ, ಮೊಟ್ಟ ಮೊದಲ ಬ[...] ನ್ಯಾಯಾಂಗದ ಮೂಲಕ ಸರ್ಕಾರವೇ ಶಿಕ್ಷಣದಲ್ಲಿ '[...] ನಷ್ಟ' ದ ಲೆಕ್ಕಾಚಾರಕ್ಕೆ ಅವಕಾಶ ನೀಡಿತು. ಈ ತೀರ್ಪಿ[...] ಉನ್ನತ ಶಿಕ್ಷಣದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು [...] ಸೀಟುಗಳನ್ನೂ ಸರ್ಕಾರಕ್ಕೇ ಬಿಡುವುದು 'ಪ್ರಾಯೋ[...] ಮತ್ತು ಲಾಭದಾಯಕವಲ್ಲ'ವಾದ್ದರಿಂದ 50[...] ಸೀಟುಗಳನ್ನು ಸರ್ಕಾರ ಮತ್ತು ಖಾಸಗಿ ಸಂಸ್ಥೆ[...] ಹಂಚಿಕೊಳ್ಳಬೇಕು. ಇದರ ಪರಿಣಾಮವಾಗಿ ಉ[...] ಮತ್ತು ವೃತ್ತಿಪರ ಕೋರ್ಸ್‌ಗಳ ಸೀಟು ಹಂಚಿಕೆ[...] ಉಂಟಾಗಿರುವ ಗೊಂದಲ ಮತ್ತು ಖಾಸಗಿ ಸಂಸ್ಥೆ[...] ನಡೆಸುತ್ತಿರುವ ಲೂಟಿ ಇಂದಿನವರೆ[...] ಮುಂದುವರೆದಿದೆ. 2002ರಲ್ಲಿ ಶಿಕ್ಷ[...] ವ್ಯಾಪಾರೀಕರಣದ ದಿಕ್ಕಿನಲ್ಲಿ ಸರ್ಕಾರ ಮು[...] ಮುಂದೆ ಹೋದದ್ದಕ್ಕೆ ಸ್ಪಷ್ಟ ಸೂ[...] ಮಣಿಪಾಲದ ಟಿಎಂಎ ಪೈ / ಕರ್ನಾ[...] ಸರ್ಕಾರ ಪ್ರಕರಣದಲ್ಲಿ ನಮಗೆ ದೊರೆಯು[...] ಶಿಕ್ಷಣವನ್ನು ಸಂಪೂರ್ಣವಾಗಿ ಮಾರು[...] ದಂಧೆಯನ್ನಾಗಿಸಿರುವವರಲ್ಲಿ ಟಿಎಂಎ ಪೈ ಶಿ[...] ಸಂಸ್ಥೆಗಳು ಮುಂಚೂಣಿಯಲ್ಲಿವೆ. ಅಂತಹ ಖಾ[...] ಉದ್ದಿಮೆದಾರರು ಶಿಕ್ಷಣದ ವ್ಯಾಖ್ಯಾನವನ್ನೇ ಬದ[...] ಅದನ್ನು 'ಉದ್ಯೋಗ'ವೆಂದು ಪರಿಗಣಿಸಿ ಅದ[...] ಲಾಭದಾಯಕವಾಗಿಸಲು ಅವಕಾಶ ನೀಡಬೇಕೆ[...] ವಾದಿಸಿದರು. ಕೋರ್ಟ್ ಅದಕ್ಕೆ ಅವಕಾಶ ಮಾಡಿಕೊಟ್[...] ಮಾತ್ರವಲ್ಲದೆ, 'ವಿಶೇಷ ಆರ್ಥಿಕ ವಲ[...] (ಎಸ್‌ಇಜೆಡ್)ಗಳಂತೆ ಉದ್ಯೋಗಿಗಳ ಮೇ[...] ವಿದ್ಯಾರ್ಥಿಗಳ ಮೇಲೂ ಸಂಪೂರ್ಣ ಒಡೆತನವನ್ನು ಖಾ[...] ಆಡಳಿತಕ್ಕೆ ಬಿಟ್ಟುಕೊಟ್ಟಿತು. ಭಾರತದ ಸಂವಿಧಾ[...] ಆಶಯಕ್ಕೇ ವಿರುದ್ಧವಾಗಿ ಮೊದಲ ಬಾರಿಗೆ ಖಾ[...] ಒಡೆತನದ ವೃತ್ತಿಪರ ಶಿಕ್ಷಣ ಸಂಸ್ಥೆಗಳು ಮೊದಲೇ ಘೋ[...] ಕೆಲವು ಸೀಟುಗಳನ್ನು ಎಷ್ಟು ಬೇಕಾದರೂ ಶುಲ್ಕ ವಸೂ[...] ಮಾಡಬಹುದೆಂಬ ಪ್ರತಿಗಾಮಿ ಧೋರಣೆ ಚಾಲ್ತಿಗೆ ಬ[...] ಇವೆಲ್ಲವೂ ತಮಗೆ ಬೇಕಾದಂತಹ ಶಿಕ್ಷಣವನ್ನು ಪಡೆಯ[...] ಅವಕಾಶವನ್ನು ದಕ್ಕಿಸಿಕೊಳ್ಳುವುದರಲ್ಲಿಯೇ ಉಳ್ಳವರಿ[...] ಇಲ್ಲದವರಿಗೂ ನಡುವಿರುವ ಅಂತರವನ್ನು ಅಗಾಧ[...] ಹೆಚ್ಚಿಸಿದವು.

ಇಂದು ಭಾರತದ ಶಿಕ್ಷಣ ವ್ಯವಸ್ಥೆ ಒಂದು ಬಿಕ್ಕ[...] ಎದುರಿಸುತ್ತಿದೆ. ದೇಶವನ್ನು ಆಳುತ್ತಿರುವವರು ಸಾಮ್ರಾಜ್ಯ[...] ಹಿತಾಸಕ್ತಿಗಳಿಗನುಗುಣವಾಗಿ ಎಲ್ಲಾ ಕ್ಷೇತ್ರಗಳ[...]





ನಮಗೇಕೆ ಸಾಧ್ಯವಿಲ್ಲ?

ಸಮಾವೇಶದ ಅತಿಮುಖ್ಯ ಹಾಗೂ ವಿಶಿಷ್ಟ ಗೋಷ್ಠಿಗಳಲ್ಲಿ 'ಶಿಕ್ಷಣದ ವ್ಯಾಪಾರೀಕರಣವನ್ನು ತಡೆಗಟ್ಟ[...] ಹಾಗೂ ಸಮಾನ ಶಾಲಾನೀತಿಯನ್ನು ಸ್ಥಾಪಿಸುವ ಹೋರಾಟದಲ್ಲಿ ಅಂತರರಾಷ್ಟ್ರೀಯ ಅನುಭವಗಳು' ಕ[...] ಒಂದು. ಈ ಗೋಷ್ಠಿಯಲ್ಲಿ ಕ್ಯೂಬಾ ಮತ್ತು ಜರ್ಮನಿಗಳ ಒಬ್ಬೊಬ್ಬರು ಪ್ರತಿನಿಧಿಗಳು ಮಾತಾಡಿದರು. ಅ[...] ಜೊತೆಗೆ ಆಸ್ಟ್ರೇಲಿಯಾದ ಒಬ್ಬ ಸಂಶೋಧಕಿಯು ಬ್ರೆಜಿಲ್ ಮತ್ತು ಅಮೆರಿಕಾ ದೇಶಗಳ ಶಿಕ್ಷಣ ವ್ಯವಸ್ಥೆಯ ಕ[...] ಹೋರಾಟಗಳ ಕುರಿತು ವಿಚಾರ ಮಂಡಿಸಿದರು. ಎರಡು ಅಂಶಗಳು ಇವುಗಳಲ್ಲಿ ಎಲ್ಲರ ಗಮನ ಸೆಳೆ[...] ಕ್ಯೂಬಾದ ಎಡ್ವರ್ಡೋ ಕ್ವಿಂಟಾನಾ 'ನಮ್ಮ ತಂದೆ ಒಬ್ಬ ಅನಕ್ಷರಸ್ಥ ಹಳ್ಳಿಗ. ಆದರೆ ನಾನು ಇಂದು ನಿಮ್ಮ ಮು[...] ಮಾತಾಡಲು ಸಾಧ್ಯವಾಗಿದ್ದು ಹೇಗೆ? ಇದಕ್ಕೆ ಮತ್ತೇನೂ ಕಾರಣವಿಲ್ಲ, ಕ್ಯೂಬಾದ ಕ್ರಾಂತಿಯು ನಮ್ಮಲ್ಲಿ ತ[...] ಸಮಾನ ಶಿಕ್ಷಣ ನೀತಿಯ ಕಾರಣದಿಂದ ನನ್ನಂತಹವರು ಯಾರಿಗೂ ಕಡಿಮೆಯಿಲ್ಲದಂತೆ ಶಿಕ್ಷಣವನ್ನು ಪಡೆದುಕೊ[...] ಸಾಧ್ಯವಾಯಿತು' ಎಂದು ಮಾತು ಶುರು ಮಾಡಿದವರು ನಮ್ಮ ಮುಂದೆ ಬಿಚ್ಚಿಟ್ಟ ಕ್ಯೂಬಾ ದೇಶದ ಶಿಕ್ಷಣ ಹಾ[...] ಆರೋಗ್ಯ ವ್ಯವಸ್ಥೆಯ ಚಿತ್ರಣವು ಎಲ್ಲರನ್ನು ನಿಬ್ಬೆರಗಾಗಿಸಿತು. ಅದೇರೀತಿ ಡಾ.ನಿಷಾ ತಪ್ಲಿಯಾಲ್ ಬ್ರೆಜಿ[...] ಭೂರಹಿತ ಕಾರ್ಮಿಕರ ಸಂಘಟನೆ ಎಂಎಸ್‌ಟಿಯ ಮೂರು ಮುಖ್ಯ ಬೇಡಿಕೆಗಳಲ್ಲಿ (ಭೂಮಿ, ಶಿಕ್ಷಣ ವ[...] ಅಭಿವೃದ್ಧಿ) ಶಿಕ್ಷಣವೂ ಒಂದು ಎಂದು ಹೇಳಿ, ಜನಪರ ಚಳವಳಿಗಳು ತೆಗೆದುಕೊಳ್ಳಬೇಕಾದ ಹಲವು ಪಾಠಗ[...] ಮುಂದಿಟ್ಟರು.

ಜಗತ್ತಿನ ಬಹುತೇಕ ಎಲ್ಲಾ ಮುಂದುವರೆದ ದೇಶಗಳಲ್ಲೂ ಇರುವುದು ಸಮಾನ ಶಾಲಾ ವ್ಯವಸ್ಥೆಯೇ ಆ[...] ಕ್ಯೂಬಾದಂತಹ ಸದಾ ಕಾಲ ಆರ್ಥಿಕ ದಿಗ್ಬಂಧನಕ್ಕೆ ಗುರಿಯಾದ ಪುಟ್ಟ ದೇಶವೂ ಅದನ್ನು ಸಾಧಿಸಬಹುದಾ[...] ನಮಗೇಕೆ ಸಾಧ್ಯವಿಲ್ಲ ಎಂಬುದು ಎಲ್ಲರನ್ನೂ ಕಾಡಿದ ಪ್ರಶ್ನೆ.

ಚೆನ್ನೈ ಘೋಷಣೆಗೆ ನೀವೂ ಅಭಿಪ್ರಾಯ ಕಳಿಸಿ

ಸಮಾವೇಶದಲ್ಲಿ 'ಚೆನ್ನೈ ಘೋಷಣೆ'ಯನ್ನು ಮಂಡಿಸಲಾಯಿತು. ಆದರೆ ಪ್ರತಿನಿಧಿಗಳಿಗೆ ಎಲ್ಲರಿಗೂ ಸಾಕಷ್ಟು ಮುಂಚಿತವಾಗಿ ಅದರ ಕರಡು ಪ್ರತಿಯನ್ನು ನೀಡಿರಲಿಲ್ಲ. ಆಂತರಿಕ ಪ್ರಜಾತಂತ್ರಕ್ಕೆ ಸಾಕಷ್ಟು ಮಹತ್ವ ಕೊಡುವ ವೇದಿಕೆಯ ಪದಾಧಿಕಾರಿಗಳು ಸಮಾವೇಶದಲ್ಲಿ ಅಂತಿಮಗೊಳಿಸಲಿಲ್ಲ, ಅಲ್ಲಿ ನಡೆದ ಚರ್ಚೆಯ ಆಧಾರದ ಮೇಲೆ ತಿದ್ದುಪಡಿಗಳನ್ನು ಹಾಕಿ ಈಗ www.samacheerkalvi.com <http://www.samacheerkalvi.com> ನಲ್ಲಿ ಕರಡು ಘೋಷಣೆಯನ್ನು ಪ್ರಕಟಿಸಿದ್ದಾರೆ. ಇನ್ನು 20 ದಿನಗಳ ಒಳಗೆ ಸಮಾವೇಶದ ಪ್ರತಿನಿಧಿಗಳು ಮಾತ್ರವಲ್ಲದೇ ಎಲ್ಲಾ ಸಾರ್ವಜನಿಕರೂ ಅದರಲ್ಲಿ ತಮ್ಮ ಅಭಿಪ್ರಾಯಗಳನ್ನು ಮುಂದಿಡಬಹುದು. ಆ ರೀತಿ ಅಂತಿಮವಾಗುವ ಘೋಷಣೆಯನ್ನು ಸಮಾನ ಶಿಕ್ಷಣದ ಆಂದೋಲನದ ಪ್ರಣಾಳಿಕೆಯಾಗಿ ನಾವೆಲ್ಲರೂ ಮುಂದಕ್ಕೊಯ್ಯಬೇಕಿದೆ. ಆಸಕ್ತರು ವೆಬ್‌ಸೈಟನ್ನು ನೋಡಿ, ತಮ್ಮ ಅಭಿಪ್ರಾಯವನ್ನು ಕಳಿಸಬಹುದು.

ಮಾರುಕಟ್ಟೆಗೆ ತೆರೆದಿರಿಸುತ್ತಿದ್ದಾರೆ. ಆದರಿಂದಾಗಿಯೇ, ಎಲ್ಲಾ ರಂಗಗಳಲ್ಲೂ ಕಾಣುತ್ತಿರುವಂತಹ ಸರ್ಕಾರಿ-ಖಾಸಗಿ ಪಾಲುದಾರಿಕೆ (ಪಬ್ಲಿಕ್ ಪ್ರೈವೇಟ್ ಪಾರ್ಟನರ್‌ಶಿಪ್) ಎಂಬ, ಸಾರ್ವಜನಿಕ ಹಣವನ್ನು ಖಾಸಗಿ ...ಕ್ಕೆ ಹರಿಸುವಂತಹ ಯೋಜನೆಗಳು ಶಿಕ್ಷಣರಂಗಕ್ಕೂ ...ಯುತ್ತಿವೆ. ಖಾಸಗಿ ಶಿಕ್ಷಣದ ದೊರೆಗಳ ಲಾಭದ ...ವನ್ನು ಇನ್ನಷ್ಟು ಉಬ್ಬಿಸುತ್ತಿವೆ. ಸಂಸತ್ತಿನ ಅನುಮೋದನೆ ...ಕಾದಿರುವ ಹಾಗೂ ಈ ಬಾರಿಯ ಅಧಿವೇಶನದಲ್ಲಿ ...ಸಲ್ಪಡುವ (ಪ್ರಬಲವಾದ ಸಾರ್ವಜನಿಕ ವಿರೋಧ ...ಪ್ಪರೆ ಬಹುಶಃ ಜಾರಿಯೂ ಆಗಿಬಿಡುವ) 'ವಿದೇಶಿ ...ನ್ಯಾಲಯಗಳ ಮಸೂದೆ'ಯಂತಹ ಆರು ಅಪಾಯ ...ಖಾಸಗೀಪರ ಮಸೂದೆಗಳು ಕಾಯ್ದೆಗಳಾಗಿ ಜಾರಿ ...ರೆ, ದೇಶದ ಉನ್ನತ ಶಿಕ್ಷಣ ಕ್ಷೇತ್ರದ ಖಾಸಗೀಕರಣ ...ವಾದಂತೆ!


...ತುಚರ್ಚಿತ 'ಶಿಕ್ಷಣ ಹಕ್ಕು ಕಾಯ್ದೆ 2009' ಸಹ ಎಲ್ಲಾ ಮುಖವಾಡಗಳ ಹೊರತಾಗಿಯೂ ಖಾಸಗಿ ಸಂಸ್ಥೆಗಳ ಪರವಾಗಿಯೇ ತಂದಿರುವ ಕಾಯ್ದೆ ...ದರ ಸುತ್ತ ಈಗಾಗಲೇ ಸಾಕಷ್ಟು ಚರ್ಚೆ ನಡೆಯುತ್ತಿದೆ. ...ಂತಹ ಪರಿಸ್ಥಿತಿಯಲ್ಲಿ ಶಿಕ್ಷಣದ ಸಾರ್ವತ್ರೀಕರಣ, ...ಶಾಲಾ ವ್ಯವಸ್ಥೆ ಹಾಗೂ ಸಮಾನ ಭಾಷಾ ನೀತಿಗಾಗಿನ ...ರಾಟವು ಕೇವಲ ಶಿಕ್ಷಣಕ್ಕೆ ಮಾತ್ರ ಸಂಬಂಧಿಸಿದ್ದಾಗಿ ...ಲ್ಲ, ಇದು ಇಂದು ನಮ್ಮ ಸಾರ್ವಭೌಮತೆಯ ...ಯೂ ಆಗಿದೆ. ದಶಕಗಳ ಕಾಲ ಅನೇಕಾನೇಕ ಚಳವಳಿ ...ದೇಶಾದ್ಯಂತ ಪರಿಶ್ರಮದಿಂದ ಹುಟ್ಟುಹಾಕಿರುವ ...ವತೆಯ ಮೌಲ್ಯದ ಉಳಿವಿಗಾಗಿಯೂ ಇಂದು ಈ ...ರಾಟಕ್ಕೆ ನಾವು ಇಳಿಯಬೇಕಾಗಿದೆ. ಎಲ್ಲಕ್ಕಿಂತ ಮುಖ್ಯ ...ಸಂವಿಧಾನದ ನಿಜವಾದ ಆಶಯಗಳನ್ನು ಸಮಾಧಿ ...ತ್ತಿರುವ ಆಳುವವರ ಪ್ರತಿಗಾಮಿತನವನ್ನು ಜನಸಾಮಾನ್ಯ ...ಬಯಲು ಮಾಡಬೇಕಿರುವುದು ಪ್ರಜಾತಂತ್ರದಲ್ಲಿ ...ಸಮಾನತೆಯಲ್ಲಿ ನಂಬಿಕೆಯುಳ್ಳ ಪ್ರತಿಯೊಬ್ಬರ ...ಮು ಹೊಣೆಗಾರಿಕೆಯಾಗಿದೆ. ಶಿಕ್ಷಣದ ನಿಜವಾದ ..., ತಾರ್ಕಿಕ ವಿಶ್ಲೇಷಣಾತ್ಮಕ ಗುಣವನ್ನು, ಕ್ರಿಯಾಶೀಲತೆ, ...ಶೀಲತೆಯನ್ನು, ಕಲಾತ್ಮಕತೆಯನ್ನು ಬೆಳೆಸುವುದು-...ನ್ನು ವಿಚಾರವುಳ್ಳ, ಸಮಾಜವನ್ನು ಮುನ್ನಡೆಸಬಲ್ಲ, ...ಕಾಯಿಲೆಗಳನ್ನು ಗುಣಪಡಿಸಬಲ್ಲ ಸ್ವಯಂಪೂರ್ಣ ...ನನ್ನಾಗಿ ರೂಪಿಸುವುದು. ಐನ್‌ಸ್ಟೀನ್ ಹೇಳುವಂತೆ ...ಳು ಶಾಲೆಯಿಂದ ಮ್ಯಾನುಫಾಕ್ಚರ್ಡ್ ಗೂಡ್ಸ್ ಆಗಿ ...ಬರಬಾರದು, ಸಾವಿರಾರು ಪ್ರಶ್ನೆಗಳೊಂದಿಗೆ ...ಬರಬೇಕು.'

...ದೇ ಆಶಯವನ್ನು ಹೊತ್ತು ದಶಕಗಳಿಂದ ನಿರಂತರ ...ದುಡಿಯುತ್ತಿರುವ ಅನೇಕ ಹಿರಿಯರನ್ನೂ ಜೊತೆಗೆ ...ತ ಕ್ರಿಯಾಶೀಲರಾಗಿ ಪ್ರಸ್ತುತ ಹೋರಾಟದಲ್ಲಿ ...ಗಿರುವ ನೂರಾರು ಸಾಮಾಜಿಕ ಕಾರ್ಯಕರ್ತರನ್ನೂ ...ಬ್ಯಾನರ್‌ನಡಿಯಲ್ಲಿ ತಂದಿರುವುದು ಈ ಸಮಾವೇಶದ ...ಖ ಸಾಧನೆಗಳಲ್ಲೊಂದು. ಅದು ಕರ್ನಾಟಕದಿಂದ ..., ಇಡೀ ಸಮಾವೇಶದಲ್ಲಿ ಅತ್ಯಂತ ಸಕ್ರಿಯವಾಗಿ ...ಡಿದ್ದ ಅನೇಕ ಆಸಕ್ತರು ಹಾಗೂ ವಿವಿಧ ಜಿಲ್ಲೆಗಳ, ...ಟಕ ಜನಶಕ್ತಿ, ಕರ್ನಾಟಕ ವಿದ್ಯಾರ್ಥಿ ಸಂಘಟನೆ, ...ಗ ರಕ್ಷಣಾ ವೇದಿಕೆ, ಡಿಎಡ್-ಬಿಎಡ್ ಪದವೀಧರರ ...ವಿದ್ಯಾರ್ಥಿಗಳ ಒಕ್ಕೂಟ, ಕರ್ನಾಟಕ ಪ್ರಾಥಮಿಕ ಶಿಕ್ಷಕರ ಸಂಘ ಮೊದಲಾದವುಗಳ ಸುಮಾರು ...ರು ಕಾರ್ಯಕರ್ತರು ಮತ್ತು ಪದಾಧಿಕಾರಿಗಳಲ್ಲೂ ...ಸ್ಫೂರ್ತಿಯನ್ನು ಉಂಟುಮಾಡಿದೆ.

• **ಮಲ್ಲಿಗೆ,** ಕರ್ನಾಟಕ ಜನಶಕ್ತಿ

ಎಂ.ಪಿ.ಪ್ರಕಾಶ್ 72

ಸಾವಿಲ್ಲದ ಸಂತನ ನೆನಪು



ಕರ್ನಾಟಕದ ರಾಜಕೀಯ ಪರಂಪರೆಯ ಮಟ್ಟಿಗೆ ಎಂದಿಗೂ ಮರೆಯಲಾಗದ ನಿಸ್ಪೃಹ ರಾಜಕಾರಣಿ ಎಂದರೆ ಅದು ಎಂ.ಪಿ. ಪ್ರಕಾಶ್. ಸಾಮಾಜಿಕ ಜವಾಬ್ದಾರಿಗಳಿಗೆ ಪೂರಕವಾಗಿದ್ದ ಜಾತಿ ಧರ್ಮ ರಾಜಕಾರಣವನ್ನು ಕಟುವಾಗಿ ಖಂಡಿಸುತ್ತಿದ್ದ, ರಾಜಕಾರಣವನ್ನು ಸಂತನಂತೆ ಧ್ಯಾನಿಸಿದ್ದ ಎಂ.ಪಿ. ಪ್ರಕಾಶ್‌ರಿಗೆ ಇದೇ ಜುಲೈ 11, 2012 ರಂದು 72 ವರ್ಷದ ಹುಟ್ಟುಹಬ್ಬದ ಸಂಭ್ರಮ. ಆದರೆ ಅವರು ಇಂದು ನಮ್ಮೊಂದಿಗಿಲ್ಲ ಎಂಬ ಯಾವ ಅನುಮಾನಗಳೂ ಇರದಂತೆ ಪ್ರಕಾಶ್‌ರ ಮಗ ಎಂ.ಪಿ. ರವೀಂದ್ರ ತಮ್ಮ ತಂದೆಯ ಆಸಕ್ತಿಗಳನ್ನೆಲ್ಲ ಒಟ್ಟುಗೂಡಿಸಿ ಹರಪನಹಳ್ಳಿಯಲ್ಲಿ ಜಾನಪದ ಜಾತ್ರೆಯನ್ನು ಆಯೋಜಿಸಿದ್ದಾರೆ.

ನಿಸ್ಸಂದೇಹವಾಗಿ ಎಂ.ಪಿ. ಪ್ರಕಾಶ್ ಜನರ ಆಸ್ತಿ. ರಾಜಕಾರಣವೆಂದರೆ ಹಣ ಮಾಡುವ ದಂಧೆ ಎಂದು ಕೊಂಡಿರುವ ಅಬ್ಬೇಪಾರಿ ರಾಜಕಾರಣಿಗಳಿಗಿಂತ ಎಂ.ಪಿ. ಪ್ರಕಾಶ್ ಭಿನ್ನವಾಗಿದ್ದರು. ಸಾಮಾಜಿಕ ಬದಲಾವಣೆಗೆ ಚಳವಳಿಗಳಷ್ಟೇ ಪ್ರಮುಖ ಅಸ್ತ್ರವಾಗಿರುವುದು ಅಧಿಕಾರ ರಾಜಕಾರಣ ಎಂಬುದನ್ನು ಎಂ.ಪಿ. ಪ್ರಕಾಶರು ಎಪ್ಪತ್ತರ ದಶಕದಲ್ಲೇ ನಂಬಿದ್ದವರು. ಒಂದು ಸ್ವಾಸ್ಥ್ಯ ಸಮಾಜ ನಿರ್ಮಾಣಕ್ಕೆ ಹೋರಾಟಗಾರರು, ಬುದ್ಧಿಜೀವಿಗಳು, ದಾರ್ಶನಿಕರು ಎಷ್ಟು ಮುಖ್ಯವೋ ರಾಜಕಾರಣಿಯೂ ಕೂಡ ಅಷ್ಟೇ ಮುಖ್ಯ. ಆದರೆ ಆ ರಾಜಕಾರಣಿಗಳಿಗೆ ಸಾಮಾಜಿಕ ಬದ್ಧತೆಗಳು ಇರಬೇಕಾಗುತ್ತದೆ ಎಂಬುದನ್ನು ಪ್ರಕಾಶರು ಹಲವಾರು ಬಾರಿ ಅಭಿವ್ಯಕ್ತಿಸಿದ್ದಾರೆ.

ಗೆದ್ದ ಕೂಡಲೇ ರಾಜಧಾನಿ ಬೆಂಗಳೂರನ್ನು ಅವಲಂಬಿಸುವ, ವಿಧಾನಸೌಧವನ್ನು ಸ್ವರ್ಗವೆಂದೇ ನಂಬುವ ಬಹುತೇಕ ರಾಜಕಾರಣಿಗಳಿಗಿಂತ ಎಂ.ಪಿ. ಪ್ರಕಾಶ್ ಭಿನ್ನವಾಗಿದ್ದರು ಎಂಬುದಕ್ಕೆ ಹೂವಿನಹಡಗಲಿ ಜೀವಂತ ಸಾಕ್ಷಿ: ತಮ್ಮ ರಾಜಕಾರಣದ ಚಟುವಟಿಕೆಗಳ ಮಧ್ಯೆಯೂ ಪ್ರಕಾಶರು ರಂಗಚಟುವಟಿಕೆಗಳ ನಿರಂತರತೆಗಾಗಿ ರಂಗಭಾರತಿ ಸಾಂಸ್ಕೃತಿಕ ಸಂಘಟನೆಗೆ ಜೀವ ತುಂಬಿದವರು. ಕಲೆ, ಸಾಹಿತ್ಯ ಬಂಡಾಯ ಸಾಹಿತ್ಯ ಸಮುದಾಯ, ಇಪ್ಟಾಗಳಂತಹ ಸಾಮಾಜಿಕ ಸಂಘಟನೆಗಳಿಂದ ನೂರಾರು ಕಾರ್ಯಕ್ರಮಗಳನ್ನು ಏರ್ಪಡಿಸಿದವರು. ಹಡಗಲಿಯ ಅಭಿವೃದ್ಧಿ ದೃಷ್ಟಿಕೋನದಿಂದ (ಜಿಲ್ಲಾ ಕೇಂದ್ರಕ್ಕೆ ಸೀಮಿತವಾಗಿದ್ದ) ಪ್ರಮುಖ ಇಲಾಖೆಗಳ ವಿಭಾಗಗಳನ್ನೇ ಹಡಗಲಿಗೆ ತಂದಿದ್ದರ ಕೀರ್ತಿ ಕೂಡ ಪ್ರಕಾಶರಿಗೆ ಸಲ್ಲುತ್ತದೆ. ಪಿ. ಲಂಕೇಶ್, ಪ್ರೊ. ನಂಜುಂಡಸ್ವಾಮಿ, ಬರಗೂರು ರಾಮಚಂದ್ರಪ್ಪ, ಪೂರ್ಣಚಂದ್ರ ತೇಜಸ್ವಿ, ಕಡಿದಾಳು ಶಾಮಣ್ಣ, ಶಾಂತವೇರಿ ಗೋಪಾಲಗೌಡ ರಂಥವರೊಂದಿಗೆ ಪ್ರಕಾಶರು ಅತ್ಯುತ್ತಮ ಒಡನಾಟ ಹೊಂದಿದ್ದವರು. ಸಮಾಜವಾದದ ಬೇರುಗಳನ್ನು ಗಟ್ಟಿಗೊಳಿಸಿದ ಕೆಲವೇ ಕೆಲವು ವ್ಯಕ್ತಿಗಳ ಸಾಲಿನಲ್ಲಿ ಪ್ರಕಾಶರು ಗುರುತಿಸಿಕೊಂಡಿದ್ದನ್ನು ಒತ್ತಿ ಹೇಳಬೇಕಿಲ್ಲ.


ಎಂ.ಪಿ. ರವೀಂದ್ರ

ಶರಣರು, ದಾರ್ಶನಿಕರು, ಸೂಫಿಗಳು ಬಲವಾಗಿ ಸಮರ್ಥಿಸುವ "ಸಂತರು ಸಾಯುವುದಿಲ್ಲ; ಅಮರರಾಗುತ್ತಾರೆ" ಎಂಬ ನಂಬಿಕೆಯಂತೆಯೇ ಕಲೆ, ಸಾಹಿತ್ಯ ಸಾಂಸ್ಕೃತಿಕ, ರಾಜಕೀಯ ವಲಯಗಳನ್ನು ಸಮರ್ಥವಾಗಿ ಪ್ರತಿನಿಧಿಸಿ, ಲೌಕಿಕ ಬದುಕಿನಿಂದ ದೂರವಾಗಿರುವ ಎಂ.ಪಿ. ಪ್ರಕಾಶರನ್ನು ಜನ ಸಂತನಂತೆಯೇ ಕಾಣುತ್ತಿದ್ದಾರೆ. ಪ್ರಕಾಶರ ನಡೆ, ನುಡಿ, ಚಿಂತನೆಗಳನ್ನು ಅವರ ಅನುಪಸ್ಥಿತಿಯಲ್ಲಿ ಅವರ ಪುತ್ರ ಎಂ.ಪಿ. ರವೀಂದ್ರ ಕಾಪಿಡುವಲ್ಲಿ ಯಶಸ್ವಿಯಾಗಿದ್ದಾರೆ. ರಾಜಕಾರಣಿಗಳ ಹುಟ್ಟುಹಬ್ಬವೆಂದರೆ ಕೇಕೆ, ಕುಡಿತಗಳ ಸಮಾಗಮ ಎಂಬುದಕ್ಕೆ ವ್ಯತಿರಿಕ್ತವಾಗಿ, ಪ್ರಕಾಶರ ಜನ್ಮದಿನವನ್ನು ಲಂಕೇಶ್ ಬಳಗದ ಹಿರಿಯರಾದ ಬಿ. ಚಂದ್ರೇಗೌಡರಿಂದ ರಚಿತವಾಗಿರುವ 'ಬಯಲುಸೀಮೆಯ ಕಟ್ಟೆಪುರಾಣ'ವೆಂಬ ಪ್ರಸ್ತುತ ಸಾಮಾಜಿಕ, ರಾಜಕೀಯ ಚಿತ್ರಣವನ್ನು ಬಿಂಬಿಸುವ ವಿಮರ್ಶೆಯನ್ನು ನಾಟಕವನ್ನಾಗಿ ಪ್ರದರ್ಶಿಸಲು ಎಂ.ಪಿ. ಪ್ರಕಾಶ್ ಪ್ರತಿಷ್ಠಾನ, ರಂಗಭಾರತಿ, ಎಂ.ಪಿ. ಪ್ರಕಾಶ್ ಅಭಿಮಾನಿ ಬಳಗ, ಕಲಾಭಾರತಿಗಳಂತಹ ಸಾಂಸ್ಕೃತಿಕ ಸಂಘಟನೆಗಳು ಒಟ್ಟಾಗಿ "ಎಂ.ಪಿ. ಪ್ರಕಾಶ್ 72" ಕಾರ್ಯಕ್ರಮವನ್ನು ಆಯೋಜಿಸಿವೆ. ಜಾನಪದ ಜಾತ್ರೆಯ ಹೆಸರಲ್ಲಿ ರಾಜ್ಯದ 150ಕ್ಕೂ ಹೆಚ್ಚಿನ ಜಾನಪದ ಕಲಾ ತಂಡಗಳಿಂದ ಹರಪನಹಳ್ಳಿಯ ಬೀದಿಬೀದಿಗಳಲ್ಲಿ ಕಲಾಪ್ರದರ್ಶನಗಳೂ ನಡೆಯಲಿವೆ. ಎರಡು ದಿನಗಳ ಕಾಲ (ಜುಲೈ 11 ಮತ್ತು 12) ಜರುಗುವ ಈ ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ, ಪ್ರಸ್ತುತ ವಿರೋಧ ಪಕ್ಷದ ನಾಯಕರಾಗಿರುವ ಸಿದ್ಧರಾಮಯ್ಯ, ಜಾನಪದ ಅಕಾಡೆಮಿಯ ಬಾನಂದೂರು ಕೆಂಪಯ್ಯ, ಜಾನಪದ ವಿದ್ವಾಂಸರಾಗಿರುವ ಪ್ರೊ. ಹಿ.ಚಿ. ಬೋರಲಿಂಗಯ್ಯ, ಡಾ. ಬಸವರಾಜ ಮಲಶೆಟ್ಟಿ, ಜಾನಪದ ವಿವಿಯ ಕುಲಪತಿಗಳಾದ ಡಾ. ಅಂಬಳಿಕೆ ಹಿರಿಯಣ್ಣ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್‌ನ ಗೊ.ರು. ಚನ್ನಬಸಪ್ಪ, ರಂಗಕರ್ಮಿ ಕೆ.ವಿ. ನಾಗರಾಜಮೂರ್ತಿಗಳಂತಹ ರಾಜಕೀಯ, ಕಲೆ, ಸಾಹಿತ್ಯ ಸಂಗೀತ ವಲಯಗಳನ್ನು ಬಲ್ಲ ಹಲವಾರು ವ್ಯಕ್ತಿಗಳು ಪಾಲ್ಗೊಳ್ಳಲಿದ್ದಾರೆ.

ಇಷ್ಟಲ್ಲದೇ ಕ್ಯಾನ್ಸರ್‌ಪೀಡಿತ ರೋಗಿಗಳಿಗೆ, ಹೃದ್ರೋಗ, ಕಣ್ಣಿನ ತೊಂದರೆ, ಡಯಾಬಿಟಿಸ್ ಹೊಂದಿರುವ ಸಾವಿರಾರು ಜನರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರಗಳನ್ನು ಕೂಡ ಇದೇ ಸಂದರ್ಭದಲ್ಲಿ ಆಯೋಜಿಸಲಾಗಿದೆ.

ಇಷ್ಟೆಲ್ಲದರ ನಡುವೆ ಹರಪನಹಳ್ಳಿ ಒಳಗೊಂಡು ಇಡೀ ಬಳ್ಳಾರಿ ಜಿಲ್ಲೆ ಎಂ.ಪಿ. ಪ್ರಕಾಶರು ಇಲ್ಲದ ಹೊತ್ತಿನಲ್ಲಿ ತುಂಬಾ ಹದಗೆಟ್ಟಿದೆ. ಐದು ಬಾರಿ ಬಳ್ಳಾರಿ ಜಿಲ್ಲೆಯ ಉಸ್ತುವಾರಿ ಸಚಿವ ಸ್ಥಾನವನ್ನು ಹೊಂದಿದ್ದ ಪ್ರಕಾಶರಿಗೂ ಕೇವಲ ಒಂದು ಅಪೂರ್ಣ ಅವಧಿಯ ಮಂತ್ರಿಗಳಾಗಿದ್ದ ಗಾಲಿ ಜನಾರ್ದನ ರೆಡ್ಡಿ, ಶ್ರೀರಾಮುಲು, ಕರುಣಾಕರ ರೆಡ್ಡಿಗಳಂತಹ ಕ್ಷುದ್ರ ರಾಜಕಾರಣಿಗಳಿಗೂ ಅಜಗಜಾಂತರ ವ್ಯತ್ಯಾಸಗಳಿವೆ ಎಂಬುದನ್ನು ಜನತೆ ಇನ್ನಾದರೂ ಅರ್ಥ ಮಾಡಿಕೊಳ್ಳುವ ಅನಿವಾರ್ಯತೆಗಳಿವೆ. ನಾಡು ಕಟ್ಟುವ ಶಿಲ್ಪಿಯಂತಹ ವ್ಯಕ್ತಿತ್ವ ಹೊಂದಿದ್ದ ಎಂ.ಪಿ. ಪ್ರಕಾಶರ ಕುಟುಂಬದ ಮುಂದೆ ನಾಡನ್ನೇ ಲೂಟಿ ಹೊಡೆದು ಜೈಲು ಪಾಲಾಗುತ್ತಿರುವ ರೆಡ್ಡಿಗಳು ತೃಣಕ್ಕೆ ಸಮಾನ ಎನ್ನುವಂತೆ ಹರಪನಹಳ್ಳಿಯ ಮತದಾರರು ನಿರ್ಧರಿಸಬೇಕಿದೆ. ಬಳ್ಳಾರಿಗೆ ಪ್ರಕಾಶರಿಂದ ದೊರೆತಿದ್ದ ಸಮ್ಮಾನ, ಬಿರುದುಗಳನ್ನು ರೆಡ್ಡಿಗಳು ಕೇವಲ ಮೂರ್‍ನಾಲ್ಕು ವರ್ಷಗಳಲ್ಲಿ ಹೊಸಕಿ ಹಾಕಿ 'ರಿಪಬ್ಲಿಕ್ ಆಫ್ ಬಳ್ಳಾರಿ' ಎಂಬಂತೆ ಪರಿವರ್ತಿಸಿದ್ದಾರೆ ಎಂಬುದು ಇಲ್ಲಿ ಗಮನಾರ್ಹ. ಪ್ರಕಾಶರು ಯೋಚಿಸುತ್ತಿದ್ದ ಜನಪರ ಯೋಜನೆಗಳು, ಚಿಂತಿಸುತ್ತಿದ್ದ ಸಾಮಾಜಿಕ ಹೊಣೆಗಾರಿಕೆಯನ್ನು, ಪ್ರದರ್ಶಿಸುತ್ತಿದ್ದ ನೇರವಂತಿಕೆಗಳು ಮರುಕಳಿಸಬೇಕಾದರೆ ಹರಪನಹಳ್ಳಿಯ ಜನತೆ ಈಗಿನಿಂದಲೇ ಒಳಗಣ್ಣಿನಿಂದ ನೋಡುವುದನ್ನು, ಗ್ರಹಿಸುವುದನ್ನು ಕಲಿಯಬೇಕಾಗಿದೆ.

ಒಟ್ಟಾರೆಯಾಗಿ "ಎಂ.ಪಿ. ಪ್ರಕಾಶ್ 72" ಕಾರ್ಯಕ್ರಮ ಹರಪನಹಳ್ಳಿಯಾದಿಯಾಗಿ ಸಂಪೂರ್ಣ ಬಳ್ಳಾರಿ ಜಿಲ್ಲೆಯ ಕಲೆ, ಸಾಹಿತ್ಯ, ಸಂಗೀತ, ಸಾಂಸ್ಕೃತಿಕ ಮೇಲಾಗಿ ಸಾತ್ವಿಕ ರಾಜಕಾರಣದ ಬೇರುಗಳನ್ನು ಗಟ್ಟಿಗೊಳಿಸುವಲ್ಲಿ ಯಶಸ್ವಿಯಾಗಲಿ ಆ ಮೂಲಕ ಸಾವಿಲ್ಲದ ಸಂತ ಎಂ.ಪಿ. ಪ್ರಕಾಶರ ನೆನಪುಗಳನ್ನು ಅಚ್ಚಳಿಯದೇ ಉಳಿಸಲಿ ಎಂದು ಲಂಕೇಶ್ ಬಳಗ ಶುಭ ಕೋರುತ್ತದೆ.

-ಹುರುಳಿಕುಪ್ಪಿ ವಿನಯ್

ರೈತ ಮುಖಂಡನಿಗೆ ಬೇಕಿದೆ ನೆರವಿನ ಹಸ್ತ

...ಮ್ಮೆಲ್ಲರ ಮಾನವೀಯ ಜವಾಬ್ದಾರಿ ಜಾಗೃತವಾಗ...ದ ಸಂದರ್ಭ ಬಂದೊದಗಿದೆ. ರೈತ ಸಂಘಟನೆ, ...ಜನಮುಖಿ ಹೋರಾಟ, ಪ್ರಗತಿಪರ ಚಿಂತನೆ ಹೀಗೆ ...ಸಾರ್ಥಕ ಮಜಲುಗಳಲ್ಲಿ ತೊಡಗಿಸಿಕೊಳ್ಳುತ್ತಲೇ ...ರುವ ಅಪ್ಪಟ ಹೋರಾಟಗಾರ ವೀರಸಂಗಯ್ಯನವರು ...ರಡೂ ಮೂತ್ರಪಿಂಡಗಳ ವೈಫಲ್ಯತೆಯಿಂದಾಗಿ ತೀವ್ರ ...ಸ್ಥದಲ್ಲಿದ್ದಾರೆ.

...ತಃ ಕೃಷಿಕರಾಗಿದ್ದುಕೊಂಡು ಕಳೆದ ಮೂವತ್ತು ...ಗಳ ಕಾಲ ತಮ್ಮ ಜೀವನವನ್ನು ರೈತಪರ ...ರಾಟದಲ್ಲೇ ಕಳೆದವರು ವೀರಸಂಗಯ್ಯ. ಜನಪರ ...ರ ಜೊತೆಗೆ ರಾಜ್ಯ ರೈತಸಂಘದ ಪ್ರಮುಖ ...ರಾಗಿ ದುಡಿದಿರುವ ಇವರು ರೈತರ ನ್ಯಾಯಯುತ ...ಗೆ ಕೂಗಿಗೆ ಸದಾ ಮುಂಚೂಣಿ ವಹಿಸುತ್ತಲೇ ...ರೆ. ಪ್ರೊ. ನಂಜುಂಡಸ್ವಾಮಿಯವರ ಹಾದಿಯಲ್ಲಿ ... ಆದರ್ಶಯುತ ಜೀವನವನ್ನು ಅಚ್ಚುಕಟ್ಟಾಗಿ ...ಂಡು ಬಂದಂತಹ ಜೀವ ಇವರದು. ವೀರಾ... ಮತ್ತು ರೈತರ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಕೆಯಂತಹ ಸರ್ಕಾರದ ನೀತಿಗಳ ವಿರುದ್ಧದ ಹೋರಾಟವನ್ನು ಉತ್ತರ ಕರ್ನಾಟಕದಲ್ಲಿ ಅದರಲ್ಲೂ ಕೊಪ್ಪಳ, ಬಳ್ಳಾರಿ ಪ್ರಾಂತ್ಯದಲ್ಲಿ ಯಶಸ್ವಿಯಾಗಿ ಸಂಘಟಿಸಿದ್ದರಲ್ಲಿ ವೀರಸಂಗಯ್ಯನವರ ಪಾತ್ರ ನಿಜಕ್ಕೂ ಶ್ಲಾಘನೀಯ. ದುರದೃಷ್ಟವೆಂದರೆ ಅದೇ ಹೋರಾಟಗಳಲ್ಲಿ ಪೊಲೀಸರು ಇವರಿಗೆ ನೀಡಿದ ಉಡುಗೊರೆಯೇ ಈ ಕಿಡ್ನಿ ವೈಫಲ್ಯ.


2003ರ ಜೂನ್‌ನಲ್ಲಿ ಮೀಟರ್ ಅಳವಡಿಕೆಯ ವಿರುದ್ಧ ಮತ್ತು ಸಮಾನ ವಿದ್ಯುತ್ ಹಂಚಿಕೆಯ ಬೇಡಿಕೆಯನ್ನು ಮುಂದಿಟ್ಟುಕೊಂಡು ಸಹಸ್ರಾರು ರೈತರ ಬೆಂಬಲದಲ್ಲಿ ಹೋರಾಟಕ್ಕಿಳಿದಿದ್ದ ಇವರನ್ನು ಅಕ್ರಮವಾಗಿ ಬಂಧಿಸಿದ ಪೊಲೀಸರು ಟಿ.ಆರ್.ಗ್ರೌಂಡಿನಲ್ಲಿ ರಾತ್ರೋರಾತ್ರಿ ಮನಬಂದಂತೆ ಥಳಿಸಿದ್ದರು. ಪೊಲೀಸ್ ದೌರ್ಜನ್ಯದ ಅವತ್ತಿನ ಬಹುಪಾಲು ಏಟುಗಳು ಬಿದ್ದದ್ದು ವೀರಸಂಗಯ್ಯನವರ ಬೆನ್ನಿನ ಕೆಳಭಾಗಕ್ಕೆ, ಅವರ ಕಿಡ್ನಿಯನ್ನೇ ಡ್ಯಾಮೇಜು ಮಾಡಿಬಿಡುವಷ್ಟು ಬಲವಾದ ಏಟುಗಳಾಗಿದ್ದವು. ಅದರ ಪರಿಣಾಮವಾಗಿ ಎಡಭಾಗದ ಮೂತ್ರಪಿಂಡದಲ್ಲಿ ಸಣ್ಣದಾಗಿ ಪ್ರಾರಂಭವಾದ ಇನ್‌ಫೆಕ್ಷನ್ ಅದನ್ನು ಸಂಪೂರ್ಣ ಹಾನಿಗೊಳಿಸಿತ್ತು. ಕಳೆದ ಒಂದೂವರೆ ವರ್ಷದಿಂದ ತಮ್ಮ ಒಂದೇ ಕಿಡ್ನಿಯಲ್ಲಿ ಪ್ರಯಾಸದ ಜೀವನ ನಡೆಸಿಕೊಂಡು ಬಂದಿದ್ದರು. ಈಗ ಆ ಮೂತ್ರಪಿಂಡವೂ ವೈಫಲ್ಯಕ್ಕೆ ತುತ್ತಾಗಿದೆ.


ಉದರದ ಶಸ್ತ್ರಚಿಕಿತ್ಸೆಯಾಗಿರುವುದರಿಂದ ಅವರಿಗೆ **peritoneal dialysys therapy** ನೀಡಲೂ ಸಾಧ್ಯವಾಗುತ್ತಿಲ್ಲ. ಬದಲೀ ಮೂತ್ರಪಿಂಡ ಜೋಡಣೆಯಂತಹ ದುಬಾರಿ ಚಿಕಿತ್ಸೆಯೇ ಅನಿವಾರ್ಯವೆಂಬ ನಿರ್ಧಾರಕ್ಕೆ ವೈದ್ಯರು ಬಂದಿದ್ದಾರೆ. ಬದುಕಿನ ಉದ್ದಕ್ಕೂ ನಿಸ್ವಾರ್ಥ ಚಳವಳಿ, ಹೋರಾಟಗಳನ್ನೇ ರೂಢಿಸಿಕೊಂಡಿರುವ ವೀರಸಂಗಯ್ಯನವರಾಗಲಿ ಅವರ ಕುಟುಂಬವಾಗಲಿ ಚಿಕಿತ್ಸೆಯ ವೆಚ್ಚವನ್ನು ಭರಿಸುವಷ್ಟು ಶಕ್ತವಾಗಿಲ್ಲ ಎಂಬುದನ್ನು ಒತ್ತಿ ಹೇಳುವ ಅಗತ್ಯವಿಲ್ಲ.

ನೆರವಿನ ನಿರೀಕ್ಷೆಯಲ್ಲಿರುವ ವೀರಸಂಗಯ್ಯನವರಿಗೆ ಮನೋಸ್ಥೈರ್ಯ ನೀಡಿ ಹರಸುವುದರ ಜೊತೆಗೆ ವೈದ್ಯಕೀಯ ವೆಚ್ಚ ಭರಿಸಲು ಆಪ್ತರು, ಸಮಾನ ಮನಸ್ಕರು, ಜೀವಪರ ಕಾಳಜಿವುಳ್ಳವರು ಮುಂದಾಗಬೇಕಿದೆ. ಹೋರಾಟ ಜೀವವೊಂದನ್ನು ಉಳಿಸಿಕೊಳ್ಳುವ ಸಲುವಾಗಿ ಸಣ್ಣ ಮೊತ್ತವೆಂಬ ಕಿಂಚಿತ್ತೂ ಸಂಕೋಚಪಟ್ಟುಕೊಳ್ಳದೆ ನಮ್ಮ ಕೈಲಾದಷ್ಟು ಸಹಾಯಹಸ್ತ ಚಾಚುವುದು ನಮ್ಮ ಕರ್ತವ್ಯವಲ್ಲವೆ?

ಆಸಕ್ತರು ಕೆಳಗೆ ನೀಡಿರುವ ವೀರಸಂಗಯ್ಯನವರ ಅಕೌಂಟ್ ನಂಬರ್‌ಗೆ ಹಣವನ್ನು ವರ್ಗಾಯಿಸಬಹುದು ಅಥವಾ ಅವರನ್ನು ಖುದ್ದಾಗಿ ಸಂಪರ್ಕಿಸಿಯೂ ತಮ್ಮ ಸಹಾಯದ ನೆರವನ್ನು ನೀಡಬಹುದು. ಪ್ಲೀಸ್, ಇದೊಂದು ಜವಾಬ್ದಾರಿಯನ್ನು ಜೊತೆಯಾಗಿ ನಿಭಾಯಿಸೋಣ ಬನ್ನಿ......

ವೀರಸಂಗಯ್ಯ
ಅಕೌಂಟ್ ನಂಬರ್ 31226667581,
ಎಸ್.ಬಿ.ಐ, ಗಾಂಧಿನಗರ ಶಾಖೆ, ಬೆಂಗಳೂರು.
ಮೊಬೈಲ್ ನಂಬರ್: 9342658829





ಬೇಟೆ

ನನ್ನ ಸ್ನೇಹಿತ ಮಿಸ್ಟರ್ ಮೆಕಾಯ್‌ನನ್ನು ನಾನು ಆಗಾಗ್ಗೆ ಭೇಟಿಯಾಗಲು ಹೋಗುತ್ತಿದ್ದೆ. ಆದರೆ ಪ್ರತಿ ಭೇಟಿಯಲ್ಲೂ ನಮ್ಮ ಮಾತುಕತೆಯಲ್ಲಿ ಅನಿವಾರ್ಯವಾಗಿ ಬೇಟೆ ಪ್ರಸ್ತಾಪವಾಗಿ ಮೆಕಾಯ್ ಬೇಟೆ ಬಗ್ಗೆ ಒಂದು ಭಾಷಣ ಬಿಗಿದೇ ಬಿಗಿಯುತ್ತಿದ್ದ. ಮೆಕಾಯ್ ಈಗಾಗಲೇ ಇಂಡಿಯಾದ ಕಾಡು, ಜಂಗಲ್, ಮೈದಾನ ಎಲ್ಲೆಂದರಲ್ಲಿ ಐದು ಹುಲಿಗಳು, ಆರು ಆನೆಗಳು, ಏಳು ಖಡ್ಗಮೃಗ, ಒಂದೆರಡು ನೀರಾನೆಗಳನ್ನು ಹಿಡಿಯುವುದೋ, ಗುಂಡು ಹಾಕಿ ಹೊಡೆಯುವುದೋ ಮಾಡಿದ್ದ.

ಗೋವಾದಲ್ಲಿದ್ದಾಗ ಮೆಕಾಯ್ ಎರಡು ಕಪ್ಪು ಚಿರತೆಗಳಿಗೆ ಗುಂಡು ಹೊಡೆದಿದ್ದ. ಅವುಗಳಲ್ಲಿ ಒಂದು ಚಿರತೆ ಅಷ್ಟು ಕಪ್ಪು ಬಣ್ಣ ಇರಲಿಲ್ಲವಾದ್ದರಿಂದ, ಮೆಕಾಯ್ ಅದಕ್ಕೆ ಕಪ್ಪು ಬಣ್ಣಬಳಿದು ನಂತರ ಅದರ ಕಥೆ ಮುಗಿಸಿದ್ದ. ಒಮ್ಮೆ ಊಟಿಯಿಂದ ಮೆಟ್ಟುಪಾಳ್ಯಂಗೆ ಹೋಗುವಾಗ ಅವನು ದಾರಿಯಲ್ಲಿ ಮಲಗಿದ್ದ ಭೂತಾಕಾರದ ಹುಲಿಯ ಮೇಲೆಯೇ ಕಾರು ಬಿಟ್ಟುಕೊಂಡು ಹೋದ. ಹುಲಿ ಅನಂತರ ಎದ್ದು ಮೈಕೊಡವಿಕೊಂಡು ಶೋಲಾ ಕಾಡಿನೊಳಕ್ಕೆ ಕುಕ್ಕೋಟ ಓಡಿಹೋಯಿತು.

ಒಮ್ಮೆ ಒಂದು ಪುಂಡು ಆನೆಗೆ ಮೆಕಾಯ್ ನಾಲ್ಕು ಗುಂಡು ಹೊಡೆದರೂ ಅದು ಅವನನ್ನು ಅಟ್ಟಿಸಿಕೊಂಡು ಬಂದಿತು. ಆಗ ಮೆಕಾಯ್ ಆನೆಯನ್ನು ವಶಪಡಿಸಿಕೊಳ್ಳುವ ಸಲುವಾಗಿ ಒಂದು ಕ್ಲೋರೋಫಾರ್ಮ್ ಬಳಿದ ಗುಂಡನ್ನು ಆನೆಯ ಬಾಯಿಗೆ ಹಾಕಬೇಕಾಯಿತು.

****

ಒಂದು ಶನಿವಾರ ಸಂಜೆ ಮಾಡಲೇನೂ ಕೆಲಸವಿರಲಿಲ್ಲವಾದ್ದರಿಂದ ನಾನು ಮೆಕಾಯ್ ನೋಡಲು ಹೋದೆ. ಮಿ. ಮೆಕಾಯ್ ತನ್ನ 12 ಬೋರ್‌ಗನ್, .22 ರೈಫಲ್‌ಗಳನ್ನು ಕ್ಲೀನ್ ಮಾಡುತ್ತಿದ್ದ. ಓಹೋ ಇವನು ಬೇಟೆಗೆ ಹೊರಡಲು ಸಿದ್ಧವಾಗುತ್ತಿದ್ದಾನೆ ಎಂದುಕೊಂಡೆ.

ನಾನು ಮೊಲದ ಬೇಟೆಗೆ ಮೆಕಾಯ್ ಜೊತೆ ಹೊರಡುವ ಆಹ್ವಾನವನ್ನು ಕೂಡಲೇ ಒಪ್ಪಿಕೊಂಡೆ. ಬೇಟೆಗೆ ಹೊರಡಲು ಬೇಕಾದ ಹಂಟಿಂಗ್ ಬೂಟುಗಳು, ಚಾಕು, ಬೆಚ್ಚಗಿನ ಬಟ್ಟೆಗಳನ್ನು ಒದಗಿಸಿಕೊಂಡು ನಾನು ಎಂಟು ಗಂಟೆ ಹೊತ್ತಿಗೆ ಮೆಕಾಯ್ ಮನೆಗೆ ಬಂದೆ. ಎಂಟೂವರೆಗೆ ಹೊರಡುವುದಿತ್ತು. ಮಿ. ಮೆಕಾಯ್ ಶುಭ್ರವಾದ ಹಂಟಿಂಗ್ ಜಾಕೆಟ್ ಧರಿಸಿ, ಎದೆಯ ಮೇಲೆ ಅಡ್ಡಕ್ಕೆ 12 ಬೋರ್ ತೋಟಾಗಳ ಪಟ್ಟಿಯನ್ನು ಧರಿಸಿದ್ದ. ಕೌಬಾಯ್‌ಗಳ ಫ್ಯಾಷನ್‌ನಂತೆ .22 ಕೋಲ್ಟ್ ರಿವಾಲ್ವರ್‌ನ್ನು ಸೊಂಟದಲ್ಲಿ ತೂಗಾಡಿಸಿಕೊಂಡಿದ್ದ. ಈಗ ಮೆಕಾಯ್ ಒಬ್ಬ ಬೇಟೆಗಾರನಿಗೂ ಕೌಬಾಯ್‌ಗೂ ನಡುಮಧ್ಯದ ಹೈಬ್ರಿಡ್‌ನಂತೆ ಕಂಗೊಳಿಸುತ್ತಿದ್ದ. ಮೆಕಾಯ್‌ನ ಕೋರಿಕೆಯ ಮೇರೆಗೆ ಈ ವೇಷಭೂಷಣದಲ್ಲಿ ಅವನ ಎರಡು ಫೋಟೋಗಳನ್ನು ತೆಗೆದೆ.

ಮೂರು ಗಂಟೆಗಳ ಕಾಲ ಒಂದು ಉಲ್ಲಾಸಕರ ಪ್ರಯಾಣದ ನಂತರ ನಾವು ಒಂದು ಜಾಗಕ್ಕೆ ಬಂದೆವು. ನಾವಿಬ್ಬರು ಕಾರಿನಿಂದ ಇಳಿದು ತಲೆಗೆ ಸರ್ಚ್‌ಲೈಟ್ ಕಟ್ಟಿಕೊಂಡು, ಗನ್‌ಗಳಿಗೆ ತೋಟಾ ತುಂಬಿ, ಕೊಂಚ ಲಘು ಉಪಾಹಾರ ಮುಗಿಸಿದೆವು. ಆ ಸಮಯಕ್ಕೆ ಸರಿಯಾಗಿ ಮೆಕಾಯ್‌ಗೆ ಒಂದು ಅದ್ಭುತ ಐಡಿಯಾ ಹೊಳೆಯಿತು. ತಣ್ಣಗಿರುವ ರಾತ್ರಿ ಹೊತ್ತು ಅವನ ಒಡಲನ್ನು ಬೆಚ್ಚಗಾಗಿಸಲು ಏನಾದರೂ ಬೆಚ್ಚಗಿರುವುದು ಕುಡಿಯಲು ಬೇಕಿತ್ತು. ಕೂಡಲೇ ಹಾಟ್ ಡ್ರಿಂಕ್ಸ್ ಹೊರಬಂದವು. ನಮ್ಮ ಹಾಟ್ ಪಾರ್ಟಿ ಒಂದು ಗಂಟೆ ಕಾಲ ನಡೆಯಿತು.

ಮಿ. ಮೆಕಾಯ್ ಕೂಗಾಡಿಕೊಂಡು ಬೇಟೆಗೆ ಸನ್ನದ್ಧನಾದ. ಸ್ವಲ್ಪಹೊತ್ತಿಗೆ ನಾವು ಒಂದು ಮೊಲವನ್ನು ನೋಡಿದೆವು. ಆದರೆ ಮಿ. ಮೆಕಾಯ್‌ಗೆ ಡಬಲ್, ಡಬಲ್ ಮೊಲಗಳು ಕಾಣಿಸತೊಡಗಿತು! ಅವನು ಗೊಂದಲಕ್ಕೀಡಾದ. ಎರಡರಲ್ಲಿ ಯಾವ ಮೊಲವನ್ನು ಹೊಡೆಯುವುದು? ಡೈಲೆಮ್ಮಾ! ಕಡೆಗೆ ಮೆಕಾಯ್ ಗುಂಡು ಹೊಡೆಯಲೇ ಇಲ್ಲ. ನನಗೂ ಈ ಆಟ ಮುಂದುವರಿಸುವ ಆಸಕ್ತಿ ಇರಲಿಲ್ಲ. ಮಿ. ಮೆಕಾಯ್ ಒಂದು ಪೋಲಿ ಹಾಡನ್ನು ಹಾಡುತ್ತ ಕಾಲುಗಳನ್ನು ಎಳೆದಾಡಿಕೊಂಡು ಸೈನಿಕನಂತೆ ಹೆಜ್ಜೆಹಾಕಲು ಪ್ರಯತ್ನಿಸಿ ತೂರಾಡುತ್ತಿದ್ದ. ಹಾಗೆಯೇ ಅಡ್ಡಾದಿಡ್ಡಿ ವಾಲಾಡುತ್ತ ದಬಾರನೆ ಬಿದ್ದ. ಬಿದ್ದ ಮೇಲೆ ಮೊಲಗಳಿಗೆಲ್ಲಾ ಶಾಪ ಹಾಕಿದ. ಇಂಥ ಸುಡುಗಾಡು ಕುರುಚಲು ಕಾಡಿಗೆ ಕರೆದುಕೊಂಡು ಬಂದೆಯಲ್ಲಾ ಎಂದು ನನಗೂ ಶಾಪ ಹಾಕಿದ. ಹಾಗೆಯೆ ಗೊಣಗುತ್ತ ನಿದ್ದೆ ಹೋಗಿಬಿಟ್ಟ. ರಾತ್ರಿಯೆಲ್ಲಾ ನಾನು ಅವನನ್ನ ಕಾದುಕೊಂಡು ಕುಳಿತಿದ್ದೆ.


ಮಾರನೆ ದಿನ ನಾವು ಮನೆ ತಲುಪಿದಾಗ ಮಿಸೆಸ್ ಮೆಕಾಯ್ ಮೊಲದ ಮಾಂಸಕ್ಕಾಗಿ ಕಾದಿದ್ದರು. ಬೇಟೆಯಾಡಿದ ಮೊಲದ ಮಾಂಸದಲ್ಲಿ ವಿಶೇಷ ಅಡುಗೆ ತಯಾರಾಯಿತು. ಊಟಕ್ಕೆ ಬಂದಿದ್ದ ಅತಿಥಿಗಳಿಗೂ ಮಿಸೆಸ್ ಮೆಕಾಯ್ ಅವರಿಗೂ ಸವಿಯಡಿಗೆಯಾಗಿದ್ದ ಮೊಲಗಳು ನಾವು ಮೂರ್ ಮಾರ್ಕೆಟ್‌ನಿಂದ ತಂದದ್ದು ಎಂದು ತಿಳಿದಿತ್ತು.

ಇಂಗ್ಲಿಷ್ ಮೂಲ: ಓ.ಟಿ.ರವೀಂದ್ರನ್
ಕನ್ನಡಕ್ಕೆ : ಪದ್ಮ ಶ್ರೀರಾಮ್

ಪ್ರಾಣಿಗಳ ರಕ್ಷಣೆಗೆ ನಿರ್ಮಾಣಗೊಂಡ 'ಮೇಖ್ರಿ ಸರ್ಕಲ್'

ಅಪರೂಪದ ಫೋಟೋ

ಎಪ್ಪತ್ತೈದು ವರ್ಷಗಳ ಹಿಂದೆ ಬೆಂಗಳೂರಿನ ಹೆಬ್ಬಾಳದ ಹತ್ತಿರ ಒಂದು ಕಡಿದಾದ ದಿನ್ನೆ ಇತ್ತು. ಆಗಿನ ಕಾಲದಲ್ಲಿ ಬೆಂಗಳೂರಿನಲ್ಲಿ ಹೆಚ್ಚಾಗಿ ಎತ್ತಿನ ಗಾಡಿಗಳೇ ಇದ್ದು ಭಾರವನ್ನು ಹೊತ್ತ ಗಾಡಿಗಳನ್ನು ಎಳೆಯುತ್ತಾ ಆ ದಿನ್ನೆಯನ್ನು ಏರುವಾಗ ಬಹಳಷ್ಟು ಎತ್ತುಗಳು ಜಾರಿ ಬಿದ್ದು ತಮ್ಮ ಕಾಲುಗಳನ್ನು ಮುರಿದುಕೊಳ್ಳುತ್ತಿದ್ದವು. ಪ್ರಾಣಿಗಳಿಗಾಗುತ್ತಿದ್ದ ಈ ಅನಾಹುತಗಳು ಓರ್ವ ವ್ಯಕ್ತಿಯಲ್ಲಿ ಕರುಣೆಯನ್ನು ಹುಟ್ಟಿಸಿತು. ಆ ವ್ಯಕ್ತಿ ತನ್ನ ಹಣವನ್ನೇ ವೆಚ್ಚ ಮಾಡಿ ಆ ದಿನ್ನೆಯನ್ನು ಸಮತಟ್ಟು ಮಾಡಿಸಿದರು. ಜೊತೆಗೆ ಅಲ್ಲೊಂದು ಸರ್ಕಲ್‌ಅನ್ನು ನಿರ್ಮಿಸಿದರು.



ಆ ವ್ಯಕ್ತಿಯ ಸಾಮಾಜಿಕ ಕಾಳಜಿಯ ಸುದ್ದಿ ಮೈಸೂರು ಮಹಾರಾಜ ಕೃಷ್ಣರಾಜ ಒಡೆಯರ್ ಅವರ ಕಿವಿಗೆ ಬಿದ್ದು ಆ ದಿನ್ನೆಯನ್ನು ಸಮತಟ್ಟು ಮಾಡಲು ವೆಚ್ಚವಾಗಿದ್ದ ಹಣವನ್ನು ಭರ್ತಿ ಮಾಡಲು ಮುಂದಾದರು. ಮೊದಲು ಆ ವ್ಯಕ್ತಿ ಹಣವನ್ನು ಸ್ವೀಕರಿಸಲು ಒಪ್ಪದಿದ್ದಾಗ ಮಹಾರಾಜರು "ಸರ್ಕಾರ ಮಾಡಬೇಕಿದ್ದ ಕೆಲಸವನ್ನು ನೀವು ಮಾಡಿದ್ದೀರಿ. ತೆಗೆದುಕೊಳ್ಳುವುದಿಲ್ಲ ಎನ್ನಬಾರದು" ಎಂದು ಹೇಳಿ ಅವರನ್ನು ಒಪ್ಪಿಸಿದರು. ಅಷ್ಟೇ ಅಲ್ಲ ಆ ವ್ಯಕ್ತಿ ನಿರ್ಮಿಸಿದ್ದ ಸರ್ಕಲ್‌ಗೆ ಆತನ ಹೆಸರನ್ನೇ ಇಡುವುದಾಗಿ ಮಹಾರಾಜರು ಘೋಷಿಸಿದರು.

ಅಂದಹಾಗೆ ಆ ವ್ಯಕ್ತಿಯ ಹೆಸರು ಎನಾಯತುಲ್ಲಾ ಮೆಹಕ್ರಿ.

ಪ್ರಾಣಿಗಳ ಬಗ್ಗೆ ಕರುಣೆ ತೋರಿ ಆತ ನಿರ್ಮಿಸಿದ್ದ ಸರ್ಕಲ್‌ಗೆ ಮೆಹಕ್ರಿ ವೃತ್ತ ಎಂದು 75 ವರ್ಷಗಳ ಹಿಂದೆ ನಾಮಕರಣ ಮಾಡಲಾಯಿತು. ಅದನ್ನು ಅಂದಿನ ಮದ್ರಾಸ್ ಪ್ರೆಸಿಡೆನ್ಸಿಯ ಗವರ್ನರ್ ಸರ್ ಜಾನ್ ಹೋಪ್ 1937ರಲ್ಲಿ ಉದ್ಘಾಟಿಸಿದರು.

ಆ ವೃತ್ತವೇ ಈಗ ಜನರ ಬಾಯಲ್ಲಿ 'ಮೇಖ್ರಿ ಸರ್ಕಲ್' ಆಗಿದೆ.

ಅಂದಹಾಗೆ ಮೆಹಕ್ರಿ ಅವರು ಓರ್ವ ಬ್ಯುಸಿನೆಸ್ ಮ್ಯಾನ್ ಆಗುವ ಮುನ್ನ ಸ್ವಾತಂತ್ರ್ಯ ಸಂಗ್ರಾಮದಲ್ಲೂ ಭಾಗಿಯಾಗಿದ್ದರು. ಆಗ ಅವರನ್ನು ಆರು ತಿಂಗಳ ಕಾಲ ಮದ್ರಾಸ್ ಸೆಂಟ್ರಲ್ ಜೈಲಿನಲ್ಲಿ ಬಂಧಿಸಲಾಗಿತ್ತು. ಜೈಲಿನಲ್ಲಿ ಮೆಹಕ್ರಿ ಅವರೊಂದಿಗೆ ಇದ್ದವರು ಚಕ್ರವರ್ತಿ ಸಿ. ರಾಜಗೋಪಾಲಚಾರಿ ಮತ್ತು ಈ.ವಿ.ರಾಮಸ್ವಾಮಿ ನಾಯ್ಕರ್ ಅವರುಗಳು. ಸ್ವಾತಂತ್ರ್ಯ ಸಂಗ್ರಾಮದ ಹೋರಾಟಗಾರರ ಸಂಘದ ಅಧ್ಯಕ್ಷರೂ ಆಗಿದ್ದ ಮೆಹಕ್ರಿ ಅವರು ಕಾಂಗ್ರೆಸ್ ಪಕ್ಷದ ಸದಸ್ಯರೂ ಆಗಿದ್ದರು.

ಇವತ್ತು ಮೆಹಕ್ರಿ ಅವರೂ ಇಲ್ಲ, ಅವರು ನಿರ್ಮಿಸಿದ್ದ ಮೇಖ್ರಿ ಸರ್ಕಲ್ ಕೂಡ ಇಲ್ಲ. ಅಲ್ಲೀಗ ಒಂದು 'ಅಂಡರ್‌ಪಾಸ್' ಇದೆ. ನೆಮ್ಮದಿಯ ವಿಷಯ ಯಾವುದೆಂದರೆ ಈಗಲೂ ಆ ಜಾಗದ ಹೆಸರನ್ನು ಬದಲಾಯಿಸದೇ ಇರುವುದು.

▶13

ರಣರಂಗವಾಗಲಿರುವ ಹುಬ್ಬಳ್ಳಿ...

ಧಾರವಾಡದ ಟಿಕೆಟ್ ಕೊಡಿಸುವ ಹುನ್ನಾರವೂ ಇದರ ಹಿಂದೆ ಅಡಗಿದೆ. ಅದು ಸಾಧ್ಯವಾಗದೆ ಹೋದರೆ ಹುಬ್ಬಳ್ಳಿ ಸೆಂಟ್ರಲ್ ವಿಧಾನಸಭಾ ಕ್ಷೇತ್ರದ ಟಿಕೆಟು ತೆಗೆದುಕೊಳ್ಳುವ ಗುರಿ ಹೊಂದಿದ್ದಾರೆ ಹಿಂಡಸಗೇರಿ. ಆದರೆ ಇದೇ ಕ್ಷೇತ್ರದ ಟಿಕೆಟ್ ಪಡೆದೇ ತೀರುತ್ತೇನೆ ಎಂಬ ವಿಶ್ವಾಸದಲ್ಲಿ ಅಂಜುಮನ್ ಸಂಸ್ಥೆಯ ಅಧ್ಯಕ್ಷರಾಗಿ ಮುಂದುವರೆಯುವ ಹುರುಪಿನಲ್ಲಿದ್ದಾರೆ ಯೂಸಫ್ ಸವಣೂರ.

ತನ್ನ ಆಜನ್ಮ ವೈರಿಯಂದೇ ಪರಿಗಣಿಸಿರುವ ಹಿಂಡಸಗೇರಿ ಈ ಮೊದಲು ಈ ಚುನಾವಣೆಯಲ್ಲಿ ಯೂಸಫ್ ಸವಣೂರಿನೊಂದಿಗೆ ಮಿಲಾಪಿ ಮಾಡಿಕೊಂಡಿದ್ದರು. ಅವರ ನಡುವೆ ಆದ ಒಪ್ಪಂದದ ಪ್ರಕಾರ ಅಂಜುಮನ್ ಸಂಸ್ಥೆಗೆ ನಾಜೀಮ ಹಿಂಡಸಗೇರಿಯನ್ನು ಅಧ್ಯಕ್ಷನನ್ನಾಗಿಸುವುದು ಮತ್ತು ಕಾರ್ಯದರ್ಶಿಯಾಗಿ ಯೂಸಫ್ ಸವಣೂರ ಮುಂದುವರೆಯುವುದಾಗಿತ್ತು. ಆದರೆ ಈಗ ಹಿಂಡಸಗೇರಿಗೆ ಸೊಪ್ಪು ಹಾಕದ ಸವಣೂರರು ತನ್ನದೇ ಗುಂಪಿನೊಂದಿಗೆ ಚುನಾವಣಾ ಅಖಾಡಕ್ಕೆ ಇಳಿದಿದ್ದಾರೆ.

ಈ ಚುನಾವಣೆಯಲ್ಲಿ ಹಿಂಡಸಗೇರಿಗೆ ಅಂಟಿರುವ ವಕ್ಫ್ ಹಗರಣ ಮತ್ತು ಆತ ತೋರುತ್ತಿರುವ ಸಹೋದರ ಪ್ರೇಮವನ್ನು ಮುಸ್ಲಿಮರು ಸಾರಾಸಗಟಾಗಿ ತಿರಸ್ಕರಿಸಲಿದ್ದಾರೆ. ಆದ್ದರಿಂದ ಸದ್ಯಕ್ಕೆ ಈ ಚುನಾವಣೆಯಲ್ಲಿ ನೇರವಾದ ಸ್ಪರ್ಧೆ ಏರ್ಪಟ್ಟಿರುವುದು ಹೊನ್ನಳ್ಳಿ ಹಾಗೂ ಸವಣೂರರ ಗುಂಪಿನ ಮಧ್ಯೆ. ಈ ಚುನಾವಣೆಯಲ್ಲಿ ಒಟ್ಟು 52 ಸದಸ್ಯರು ಆಯ್ಕೆಗೊಳ್ಳಲಿದ್ದಾರೆ.

ಹೊನ್ನಳ್ಳಿಯೇ ವಾಸಿ

ಈಗ ಅಧ್ಯಕ್ಷ ಸ್ಪರ್ಧೆಯಲ್ಲಿರುವ ಮೂವರಲ್ಲಿ ಅಂಜುಮನ್ ಸಂಸ್ಥೆಗೆ ನಿಜವಾಗಲೂ ದುಡಿದವರೆಂದರೆ ಹೊನ್ನಳ್ಳಿ ಮಾತ್ರ. ಹಳೆ ಹುಬ್ಬಳ್ಳಿ ಈದ್ಗಾ ಮೈದಾನಕ್ಕೆ ಮೊದಲ ಬಾರಿಗೆ 5.4 ಎಕರೆ ಜಮೀನನ್ನು ಖರೀದಿಸಿದ್ದು ಅನಂತರದಲ್ಲಿ ಅದಕ್ಕೆ ಹೊಂದಿಕೊಂಡಂತೆ ಇರುವ ಎರಡು ಎಕರೆ ಜಮೀನನ್ನು ಗಣೆಸಾಬ[illegible] ಎಂಬ ಕಂಟ್ರಾಕ್ಟುದಾರನಿಂದ ಒಂಭತ್ತು ಲಕ್ಷ ರೂಪಾಯಿ ಖರೀದಿಸಿದ್ದು ಹೊನ್ನಳ್ಳಿ ಅವರ ಅಧಿಕಾರಾವಧಿಯಲ್ಲಿ. ಈ ಜಾಗೆಯಲ್ಲಿ ಡಿಪ್ಲೊಮಾ, ಮಹಿಳಾ ಕಾಲೇಜು ಅಂತಾ 50 ಸಾವಿರ ಚದುರ ಅಡಿಯಷ್ಟು ಕಟ್ಟಡವನ್ನು ಕಟ್ಟಲಾಗಿದೆ.

ಆದರೆ ಇದಕ್ಕೆ ತದ್ವಿರುದ್ಧವಾಗಿ ಹಿಂಡಸಗೇರಿ ಮತ್ತು ಸವಣೂರರ ಕೊಡುಗೆ[illegible] ಹುಬ್ಬಳ್ಳಿಯ ಇಂಡಸ್ಟ್ರಿಯಲ್ ಏರಿಯಾದ ತಾರಿಹಾಳ ಗ್ರಾಮದಲ್ಲಿ ವಕ್ಫ್‌ಗೆ ಸೇರಿದ್ದ ಎಂಟು ಎಕರೆ ಜಮೀನು ಇದ್ದು ಅದನ್ನು ಸವಣೂರ ಹಾಗೂ ಹಿಂಡಸಗೇರಿ ಸೇರಿ ಗುಳುಂ ಮಾಡಿ ಅಲ್ಲಿ ರಿಯಲ್ ಎಸ್ಟೇಟ್ ಬಿಜಿನೆಸ್ ಶುರುವಿಟ್ಟುಕೊಂಡಿದ್ದಾರೆ ಎಂದು ತಾರಿಹಾಳದ ಮುಸ್ಲಿಮರು ಇವರಿಬ್ಬರನ್ನು ಇಂದಿಗೂ ಶಪಿಸುತ್ತಿದ್ದಾರೆ.

ಹುಬ್ಬಳ್ಳಿಯ ಹೃದಯಭಾಗದಲ್ಲಿರುವ ದುರ್ಗದ ಬೈಲ್ ವೃತ್ತದ ಹತ್ತಿರದಲ್ಲಿಯೇ[illegible] ಮೊಸರಿನ ಪೇಟೆ ಎಂಬ ಪ್ರದೇಶದಲ್ಲಿ ಅಂಜುಮನ್ ಸಂಸ್ಥೆಗೆ ಸೇರಿದ ವಾಣಿಜ್ಯ ಮಳಿಗೆಗಳಿವೆ. ರಾಜ್ಯದಲ್ಲಿರುವ ವಕ್ಫ್ ಆಸ್ತಿಗಳ ಸುಪರ್ದಿ ಆಯಾ ಪ್ರದೇಶದ[illegible] ಅಂಜುಮನ್ ಸಂಸ್ಥೆಯದ್ದು. ಆದ್ದರಿಂದ ಆ ಆಸ್ತಿಯನ್ನು ರಕ್ಷಿಸುವ ಬಗ್ಗೆ ಅಂಜುಮನ್ ಸಂಸ್ಥೆಯಲ್ಲಿ ಅಧಿಕಾರ ಹಿಡಿದಿರುವವರು ತೋರಬೇಕು.

ಈ ಮಳಿಗೆಗಳಿರುವ ಜಾಗೆಯನ್ನು ನವಾಜ ಖಾತುನ ಎಂಬ ಮಹಿಳೆ ವಕ್ಫ್‌ಗೆ ದಾನವಾಗಿ ನೀಡಿದ್ದರು. ಆಕೆಯ ಉದ್ದೇಶ ಇದರಿಂದ ಅವಳಿನಗರ[illegible] ಮುಸಲ್ಮಾನರಿಗೆ ನೆರವಾಗುವುದಾಗಿತ್ತು. ಆದರೆ ಸವಣೂರ ಈ ಮೊಸರಿನ ಪೇಟೆಯಲ್ಲಿರುವ ಸುಮಾರು 30-40 ವಾಣಿಜ್ಯ ಮಳಿಗೆಗಳನ್ನು ಕೇವಲ ಎರಡು-ಮೂರು ಸಾವಿರ ರೂ. ಬಾಡಿಗೆಗೆ ನೀಡಿದ್ದಾರೆ. ಮಾರುಕಟ್ಟೆ ಬೆಲೆ ಇದಕ್ಕಿಂತ ಹೆಚ್ಚಿರುವಾಗ ಇಷ್ಟು ಕಡಿಮೆ ಬಾಡಿಗೆಗೆ ಕೊಟ್ಟಿರುವ ಕಾರಣವೇನು ಎಂದು ಇಲ್ಲಿನ ಮುಸಲ್ಮಾನರು ಪ್ರಶ್ನಿಸುತ್ತಿದ್ದರೆ. ಸಮಾಜದ ಒಳಿತಿಗಾಗಿ ನವಾಜ ಖಾತುನ ಎಂಬ ಮಹಿಳೆಯ ಕೊಟ್ಟಿದ್ದ ಪ್ರದೇಶ ಹೀಗೆ ದುರುಪಯೋಗ ಆಗುತ್ತಿರುವುದನ್ನು ನೋಡಿ ಆ ಮಹಿಳೆ ತನ್ನ ಗೋರಿಯಲ್ಲಿ ಕಣ್ಣೀರಿಡುತ್ತಿರಬಹುದೇನೋ.

ಆಸ್ತಿ ಅಡವಿಟ್ಟು ಸಾಲ ಎತ್ತಿದ ಸವಣೂರ

ಸವಣೂರ ತಮ್ಮ ಅಧ್ಯಕ್ಷಾವಧಿಯಲ್ಲಿ ಮಾಡಿದ ಸಾಧನೆ ಎಂದರೆ ಎಂಜಿನಿಯರಿಂಗ್ ಕಾಲೇಜು ಪ್ರಾರಂಭಿಸಲು ಶೆರೆವಾಡ ಗ್ರಾಮದಲ್ಲಿ ಹತ್ತು ಎಕರೆ ಜಮೀನನ್ನು ಖರೀದಿಸಿದ್ದು. ಅದರೆ ಇದಕ್ಕಾಗಿ ಆತ ಅಂಜುಮನ್ ಸಂಸ್ಥೆಯ ಆಸ್ತಿಗಳನ್ನು ನೆಹರೂ ಕಾಲೇಜಿನ ಕಾಂಪೌಂಡ್‌ನಲ್ಲಿರುವ ಸೆಂಟ್ರಲ್ ಬ್ಯಾಂಕ್‌ಗೆ ಅಡವಿಟ್ಟು 60 ಲಕ್ಷಕ್ಕೂ ಅಧಿಕ ಸಾಲವನ್ನು ಮಡಿದರು. ಇನ್ನು ರಾಜ್ಯ ವಕ್ಫ್ ಬೋರ್ಡ್‌ನಿಂದ ಪಡೆದ 23 ಲಕ್ಷ ರೂ. ಸಾಲ, ಈ ಹಿಂದೆ ಪಡೆದಿದ್ದ 42 ಲಕ್ಷ ಸಾಲ ಹಾಗೆಯೇ ಇದೆ. ಒಟ್ಟು ಅಂಜುಮನ್ ಸಂಸ್ಥೆ ರಾಜ್ಯದ ವಕ್ಫ್ ಬೋರ್ಡ್‌ಗೆ ಮರುಪಾವತಿಸಬೇಕಾದ ಸಾಲದ ಮೊತ್ತವೇ 6[illegible] ಲಕ್ಷ ರೂಪಾಯಿ ಆಗಿದೆ.

ಬ್ಯಾಂಕಿನಿಂದ ಸಾಲವಾಗಿ ಪಡೆದಿದ್ದ ಹಣದಲ್ಲಿ 32.05 ಲಕ್ಷ ರೂಪಾಯಿಗಳನ್ನು ಪಾಲಿಟೆಕ್ನಿಕ್ ಕಾಲೇಜಿಗೆ ಮಷಿನರಿ ಖರೀದಿಗೆಂದೂ ಮತ್ತು ನೆಹರೂ ಪಿ.ಯು ಕಾಲೇಜ್ ಬ್ಲಾಕ್ ಒಂದರ ನಿರ್ಮಾಣಕ್ಕಾಗಿ ಸುಮಾರು 32 ಲಕ್ಷ ಖರ್ಚು ಮಾಡಿದ್ದಾಗಿಯೂ ಸವಣೂರ ಹೇಳುತ್ತಿದ್ದಾರೆ. ಆದರೆ ಆತನೇ ಹಳೇ ಹುಬ್ಬಳ್ಳಿ ಈದ್ಗಾಗೆ 37 ಲಕ್ಷ, ಶಾದಿ ಮಹಲ್‌ಗಾಗಿ 39 ಲಕ್ಷ, ಅಂಜುಮನ್‌ಗಾಗಿ 4[illegible] ಲಕ್ಷ, ಪಿಯು ಕಾಲೇಜಿಗಾಗಿ 91 ಲಕ್ಷ, ಆಸ್ಪತ್ರೆಗಾಗಿ ಎರಡು ಲಕ್ಷ ವೆಚ್ಚವಾಗಿದೆ ಎಂದು ಲೆಕ್ಕಪತ್ರಗಳನ್ನು ಕೊಟ್ಟಿದ್ದಾನೆ. ಇದೆಲ್ಲಾ ಆಡಿಟ್ ಮಾಡಿದಾಗ ಬಂದಾಗ ಆಡಿಟರ್ ಸವಣೂರರ ಮುಖಕ್ಕೆ ಉಗುಳಿಹೋಗಿದ್ದಾರೆ.

ಹೀಗೆ ಹಗರಣಗಳಲ್ಲಿ ಸಿಲುಕಿರುವ ಸವಣೂರ ಮತ್ತು ಹಿಂಡಸಗೇರಿ ಇವತ್ತು ತಮ್ಮ ಅಕ್ರಮ ಹಣವನ್ನೇ ಈ ಚುನಾವಣೆಯಲ್ಲಿ ಹೊಳೆಯಂತೆ ಹರಿಸುತ್ತಿದ್ದಾರೆ. ಮತದಾರರಿಗೆ ಬಿರಿಯಾನಿ ತಿನ್ನಿಸಿ ಅವರಿಂದ ತಮಗೆ ಬೆಂಬಲ ಇದೆಯೆಂದು ಆಣೆ ಪ್ರಮಾಣ ಮಾಡಿಸಿಕೊಳ್ಳುತ್ತಿರುವ ಇಂತಹವರಿಗೆ ಹುಬ್ಬಳ್ಳಿಯ ಪ್ರಜ್ಞಾವಂತ ಮುಸ್ಲಿಮರು ತಕ್ಕ ಪಾಠ ಕಲಿಸದೇ ಹೋದಲ್ಲಿ ಹುಬ್ಬಳ್ಳಿ ಅಂಜುಮನ್ ಸಂಸ್ಥೆ ಹರಾಜು ಆಗುವ ದಿನ ದೂರವಿಲ್ಲ.

– ಹುಬ್ಬಳ್ಳಿಯಾಂ[illegible]

ಈ ಸರಕಾರಕೂ ನಮಿಗೂ ಯಾವ ಸಮಂಧ ಇದ್ದತ್ಲ?

ಬಯಲುಸೀಮೆ ಕಟ್ಟೆಪುರಾಣ

• ಬಿ.ಚಂದ್ರೇಗೌಡ

ದನಗಳಿಗೆ ಹುಲ್ಲಿಲ್ಲ, ಕುಡಿಯಕ್ಕೆ ನೀರಿಲ್ಲ, ಗೇಳಸ? ಈ ಹಾಳು ಸರಕಾರಕೂ ನಮಿಗೂ ಯಾವ ಧವೂ ಇಲವಲ್ಲ ಹೇಳು" ಎಂದು ಕಾಳಮಾವ ದವನಂತೆ ಉದ್ಗರಿಸಿದ.

ಅಂಗೆ ಆಗ್ಯದೆ ಕಣಮಾವ" ಎಂದಳು ಜುಮ್ಮಿ.

ಕಾಳಮಾವ ಬೋದುದ್ದು ನಿನ್ನೂ ಸೇರಿಸಿ ಕಣೇ" ಉಗ್ರಿ.

ನಾನೇನು ಮಾಡಂಗಿದಿನ್ನ? ಪಂಚಾತಿ ದುಡ್ನು ನನ್ನ , ಹೋಗಿ ಹುಲ್ಲು ತಂದು ಹಂಚತಿದ್ದೆ."


ಹುಲ್ಲೆಲ್ಲಿಂದ ತಪ್ತಿಯೇ? ಹೋಗಬೇಕು ಗದ್ದೆ ಹಳ್ಳಿಗೆ."

ಅದೂ ನಿಜವೆ ಬುಡು. ಈಗ್ಯಾರು ಹುಲ್ಲು ದ್ದರೂ. ಯಲ್ಲಾರ ಹುಲ್ಲು ಕೊಪ್ಪಲು ಬಿದ್ದವೆ."

ಹುಲ್ಲುಕೊಪ್ಪಲು ನ್ಯನಿಸಿಗಂಡ್ರೆ ನಾಯ್ತದೆ ಕಣಮಾವ. ಆಗಿನ ಕೊಪ್ಪಲಲ್ಲಿ ಡಿ, ದಂಟಿನ , ಕರಿಬೇವಿನ ಇರವು. ಆದಕಿಂತ ಪ್ರರ ಹುಲ್ಲುಕ್ವಪ್ಲಲ್ಲಿ ಮಲ್ಲಿಗೆ ಬಳ್ಳಿ . ಅವೇನಾರ ಅರಳಿದ್ರೆ, ಆ ಇಡೀ ತ್ಯನೆ ಗಂ ಅನ್ನದು ಕಣೆ" ಎಂದು ಉಗ್ರಿ ಸ್ಸಗೊಂಡು ಕಳೆದುಹೋದ ಕೊಪ್ಪಲ ಬಗ್ಗೆ ಹೇಳುತ್ತಿರುವಾಗ ಮಾವ,

ಆಗಿನ ಕಾಲಕೆ ನಮ್ಮ ಕೊಪ್ಪಲಲ್ಲಿ ಒಂದು ಮಲ್ಲಿಗೆ ತ್ತಿ ಕಂಡ್ಯ. ಒಂದು ನಾಕು ಕಿತ್ತಗಂಡು ಜೇಬಲ್ಲಿ ಕಂಡಿದ್ರೇ ಅಂಗೆ ಯಂಗಾಗದು ಅಂತೀ. ಹೂವ ಈಶ್ವರೇಗೌಡ ಕುಯ್ಕಂಡು ಹೋಗಿ ಅವುನೆಡ್ತಿಗೆ ಮುಡಕಳೆ ಅಂತ ನಂತೆ. ಅವುನೆಡ್ತಿ ಒಂಥರಾ ಇವುಳು. ಹೊತ್ತು ಹೂ ಮುಡಕೊ ಅಂತ ದ್ದಿಯಲ್ಲಾ, ನಾನೇನು ನೆ ಅಂತ ಬೋದಲಂತೆ. ಅಂಗೆ ನಮ್ಮೆಂಗಸುರು ವು ಮುಡಕಳಕೂ ಗಳರು ಪಾಪ" ಎಂದ.

"ಆ ಸಮುಸ್ಕೃತಿಯಲ್ಲ ಹೋಯ್ತು ಕಣಮಾವ. ನಿದ್ರು ಸೀದಾ ಸಾದಾ ಮನಸ್ರು. ಒಂದ್ಯರಡು ನೈಟಿ ಸಾಕು ಹೆಂಗಸುರು ಯಂಗೋ ಕಾಲ ಹಾಕ್ತರೆ" ಉಗ್ರಿ ನಕ್ಕ.



"ಕಾಲ ಬದ್ಲಾಯ್ತು ಆದೆ ಕಂಡ್ಯ. ಇದ್ದಕ್ಕಿದ್ದಂಗೆ ಚೆಡ್ಡಿಗಳು ವಂಟೋದೊ. ಈಗ ತಿರಗ ಚೆಡ್ಡಿ ಬತ್ತಾ ಅವೆ. ಅದೂ ಮಂಡಿಂದ ಕ್ಯಳಿಕೆ" ಎಂದ ಸೀರ.

"ಈ ಬಿಜೆಪಿಗಳ ಚಡ್ಡಿಗಳೂ ಅಂತ ಕರಿತರಂತಲ್ಲ ಯಾಕ್ಲ?" ಎಂದಳು ಜುಮ್ಮಿ.

"ನಮ್ಮ ರೈತಾಪಿ ಜನಗಳಿಗೆ ಯಂಗೆ ಚೆಡ್ಡಿ ಒಂದು ಯೂನಿಫಾರಂ ಆಗಿತ್ತೊ, ಅಂಗೇ ಬಿಜೆಪಿಗಳಿಗೂ ಚೆಡ್ಡಿ ಯೂನಿಫಾರಮ್ಮು ಕಣೆ. ಚೆಡ್ಡಿ ಜಾತಿ ಮಾಡಿದೋನು ಗೋಳವಲಕರೊ ಅಥವ ಇನ್ಯಾವನೊ ವಬ್ಬ."

"ಅದ್ಯಾಕ್ ಮಾಡಿದಾ?"

"ನಮ್ಮ ದೇಶ ಸಲಿಕಲಿಸ್ಬು ಧರ್ಮನೂ ಸೇರಿಕಂಡಿರೊ ದೇಸ. ಹೆಚ್ಚುಕಮ್ಮಿ ಪ್ರಪಂಚದ ವಳ್ಳೆ ಧರಮಗಳ್ಯಲ್ಲ ಇಲ್ಯವೆ. ಅವಿರದರಿಂದ ದೇಶ ಹಿಂಗ ಮುಸ್ಲಿಮರು, ಕಿರುಸ್ತಾನ್ರು, ಬೌದ್ದರೂ, ಇವುರ್ಯಲ್ಲ ಬ್ಯಳಕಂಡ್ರೆ ನಮ್ಮ ಕತಿ ಏನೂ ಅಂತ ಪುರೋಹಿಂತರ್ಯಲ್ಲ ಸೇರೀ ಆರೆಸಸ್ಸೆಸ್ ಮಾಡಿಕಂಡವುರೆ. ಯಾಕಪ್ಪಾ ಅಂದ್ರೆ ನಮ್ಮದು ಹಿಂದೂ ದೇಶ, ಇಲ್ಲಿ ನಾವೇ ಸಾರ್ವಭೌಮರು, ನಾವು ಆಳಬೇಕು, ಬೇರೆ ಧರ್ಮದವರು ಆಳಿಸಕಬೇಕು ಅಂತ ತೀರ್ಮಾನ ತಗಂಡ್ರು. ಅಂತ ತೀರ್ಮಾನ ತಗಂಡು ಸುಮ್ಮನಿರಕ್ಯಾದತೆ?"

"ಏನಾರ ಮಾಡಬೇಕಾಯ್ತದೆ."

"ಏನಾರ ಮಾಡಕ್ಕೆ, ಕಾರ್ಯಕರ್ತರು ಬ್ಯಾಡವೆ? ಅದ್ಕೆ ಆರೆಸ್ಸೆಸ್ ಮಾಡಿ, ಅವುರಿಗ್ಯಲ್ಲ ಈ ದೇಶದಲ್ಲಿ ನಾವೇನು ಮಾಡಬೇಕು, ಯಂಗಿರಬೇಕು, ಅಂತ ಕಲಿಸಿಕೊಡ್ತರೆ."

"ಸಾಬರಲ್ಲೂ ಅಂಗೆ ಮಾಡ್ತರಂತಲ್ಲಾ, ಎಲ್ಲಿ ಬಾಂಬಾಕಬೇಕು, ಯಂಗಾಕಬೇಕು, ಹಾಕಿದ ಮ್ಯಾಲೆ ಏನು ಮಾಡಬೇಕು ಅನ್ನದ ಹೇಳಿಕೊಟ್ಟರಂತೆ" ಎಂದ ಸೀರ.

"ಇವುರು ಅದರಲ್ಯಲ್ಲ ನಂಬಿಕೆ ಇಟ್ಟಿಲ್ಲ ಕಣೊ. ಇವುರ ಕಾರ್ಯಾಚರಣೆನೆ ಬ್ಯಾರೆ. ಸೀರಮಾವ, ಕಾಳಮಾವ, ಇಂಥೋರ ಮಕ್ಕಳ ಹಿಡಕಂಡೋಗಿ ಚೆಡ್ಡಿ ಹಿಕ್ಕಿ, ಲಾಠಿ ಕೊಟ್ಟು, ಹಿಂದೂ ದೇಶ ಯಂಗೆ ಕಟ್ಟಬೇಕು ಅಂತ ಹೇಳಿಕೊಡ್ತರಂತೆ. ಅಂಗೆ ತಯಾರು ಮಾಡೊ ಜನಕ್ಕೆ ಒಂದು ಯೂನಿಫಾರಂ ಆದೇ. ಅದೇ ಚೆಡ್ಡಿ. ಚೆಡ್ಡಿ ಹಿಕ್ಕಂಡು, ಲಾಠಿ ಬೀಸಿಕಂಡು ಒಳ್ಳೆ ಶಿಸ್ತಿನ ಸಿಪಾಯಿ ಆಗಿ ತಯಾರಾ ದೋನಿಗೆ ಬಿಜೆಪಿ ಟಿಕೆಟ್ ಕೊಟ್ಟು ಎಮ್ಮೆಲ್ಲೆ ಮಾಡ್ತದೆ. ಈಗ ಹಾಲಿ ಇರೊ ಬಿಜೆಪಿ ರಾಜಕಾರಣಿಗಳ್ಯಲ್ಲಾ ಅಂಥಾ ಶಿಸ್ತಿನಿಂದ ಬೆಳೆದು ಒಂದೋರೆಯಾ ಗೊತ್ತೆ."

"ಅಂಥಾ ಶಿಸ್ತಿನ ಜನ ಜಗಳ ಸುರುಮಾಡಿಕಂಡು ನಾಕೊಸರ್ಾಯ್ತುಕಂಡ್ಲಾ."

"ಜಗಳಾ ಆಡದ್ರಲ್ಲಿ ಯರಡು ಟೈಪ್ ದೊಡಪ್ಪ" ಎನ್ನುತ್ತಾ ವಾಟಸ್ಸೆ ನುಗ್ಗಿದ.

"ನಿಂದ್ಯಾವ ಟೈಪ್ ಜಗಳನಪ್ಪ?"

"ನೋಡಕ್ಕಾ, ಈ ಸಮಾಜಕ್ಕೆ ಒಳ್ಳೆದಾಗ್ಲಿ ಅಂತ ಜಗಳಾಡದು ಬೇರೆ. ಅದು ಶ್ರೇಷ್ಠವಾದ ಸಾಮಾಜಿಕ ನ್ಯಾಯದ ಜಗಳ. ಆದ್ರೆ ಈ ಬಿಜೆಪಿಗಳು ಆಡಿದ ಜಗಳ ಹಂಡ್ರೆಡ್ ಪರಸೆಂಟು ಸ್ವಾರ್ಥದಿಂದ, ಮೂರ್ಖತನದಿಂದ ಕೂಡಿರೊ ಜಗಳ."

"ಅದೇನೊ ನಿಜ. ಇವುರೇನೊ ಶಿಸ್ತಿನ ಜನ ಅಂತ ಉಗ್ರಿ ಹೇಳತಿದ್ದ."

"ಸಾಮಾನ್ಯವಾಗಿ ಕೆಟ್ಟ ಜನಗಳು ಶಿಸ್ತಾಗಿರತರೆ. ಬೆಳಿಗ್ಗೆ ಎದ್ದು ಸ್ನಾನ ಮಾಡಿ, ದೇವರಪೂಜೆ ಮಾಡಿ, ತಿಂಡಿತಿಂದು ಯಾರು ಮನೆ ಹಾಳ ಮಾಡ್ಲಿ ಅಂತ ಹೊರಡೊ ಜನಗಳೂ ಅವುರೆ. ಹಲ್ಲುನು ಉಜ್ಜದೆ, ಮಖನೂ ತೊಳಿದೆ, ಸಾರ್ವಜನಿಕರ ಸೇವೆ ಮಾಡಕ್ಕೆ ಹೊರಡೊ ಜನಗಳೂ ಅವುರೆ. ಇವುರು ಮೊದಲನೆ ಜನ, ಮೂಲಸ್ವಾರ್ಥಿಗಳು. ಅವುರಿಗೆ ಅತಿವೃಷ್ಟಿಯಾಗ್ಲಿ, ಅನಾವೃಷ್ಟಿಯಾಗ್ಲಿ ಮುಖ್ಯ ಅಲ್ಲ. ಅವುರ ಹಟನೇ ಮುಖ್ಯ. ಇದೇನು ಕರ್ನಾಟಕಕ್ಕೆ ಹ್ವಸದಲ್ಲ, ಹಿಂದೆ ನೋಡಿದ್ದಿವಿ."

"ಇಂತ ಜನ ಈಗ್ಲೆ ಕಂಡ್ಯ ನೋಡಿದ್ದು."

"ದೊಡಪ್ಪ ನಿನಿಗೆ ಮರತೋಗಿದ್ರೆ ಜ್ಞಾಪುಸ್ತಿನಿ. ಆಗೊಂದ ಸತಿ ರಾಮಕೃಷ್ಣ ಹೆಗಡೆ ಚೀಫ್ ಮಿನಿಷ್ಟ್ರಾಗಿದ್ದಾಗ ದ್ಯಾವೇಗೌಡ್ರು ಇದೇ ಎಡೂರಪ್ಪನ ತರ ತಿರುಗಿಬಿದ್ದಿದ್ರು. ಸುಮಾರು ಆರು ತಿಂಗಳ ಕಾಲ ನ್ಯಡಿತು. ಇಲಾಖೆ ಅಧಿಕಾರಿಗಳು ರಾಜ್ಯಭಾರ ಮಾಡಿದ್ರು. ಮಿನಿಷ್ಟ್ರ ಬರೀ ಕಲಕ್ಷನ್ ಮಾಡಿದ್ರು. ಬೊಮ್ಮಾಯಿ ಚೀಫ್ ಮಿನಿಷ್ಟ್ರ ಆಯ್ತನೆ ಅಂತ ಗೊತ್ತಾಗಿ, ದ್ಯಾವೇಗೌಡ್ರು ರಾಚಯ್ಯನ್ನ ಮುಖ್ಯಮಂತ್ರಿ ಮಾಡಕ್ಕೆ ಹೊಂಟಿದ್ರು. ಆ ರಾಚಯ್ಯ ಥೇಟ್ ಜಗದೀಶ್ ಶೆಟ್ಟರ್ ತರ ಇದ್ದ. ಸಾಧಾರಣವಾದ ಮನುಸುನಿಗೆ ತಡಿಯಕ್ಯಾಗದೆಯಿರೊ ಸಿಟ್ಟು ಯಾವಾಗ ಬತ್ತದೆ ಅಂದ್ರೇ ತಾನು ನೇಮಕ ಮಾಡಿದ ಮನ್ಸ ತನ್ನ ಮಾತ ಕೇಳದಾಗ. ಅದೇನೇ ಆಗ್ಲಿ, ಎಡೂರಪ್ಪ, ವಳಗಿದ್ದ ಕಂಡೇ ಬಿಜೆಪಿ ಗೂಢಾರ ಕುಯ್ತನಲ್ಲ, ಅದು ಗ್ರೇಟ್."

"ಅಂತೂ ದ್ಯಾವೇಗೌಡನಿಂದ ದಳ ಹಾಳಾದಂಗೆ ಎಡೂರಪ್ಪನಿಂದ ಬಿಜೆಪಿ ಹಾಳಾಗೋಯ್ತದೆ ಅನ್ನು."

"ಅಂಗೇಳಕ್ಕೆ ಬರದಿಲ್ಲ ಕಣೊ ಉಗ್ರಿ. ಬಿಜೆಪಿಗೆ ಪುರೋಹಿತಶಾಹಿ ಹಾಕಿದ ಬೇಸ್‌ಮೆಂಟ್ ಮೇಲೆ ಕಟ್ಟಿರೊ ಕೇಶವಕೃಪಾಗಳವೆ. ಅಂತದ್ದು ದಳಕ್ಕೆ ಎಲ್ಲಿದ್ದತೂ? ಆ ಹೆಗಡೆ, ಪಟೇಲ್ರು ಹೋದ ಮೇಲೆ ಜೆಡಿಯು ಹೊಂಟೋಯ್ತು, ದ್ಯಾವೇಗೌಡ್ರು ಹೋದಮ್ಯಾಲೆ ಜೆಡಿಎಸ್ ಹೊಂಟೋಯ್ತದೆ. ಆದ್ರೆ ಬಿಜೆಪಿ ಮಾತ್ರ ಅಂಗೆ ಇರತದೆ ಕಣೊ."

"ಅಂಗಂತಿಯಾ?"

"ಊ ಮತ್ತೆ, ಬಿಜೆಪಿ ಸಾಯಕ್ಕೆ ಯಾವುದೇ ವ್ಯಕ್ತಿ ಮ್ಯಾಲೆ ನಿಂತಿಲ್ಲ. ಎಡೂರಪ್ಪನಿಂದ ಪವರ್ರಿಗೆ ಬತ್ತು ಮುಂದೆ ಅವುನಿಂದ್ಲೆ ಅಧಿಕಾರ ಕಳಕತ್ತರೆ. ಆದ್ರೆ ಜೆಡಿಯುನಂಗೆ ನಿರ್ನಾಮ ಆಗದಿಲ್ಲ ತಿಳಕೊ."

"ಆದ್ರು ಜೆಡಿಎಸ್ ಹಾಳಾಗಕ್ಕೆ ಬುಡಬಾರ್ದು ಕಣೊ. ಅಂತದೊಂದು ಅಡ್ಡೆಬುಡಕ ಪಾರ್ಟಿ ಇದ್ರೆ ಮಾತ್ರ ಬಿಜೆಪಿ ಹದ್ದುಬಸ್ತಲ್ಲಿಟ್ಟಿರಬವುದು."

"ಪರವಾಗಿಲ್ಲ ಕಣೊ ಉಗ್ರಿ, ನೀನೂ ಸೋಷಲಿಸ್ಟ್ರ ತರ ಮಾತಾಡ್ತಿ. ದಳ ಸ್ಟ್ರಾಂಗಾದ್ರೆ ಬಿಜೆಪಿ, ಕಾಂಗ್ರೆಸ್ಸು ವೀಕಾಯ್ತವೆ. ಆಗ ದಳ ಹೇಳಿದಂಗೆ ಕೇಳತವೆ. ಒಳ್ಳೆ ಸರ್ಕಾರ ಕೊಟ್ರು ಕೊಡಬವುದು. ಅದ್ರಿಂದ ತಕ್ಕಡಿ ಮದ್ಯ ಕದ್ದಿತರ ದಳ ಇರಬೇಕಾಯ್ತದೆ."

"ಸರಿಯಪ್ಪ ನೀನಂಗಂತಿ. ಇದ್ದ ಇಪ್ಪತ್ತಿಂಗಳಲ್ಲಿ ಕುಮಾರಸ್ವಾಮಿ ಡಿನೋಟಿಫಿಕೇಶನ್ ಹಗರಣ ಮಾಡ್ಯವುನೆ. ಅಣ್ಣಂದಿರ ಆಸ್ತಿ ಬ್ಯಳಿಯಂಗೆ ಮಾಡ್ಯವುನೆ. ಕೆಪಿಎಸ್ಸಿ ಕೃಷ್ಣ ಅಪ್ಪಾಮಕ್ಕಳು ಹೇಳಿದೋರ ಪಾಸು ಮಾಡಂಗೆ ಮಾಡ್ಯವುರೆ. ರಾಧಿಕನ್ನ ಕಟಗಂಡವುನೆ. ಇಂತವುನ್ಯಲ್ಲ ಎಡೂರಪ್ಪ ದೊಡ್ಡದಾಗಿ ಮಾಡಿ ಸಿಗಾಯ್ಕಂಡ. ಆದ್ರೆ ಕುಮಾರಣ್ಣ ಸಿಗಾಯ್ಕಂಡಿಲ್ಲ. ಅಂಥಾ ಬಗಿಸಿಗೆ ಜೆಡಿಎಸ್ ಯಾಕಿರಬೇಕೊ ಅಂತ್ಲೂ ಅನ್ನುಸ್ತದೆ."


"ಯಾಕೆ ಅಂದ್ರೆ ಬಿಜೆಪಿಗಳು ಬ್ಯಳದು ಇಡೀ ಕರ್ನಾಟಕನೆ ಸರ್ವನಾಶ ಮಾಡದಂಗೆ ತಡಿಬೇಕಾದ್ರೆ ಜೆಡಿಎಸ್ ಇರಬೇಕು. ಅದು ತಕ್ಕಮಟ್ಟಿಗೆ ಬ್ಯಳಿಕಂಡಿರಬೇಕು. ಸರಿಯೆ ದ್ವಡಪ್ಪ ನಾನೇಳದು?"

"!?"


ಹೊಗೆಯ ಗುಂಗಿನಲ್ಲಿ ▶▶▶

ಈಗ ಅಲ್ಲಿಯ ಖಳ ಸಿಗರೇಟ್ ಸೇದುವವನು. ಹೊಟೇಲ್‌ನಲ್ಲಿ ಕೂತೊಡನೆ ಸಿಗರೇಟ್ ಹಚ್ಚಿ ಸ್ವರ್ಗವನ್ನು ವನಂತೆ ತೇಲುಗಣ್ಣು ಮೇಲುಗಣ್ಣು ಮಾಡುತ್ತಿದ್ದ ಈ ಧೂಮಪಾನಿಗೆ ಈಗ ಕೆಟ್ಟ ಕಾಲ. ಸುಮಾರು ಹದಿನೈದು ದಿಂದ ಅಧ್ಯಾಪಕರು, ಡಾಕ್ಟರು, ಪೂಜಾರಿಗಳು, ಸಮಾಜಸುಧಾರಕರು ಸಿಗರೇಟನ್ನು ಖಂಡಿಸುತ್ತಲೇ ಇದ್ದಾರೆ. ರೆ ಸಿಗರೇಟಿನ ಕಂಪನಿಗಳು ಅಮೆರಿಕಾ, ಇಂಗ್ಲೆಂಡ್, ಫ್ರಾನ್ಸ್ ದೇಶಗಳಲ್ಲಿ ಎಷ್ಟು ಪ್ರಬಲವಾಗಿವೆ ಎಂದರೆ ಮಪಾನ ವಿರೋಧಿಸುವವರು ವಿರೋಧಿಸುತ್ತಲೇ ಇದ್ದರು; ಸಿಗರೇಟ್ ಕಂಪನಿಗಳು ಸಿಗರೇಟನ್ನು ಮಾರಿಸಿ ಕೋಟ್ಯಂತರ ಹಣ ಮಾಡುತ್ತಲೇ ಇದ್ದವು. ಕೆಲವರು ಡಾಕ್ಟರುಗಳು ಸಿಗರೇಟ್ ಮವುದರಿಂದ ಕ್ಯಾನ್ಸರ್ ಬರುತ್ತೆ, ಡಯಾಬಿಟಿಸ್ ಉಲ್ಬಣಗೊಳ್ಳುತ್ತೆ, ಅಸ್ತಮಾ ತೀವ್ರವಾಗುತ್ತೆ, ಖಸೋವು ಹೆಚ್ಚಾಗುತ್ತೆ–ಎಂದು ಹೇಳುತ್ತಲೇ ಇದ್ದರು. ಆದರೆ ಅಷ್ಟೇ ಜನ ವೈದ್ಯರು ಗರೇಟಿನಿಂದ ಇವೆಲ್ಲ ಕಾಯಿಲೆ ಬರುತ್ತೆ, ಜಾಸ್ತಿಯಾಗುತ್ತೆ ಎಂದು ಹೇಳಲು ಅಂಥ ವಾವೆಗಳಿಲ್ಲ' ಎಂದು ವಾದಿಸುತ್ತಲೇ ಇದ್ದರು. ಹೀಗೆ ವಾದ–ವಿವಾದ ನಡೆಯುತ್ತಿದ್ದಾಗ ಕ ಸಾರ್ವಜನಿಕ ಜಾಗಗಳಲ್ಲಿ ಧೂಮಪಾನವನ್ನು ನಿಷೇಧಿಸಲಾಯಿತು. ವಿಮಾನದಲ್ಲಿ ದುವಂತಿಲ್ಲ, ಆಸ್ಪತ್ರೆ, ಕಚೇರಿ, ಪೋಸ್ಟಾಫೀಸು, ರೈಲ್ವೇ ಸ್ಟೇಷನ್, ಬಸ್‌ಸ್ಟ್ಯಾಂಡ್, ಬಸ್‌ನಲ್ಲಿ ಯಲ್ಲಿ ಎಲ್ಲೂ ಸೇದುವಂತಿಲ್ಲ, ಮನೆಗೆ ಬಂದರೆ ಸಿಗರೇಟ್ ಹಚ್ಚಿದರೆ ಹೆಂಡತಿ ಬೈಯುತ್ತಾಳೆ. ಸಿಗಳಲ್ಲಿ ಸಹೋದ್ಯೋಗಿಗಳು ಧೂಮಪಾನಿಯನ್ನು ಖಳನಾಯಕ ಎನ್ನುವಂತೆ ನೋಡುತ್ತಾರೆ. ಗೆ ಸಿಗರೇಟ್ ಸೇದುವುದಕ್ಕೆ ಉಳಿದದ್ದು ಖಾಸಗಿ ಶೌಚಾಲಯ ಮಾತ್ರ. ಅವಿವಾಹಿತರು ರೂಮ್‌ಗಳಲ್ಲಿ ಸೇದಬಹುದಿತ್ತು, ವಿದ್ಯಾರ್ಥಿಗಳು ಗೋಡೆಯ ಮರೆಯಲ್ಲಿ ಹಚ್ಚುತ್ತಿದ್ದರು. ದ ಸಿಗರೇಟ್ ಸೇದುವ ದೇಶಗಳೇ ಇದ್ದವು. ಚೈನಾದಲ್ಲಿ ಮುಂಚಿನಿಂದಲೂ ಸಿಗರೇಟ್ . ಅಲ್ಲಿಯ ಅತಿಥಿ ಸತ್ಕಾರದ ಒಂದು ಮುಖ್ಯ ಭಾಗವೇ ಸಿಗರೇಟ್ ಕೊಡುವುದು. ದೊಡ್ಡ ಗಳ ಸಭೆಗಳಲ್ಲಿ ಟೀ, ಸಿಗರೇಟ್, ಬೆಂಕಿಪೊಟ್ಟಣ ಇಟ್ಟಿರುತ್ತಾರೆ. ಹಾಗೆಯೇ ಜಪಾನ್. ಜಪಾನ್‌ನ ಪಾನ ಚೈನ್ ಧೂಮಪಾನಿ. ಅದನ್ನು ಜನ ಅಷ್ಟಾಗಿ ಖಂಡಿಸುವುದಿಲ್ಲ, ಪ್ರಧಾನಿಯೂ ಕೇರ್ ಮಾಡುವುದಿಲ್ಲ. ಡಿಯಾ, ಥೈಲ್ಯಾಂಡ್, ಬರ್ಮಾಗಳೆಲ್ಲ ಧೂಮಪಾನದ ದೇಶಗಳು.

ಅಮೆರಿಕದಲ್ಲಿ ಈಗ ದೊಡ್ಡ ಯುದ್ಧವೇ ನಡೆಯುತ್ತಿದೆ. ತಲತಲಾಂತರದಿಂದ ಸಿಗರೇಟ್ ಪರ, ವಿರೋಧಿಗಳ ಇದ್ದನ್ನು ಈಗ ಸಿಗರೇಟ್ ಶತ್ರುಗಳ ಜಯದಲ್ಲಿ ಕೊನೆಗೊಳ್ಳುತ್ತಿದೆ. ಅಮೆರಿಕದ ಪಾರ್ಲಿಮೆಂಟ್ ಸಿಗರೇಟ್ ಧಿಸಲು ಅನಿವಾರ್ಯವಾಗುತ್ತಿದೆ. ಅಲ್ಲಿಯ ದೊಡ್ಡ ವಿಷಾದ, ಅಮೆರಿಕದಲ್ಲಿ ಈಗ ಲಕ್ಷಾಂತರ ಜನ ಸಿಗರೇಟ್ ಸಂಬಂಧದ ಕಾಯಿಲೆಗಳಿಂದ ಸಾಯುತ್ತಿದ್ದಾರೆ. ಹಾಗೆ ಹೇಳಿದಾಗಲೆಲ್ಲಾ ಪ್ರತಿಭಟಿಸುತ್ತಿದ್ದ ಸಿಗರೇಟು ಕಂಪನಿಗಳು ಈಗ ಸುಮ್ಮನಾಗಿವೆ; ಸಂತಾಪದಿಂದ ಮೌನಿಯಾದಂತೆ ಕಾಣುತ್ತಿವೆ.



ಸಿಗರೇಟ್ ಸೇದುವುದು...ಮಾನವಂತರ ಲಕ್ಷಣವಲ್ಲ, ಇನ್ನೊಬ್ಬನ ಬಗ್ಗೆ ಕಾಳಜಿಯುಳ್ಳ ಪ್ರತಿಯೊಬ್ಬನೂ ಮುಗುಳ್ನಗುತ್ತಾ ಎಲ್ಲರ ಯೋಗಕ್ಷೇಮ ವಿಚಾರಿಸುತ್ತಾ ಅಮೆರಿಕಾ ಸರ್ಕಾರ ಹಾಕಿಕೊಟ್ಟ ದಾರಿಯಲ್ಲಿ ನಡೆಯಬೇಕು; ವಿಚಾರವಂತಿಕೆ, ಹಣ ಮಾಡುವ ಆಕಾಂಕ್ಷೆ, ಕ್ರೀಡೆಗಳಲ್ಲಿ ಗೆಲ್ಲುವ ಛಲ, ಯುದ್ಧದಲ್ಲಿ ಹೋರಾಡುವ ಧೈರ್ಯ, ಅಧ್ಯಾಪಕರುಗಳಿಗೆ ವಿಧೇಯತೆ, ಪುರೋಹಿತರಿಗೆ ಗೌರವಾರ್ಪಣೆ; ಮಾರ್ಕ್ ಟ್ವೇನ್, ಫಾಕ್‌ನರ್, ಹೆಮಿಂಗ್ವೆ ಬಗ್ಗೆ ಅಭಿಮಾನ... ಇಲ್ಲಿ ಕಷ್ಟ ಶುರುವಾಗುತ್ತದೆ. ಸಾಹಿತಿಗಳಾದ ಮಾರ್ಕ್ ಟ್ವೇನ್, ಹೆಮಿಂಗ್ವೆ, ಫಾಕ್‌ನರ್‌ಗಳೆಲ್ಲಾ ಭಯಂಕರ ಧೂಮಪಾನಿಗಳು. ಮದ್ಯಪಾನದ ಜೊತೆಗೆ ಧೂಮಪಾನ ಆನಂದಿಸುತ್ತಿದ್ದರು. ಹಾಗೆಯೇ ಮಾನವ ಪ್ರೇಮಿಗಳು. ಅಮೆರಿಕದ ಅತ್ಯಂತ ಗೌರವಾನ್ವಿತ ಅಧ್ಯಕ್ಷ ಫ್ರಾಂಕ್ಲಿನ್ ರೂಸ್‌ವೆಲ್ಟ್ ಕಪ್ಪು ಕಾರ್ಯದರ್ಶಿಯ ಪ್ರೇಮಕ್ಕೆ ಸ್ಪಂದಿಸಿದವನು. ಇದು ವ್ಯಭಿಚಾರವಲ್ಲ, ಧೂಮಪಾನ ನಿಷಿದ್ಧವಲ್ಲ.



ಯೋಚಿಸುತ್ತಾ ಹೋದರೆ ಈ ಅಮೆರಿಕನ್ನರ ತೆವಲು ನಗೆ ತರಿಸುತ್ತದೆ. ಹೀಗೆ ಕೂಗಾಡುವ ಈ ಅಮೆರಿಕಾ ಶುರುಮಾಡುವ ಯುದ್ಧದಲ್ಲಿ ಭಾಗವಹಿಸುವ ಇಷ್ಟ ಯಾರಿಗೂ ಇರುವುದಿಲ್ಲ. ಇವರ ಅನೇಕ ಜಾಗಗಳು ವ್ಯಭಿಚಾರದ ಜಾಗಗಳಾಗಿವೆ. ಇವರ ಅನೇಕ ಆಫೀಸುಗಳು ಮಾಫಿಯಾಗಳ ಆಶ್ರಯದಲ್ಲಿ ನಡೆಯುತ್ತಿವೆ.

ಮನುಷ್ಯ ತನ್ನ ವಾಂಛಲ್ಯಗಳನ್ನು ನೋಡಿಕೊಂಡು ತನ್ನ ದೇಹ ಮತ್ತು ಮನಸ್ಸು ಏನನ್ನು ಇಷ್ಟಪಡುತ್ತದೆ, ಯಾವುದನ್ನು ಎಷ್ಟು ಸ್ವೀಕರಿಸಿದರೆ ಎಲ್ಲಿ ಹದಗೆಡುತ್ತದೆ ಎಂದು ನೋಡಿಕೊಂಡು ನಡೆದರೆ ಒಳ್ಳೆಯದು. ಮಹಾ ಚಡಪಡಿಕೆಯ, ಒತ್ತಡಗಳಲ್ಲಿ ಖಿನ್ನನಾಗಿರುವ ಮನುಷ್ಯನಿಗೆ ಒಂದು ಸಿಗರೇಟ್ ಕೊಡುವ ಸುಖವನ್ನು ಕೋಟ್ಯಂತರ ಡಾಲರ್ ಕೊಡಲಾರದು. ಇದು ಆಶ್ಚರ್ಯಕರವಾದರೂ ನಿಜ. ಒಂದೇ ಒಂದು ಸಿಗರೇಟ್ ಆ ಕ್ಷಣದ ಅಮೂಲ್ಯ ವಸ್ತು. ಇದನ್ನರಿಯದ ಇಲ್ಲಿಯ ಸುಧಾರಕರು, ಪುರೋಹಿತರು, ಉಪನ್ಯಾಸಕರು ಮಹಾ ಪೆದ್ದುಗಳಾಗಿ ಹಾಸ್ಯಾಸ್ಪದರಾಗುತ್ತಾರೆ. ಹಾಗೆಯೇ ಎಳೆಯರ ಪ್ರತಿಭಟನೆಗೆ ಕಾರಣರಾಗುತ್ತಾರೆ. ಸರಿಯಪ್ಪ ನೀನು ಸತ್ಯ, ನಿನಗೆ ಇಲ್ಲಿಯ ಸೋಗಲಾಡಿತನ, ಹಿಂಸೆ, ಅನ್ಯಾಯ, ಪರದೇಶಗಳ ಶೋಷಣೆ, ಇಡಿದೇಶದ ಶುಲಿಗೆ–ಎಲ್ಲವೂ ಸಹಜವಾಗಿ ಕಾಣುತ್ತವೆ. ನೀನು ಇದನ್ನೆಲ್ಲ ಸಹಿಸಿ ನೂರು ವರ್ಷ ಬದುಕುತ್ತೀ. ನೀನು ಸುಸ್ತಾಗುವ, ಕಾಯಿಲೆ ಅನುಭವಿಸುವ, ಸಿಗರೇಟಿನ ಖುಷಿ ಅನುಭವಿಸುವ ಹಕ್ಕನ್ನೇ ಬಿಟ್ಟುಕೊಟ್ಟು ಸರ್ಕಾರದ, ಸನ್ನದ್ಧರನ್ನಿಸಿಕೊಂಡ ಕೇಡಿಗಳ, ಜನಪ್ರಿಯವೆನ್ನಿಸಿಕೊಂಡ ಖಳರ, ರಾಜಕಾರಣಿಗಳೆಂಬ ಭ್ರಷ್ಟರ ಕೈಗೊಂಬೆಯಾಗಿದ್ದೀ. ಯುವ ಜನಾಂಗ ಹೀಗೆನ್ನುತ್ತದೆ.

-ಜುಲೈ 9, 1997

ಕುರಿ ಕಾಯ್ದು ತೋಳ!

ಬೆಂಗಳೂರು ನಗರ ಪಾಲಿಕೆಯಲ್ಲಿ ಹಣವೇ ಇಲ್ಲ, ಪಾಪರ್ ಆಗಿದೆ. ದೈನಂದಿನ ಖರ್ಚಿಗೂ ತಿಣುಕಾಡಬೇಕಾದ ಪರಿಸ್ಥಿತಿ ಇದೆ. ಆದುದರಿಂದ ತನ್ನ ಸ್ವಂತ ಕಟ್ಟಡಗಳನ್ನು ಬ್ಯಾಂಕಿನಲ್ಲಿ ಅಡ ಇಟ್ಟು ಸಾಲ ಪಡೆಯಬೇಕಾದ ಅನಿವಾರ್ಯತೆ ಉಂಟಾಗಿದೆ ಎನ್ನುವುದನ್ನು ಪತ್ರಿಕೆಗಳಲ್ಲಿ ಓದಿದ್ದೆ. ಇದನ್ನ ನೋಡಿದರೆ ಕರೆಯುವ ಹಸು ಮಾರಿ ಮಾರಿಗೆ ಹಾಲು ತಗೊಂಡಾಗಾಯಿತಲ್ಲಾ, ಹಸು ಇರುವತನಕ ಹೀಗೆ ಮಾಡಬಹುದು. ಅದೇ ಇಲ್ಲದಂತಾದಾಗ ಏನು ಮಾಡುತ್ತದೆ ಎನ್ನುವ ಆಲೋಚನೆ ಬಾರದಿರಲಿಲ್ಲ.


ಈಗ ಒಂದು ಸುದ್ದಿ ಬಂದಿದೆ. ಅದೂ ಆ ಪಾಲಿಕೆಗೆ ಸಂಬಂಧಿಸಿದ್ದು. ಅದೇನು ಅಂದರೆ ತನ್ನ ನೌಕರರಿಗೆ ಪ್ರತಿ ತಿಂಗಳು ಸಂಬಳ ನೀಡಬೇಕಲ್ಲಾ ಅದನ್ನ ಅವರವರ ಹೆಸರಿಗೆ ಬ್ಯಾಂಕಿನಲ್ಲಿ ಜಮಾ ಮಾಡುತ್ತಂತೆ. ಮೇ ತಿಂಗಳ ಸಂಬಳಾನ ಜೂನ್ ತಿಂಗಳಲ್ಲಿ ಮಾಡಬೇಕಿತ್ತು, ಜೂನ್ ಹನ್ನೊಂದನೆ ತಾರೀಖು ಹಾಗೆ ಮಾಡಿತಂತೆ.

ಸಂಬಳ ದಿನವಲ್ಲವಾ. ಎಲ್ಲರಿಗೂ ತರಾತುರಿ. ದಡ್ಡು ಅನ್ನುವುದು ಹಾಗಿರುತ್ತೆ. ಯಾವ ಯಾವ ಬಾಬಿನವು ಇದರ ಹಣಕ್ಕೆ ಬಾಯಿತೆರೆದು ಕುಳಿತಿರುತ್ತವೊ ಅವಕ್ಕೆಲ್ಲ ಅಷ್ಟೋ ಇಷ್ಟೋ ಹಾಕಿ ಸಮಾಧಾನಪಡಿಸಬೇಕಾಗುತ್ತೆ. ಸಂಬಳ ಆಗಿದೆ ಎಂದು ತಿಳಿದ ತಕ್ಷಣ ಬ್ಯಾಂಕಿಗೆ ಮುತ್ತಿಗೆ ಹಾಕುತ್ತಾರೆ. ಹಣ ಪಡೆದ ನಂತರ ಪಾಸ್‌ಬುಕ್ ಎಂಟ್ರಿ ಆಗಬೇಕಲ್ಲಾ, ಅದು ಅವತ್ತು ಆಗಲ್ಲ, 'ರಶ್ ಇದೆ. ನಾಳೆ ಬನ್ನಿ' ಅಂದಿರ್ತಾರೆ ಬ್ಯಾಂಕಿನವರು. ಮಾರನೆ ದಿನ ಹೋಗಿದ್ದಾರೆ. ಆಶ್ಚರ್ಯ! ತಮ್ಮ ಹೆಸರಿಗೆ ಮತ್ತೆ ಸಂಬಳ ಜಮಾ ಆಗಿದೆ!

ಮೊಗೆದಷ್ಟೂ ನೀರು ಬರುತ್ತದೆ ಎಂದರೆ ಎಂತಹವರಿಗೂ ಸಂತೋಷ ಆಗುವಂತಹದ್ದು. ಸಿಬ್ಬಂದಿನೂ ಖುಷಿ ಖುಷೀಲಿ ಇದ್ರಂತೆ. ಹೆಂಡತಿಗೆ, ಸಾಲಗಾರರಿಗೆ ತಿಳಿಯದ ಹಾಗೆ ಇದರ ?ಸದ್ವಿನಿಯೋಗ?. ಹೇಗೆ ಮಾಡುವುದು ಎಂದೂ ಚಿಂತಿಸಿರಬಹುದು. ಸಾಲ ಮಾಡಿ ಕಾಲ ನೂಕುವ ಪಾಲಿಕೆ ಹೀಗೆ ಮಾಡಿದೆಯಲ್ಲ, ತಿಂಗಳಿಗೆ ಹೀಗೆ ಎರಡೆರಡು ಸಲ ಸಂಬಳ ನೀಡುವ ಬುದ್ಧಿ ಕೊನೆಯವರೆವಿಗೂ ಹಾಗೆ ಇರಲಿ ಎಂದು ಭಗವಂತನಲ್ಲಿ ಪ್ರಾರ್ಥಿಸಿರಲೂಬಹುದು. ಆದರೆ ವಿಧಿಯ ನಿಯಮ ಇನ್ನೇನೋ ಇದ್ದಿರಬಹುದು. ಆ ಹೆಚ್ಚುವರಿ ಸಂಬಳ ನೀಡಿದ್ದು ಭಗವಂತನೂ ಅಲ್ಲ, ಪಾಲಿಕೆಯ ಧರ್ಮಬುದ್ಧಿಯೂ ಅಲ್ಲವಂತೆ. ಸಾಫ್ಟ್‌ವೇರ್ ಮಿಸ್ಟೇಕಂತೆ! ಪಡೆದಿರುವ ಹೆಚ್ಚುವರಿ ಸಂಬಳವನ್ನು ಹಿಂತಿರುಗಿಸಿ ಎಂದು ಮಹಾನಗರ ಪಾಲಿಕೆ ಒತ್ತಾಯಿಸುತ್ತಿದೆಯಂತೆ... 'ನಾವೇನು ಹೆಚ್ಚಿಗೆ ಸಂಬಳ ಕೊಡಿ ಅಂತ ನಿಮ್ಮ ಹತ್ತಿರ ಬೇಡಿಕೊಂಡಿದ್ದೆವಾ. ಇಲ್ಲವಲ್ಲ, ನೀವೇ ಕೊಟ್ಟಿದ್ದೀರಿ. ನಾವು ಯಾಕೆ ಹಿಂತಿರುಗಿಸಬೇಕು' ಎಂದು ಕೆಲವರು ಮರುಪ್ರಶ್ನೆ ಹಾಕಿದರೆ ಮತ್ತೆ ಕೆಲವರು 'ಹಣ ಎಲ್ಲಾ ಖರ್ಚಾಗಿ ಹೋಗಿದೆ. ನಾವೆಲ್ಲಿಂದ ತಂದು ಕಟ್ಟನಾ' ಎಂದು ತಾರಮ್ಮಯ್ಯ ಆಡುತ್ತಿದ್ದಾರಂತೆ!

ಇದು ಎಲ್ಲಾ ಸಂಬಳದಾರರ ಗೋಳು. ಆದರೆ ಇಲ್ಲಿ ಒಬ್ಬರು ಇದ್ದಾರೆ ಕಣ್ರಿ. ಅವರ ನೋಡಿ ಕಲೀಬೇಕು. ಅವರು ಸರ್ಕಾರಿ ಸೇವೆಯಲ್ಲಿ ಇದ್ದಾರೆ. ಆದರೂ ಹದಿನೈದು ವರ್ಷಗಳಿಂದ ಸಂಬಳವನ್ನೇ ಪಡೆದಿಲ್ಲವಂತೆ!

ಸರ್ಕಾರದ ಕೆಲಸ ದೇವರ ಕೆಲಸ ಎಂದು ದೃಢವಾಗಿ ನಂಬಿದವರು ಇರಬೇಕು. ದೇವರ ಸೇವೆಗೆ ಹಣ ಪಡೆಯಬಾರದು ಎಂಬ ಉನ್ನತ ಧ್ಯೇಯ ಅವರದ್ದಾಗಿರಬೇಕು. ಇದೆಲ್ಲ ಸರೀನೆ, ಆದರೆ ಜೀವನ ಹೇಗೆ ಸಾಗಿಸುತ್ತಿದ್ದರು? ಊಟ, ತಿಂಡಿ, ಬಟ್ಟೆ ಬರೆಗೆ ಹಣ ಬೇಡವೆ? ಅವರು ಹಾಳಾಗಲಿ. ಅವರಿಗೆ ಹೆಂಡತಿ ಮಕ್ಕಳಿಲ್ಲವೆ? ಅವರೆಲ್ಲ ಗಾಳಿ ಕುಡಿದೇ, ಬೀದಿ ಬದಿಯಲ್ಲೇ ಬದುಕುತ್ತಾರಾ? ಎಂದೆಲ್ಲ ಅನ್ನಿಸಬಹುದು. ಅದು ಏನೋ ಗೊತ್ತಿಲ್ಲ, ಆದರೆ ಹದಿನೈದು ವರ್ಷಗಳಿಂದ ಸಂಬಳವನ್ನೇ ಡ್ರಾ ಮಾಡಿಲ್ಲ ಅನ್ನುವುದು ಮಾತ್ರ ಸತ್ಯ. ಲೋಕಾಯುಕ್ತ ಸಿಬ್ಬಂದಿ ದಾಳಿ ಮಾಡಿದಾಗ ಅವರ ಅಷ್ಟೂ ಸಂಬಳ ಅವರ ಖಾತೇಲಿ ಘಟಸರ್ಪದಂತೆ ಬಿದ್ದಿತ್ತಂತೆ! ಆ ಮಹಾ ಪುರುಷನ 'ಉಳಿತಾಯ ಸಾಧನೆ'ಯಿಂದ ಬೆಚ್ಚಿ ಬಿದ್ದವರು 'ಅದು ಹೇಗೇರೀ ಇಷ್ಟು ದಿವಸ ಸಂಬಳ ಇಲ್ಲದೆ ಜೀವನ ಮಾಡಿದಿರಿ' ಎಂದು ಕೇಳಿದಾಗ ಸನ್ಮಾನ್ಯರು ಈ ಪವಾಡವನ್ನು ಬಯಲು ಮಾಡಿದರಂತೆ. ಮಹಾಶಯರು ಕುಳಿತಿದ್ದ ಕುರ್ಚಿಯ ಮಹಾತ್ಮೆಯೆ ಹಾಗಂತೆ. ಸಾವಿರಾರು ರೂಪಾಯಿಗಳ ವ್ಯವಹಾರ ಅಲ್ಲಿಂದ ಹೋಗಬೇಕಿತ್ತಂತೆ. ಬೇಡ ಬೇಡ ಎಂದು ನಿರಾಕರಿಸಿದರೂ ಶೇಕಡ ಹತ್ತು ಕಮಿಷನ್ ಬಂದು




ಬೀಳುತ್ತಿತ್ತಂತೆ. ಹೀಗಿರುವಾಗ ಸಂಬಳದ ಅವಶ್ಯಕತೆ ಏನು ಎಂದು ಮರುಪ್ರಶ್ನೆ ಎಸೆದರಂತೆ!

ಆಹಾ ಎಂದು ತನಿಖಾ ಸಿಬ್ಬಂದಿ ಬಾಯಿಬಾಯಿ ಬಿಡುತ್ತಿದ್ದಾಗ ಈ ಪವಾಡ ಕೇವಲ 'ಸಂಬಳ ಉಳಿತಾಯ ಸಾಧನೆ'ಗೆ ಮಾತ್ರ ಸೀಮಿತ ಆಗಿಲ್ಲ, ಹತ್ತಾರು ಕೋಟಿ ಚರಾಸ್ತಿ ಸ್ತಿರಾಸ್ತಿಗೂ ಪಸರಿಸಿತ್ತು ಎಂಬ ವಿಷಯ ಬಯಲಾದಾಗ ಅವರು ಮೂರ್ಛೆ ಹೋಗುವುದು ಒಂದೇ ಬಾಕಿ ಇತ್ತಂತೆ!

ಯಾರು ಈ ಪವಾಡ ಪುರುಷ ಎನ್ನುವಿರಾ? ಅವರೇ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಎನ್. ಲಕ್ಷ್ಮಣರಾವ್ ಪೇಶ್ವೆ!

ಪಾಪದ ಹಣ ಪರಪ್ಪನ ಅಗ್ರಹಾರ ಸೇರಿಸಿತು. ಸರಿ. ಆದರೆ ಪೇಶ್ವೆಗಳು ಅಂದರೆ ಅತಿ ಬುದ್ಧಿವಂತರು. ಶಿವಾಜಿ ಹೆಸರಿನಲ್ಲಿ ಬೇಳೆ ಬೇಯಿಸಿಕೊಂಡ ವಂಶದವರಲ್ಲವಾ. ಹೊರಗೆ ಬರುವ ದಾರಿ ಹುಡುಕೇ ಇರುತ್ತಾರೆ. ಅದಲ್ಲ ವಿಷಯ. ತಮ್ಮ ಸೇವಾ ಅವಧಿಯಲ್ಲಿ 'ವ್ರತ' ಎನ್ನುವಂತೆ ಸಂಬಳವನ್ನೆಲ್ಲಾ ತಮ್ಮ ಖಾತೆಗೆ ಜಮಾ ಮಾಡುತ್ತಾ ಬಂದಿದ್ದರು. ಈಗ 'ಸಂಬಳ ಭದ್ರತೆ ವ್ರತ'ವನ್ನು ಮುರಿಯಬೇಕಾಗಬಹುದಾ... ಪಾಪ ಪೇಶ್ವೆಯವರ ಮನಸ್ಸಿಗೆ ಆಘಾತ ಆಗಿರಬಹುದೋ ಏನೋ!

ನ್ಯಾಯಾಲಯದ ಗುಮ್ಮ ಕುಂತದೆ



ಎಚ್.ಎಲ್. ಕೇಶವಮೂರ್ತಿ

ಅಣಕ

ಛೇ! ಪಾಪ ಒಳ್ಳೇರ ಮಾನ ರಾಜಕೀಯದಲ್ಲಿ ಹೋಯ್ತಂತೆ. ಹಂಗಾಗದೆ ಯಡಿಯೂರಪ್ಪನವರ ಕತೆ. ಸುಮ್‌ಸುಮ್‌ನೆ ಅವರೆಸ್ರು ಎಳೀತಾ ಬಿದ್ದವ್ರೆ... ಈಗ ನಡೀತಲ್ಲಾ ಬೃಹತ್ ಭಾಜಪ ನಾಟಕ, ಅದ್ರಲ್ಲಿ ಅವ್ರು ಪಾರ್ಟ್ ಮಾಡಿಲ್ವಂತೆ. ಕತೆನೂ ಬರ್ದಿಲ್ವಂತೆ, ಡೈರೆಕ್ಟೂ ಮಾಡಿಲ್ವಂತೆ. ಅದ್ಸರೀರಿ. ಅದ್ಯಾವುದು ಆ ನಾಟಕ. ದಿನಬೆಳಗಾದರೆ ಭಾಜಪದೋರ್ದು ಇದ್ದೇ ಇರ್ತದ್'ಲ್ಲ ಅಂದಿರಾ. ಅದೇ ಒಂಬತ್ತು ಮಂತ್ರಿಗಳು ವೀರಾವೇಶದಿಂದ ರಾಜೀನಾಮೆ ಕೆರೆದು ಸದಾನಂದ ಗೌಡರ ಮೊಕದ ಮೇಲೆ ಎಸೆದು ಬಂದು ಮಾಧ್ಯಮಗಳೆದುರು ವೀರಾಧಿವೀರರಂತೆ ಪೋಸ್ ಕೊಟ್ರಲ್ಲ ಅದು ಕಣ್ರಿ. ಅದಾದ ಹೊತ್ತಾರೀಕೆ ನಾಯಿ ಕಾಲ ಸಂದಿಕೆ ಬಾಲ ಮುದುರಿಕೊಳ್ತದಲ್ಲ ಹಂಗಾದರು. ಅದು ಹಂಗಿರಲಿ, ಈ ನಾಟಕಕ್ಕೂ ಯಡ್ಯೂರಪ್ಪನವರಿಗೂ ಒಂದಿಷ್ಟೂ ಸಂಬಂಧಾನೆ ಇಲ್ವಂತೆ. 'ರಾಜೀನಾಮೆ ಮಂತ್ರಿ'ಗಳೇ 'ಯಡ್ಯೂರಪ್ಪನವರಿಗೂ ಇದಕ್ಕೂ ಸಂಬಂಧ ಇಲ್ಲ, ನಾವು ಸ್ವಪ್ರೇರಣೆಯಿಂದ ರಾಜೀನಾಮೆ ಕೊಟ್ಟದೀವಿ' ಅಂತ ಟಿವಿ ಮುಂದೆ ಬಡ್ಕಂಡವ್ರೆ. ಆದರೂ ಹಾಳಾದ ಜನ ನಂಬಲ್ಲ ಕಣ್ರೀ. ಇದೆಲ್ಲ ಅವ್ರುದ್ದೇ ಕುತಂತ್ರ ಅಂತಾವೆ. ಅವರಿಗೆ ಆಗದ ಮಂತ್ರಿಗಳು ?ಅವರೆ ಇದ್'ಕ್ಕೆ ಸೂತ್ರಧಾರ? ಅಂತ ಬಿದ್ದವ್ರೆ. ಅಂದ್ರೆ ಅಂದುಕೊಳ್ಳಲಿ ನಾಯಿ ಬೊಗಳಿದರೆ ?ಧವಳ ಶ್ರೀ? ಹಾಳಾಯ್ತದಾ ಅನ್ನೊಂಗು ಇಲ್ಲ, ಅಷ್ಟನೋರು ಭ್ರಷ್ಟಚಾರ ಆರೋಪದಲ್ಲಿ ತಗುಲಾಕಿಕೊಂಡು ನಿರೀಕ್ಷಣಾ ಜಾಮೀನಿನಲ್ಲಿ ಕಾಲ ತಳ್ತಾ ಇರೋರು. ಇದನ್ನೆಲ್ಲ ಅವರೇ ಮಾಡಿಸುತ್ತಿದ್ದಾರೆ ಅಂದರೆ ಅದು ಕೋರ್ಟಿಗೆ ಏನು ಮೆಸೇಜ್ ಕೊಡ್ತದೋ ತಿಳೀವಲ್ದು, ಅದಕ್ಕೇ ಅವ[...] ಬಾಯ್ಲಿ ಹಿಂಗೆಲ್ಲ ಹೇಳಿಸಬೇಕಾಗಿ ಬಂದದೆ.

ಆದರೂ ಹೇಳ್ತೀನಿ ಜನ ಭಾರೀ ಕೆಟ್ಟೋರು ಕ[...] 'ಕುಂತಿದ್ಕೆ ನಿಂತಿದ್ಕೆ ಎಲ್ಲ ಡಾಲರ್ಸ್ ಕಾಲೋನಿಗೆ ಹಾರ್ತೀ[...] ಸಭೆ ಅಂತ ಮಸಲತ್ತು ಮಾಡ್ತೀರಲ್ಲ ಯಾಕೆ' ಅಂ[...] 'ಅಲ್ರಪಾ ಸಭೆ ಅಂದ್ರೆ ಅದು ನಡೆಸೋಕೆ ಜನ [...] ಬ್ಯಾಡವಾ. ಅಲ್ಲಿ ವಿಶಾಲವಾದ ಜಾಗ ಅದೆ. ಅದ್ಕೇ [...] ಸೇರ್ತಾರೆ ಅಷ್ಟೇಯ' ಅಂದ್ರೆ 'ಯಾಕೆ ಇನ್ನು ಎ[...] ಇಲ್ವಾ ಜಾಗ' ಅಂತ ರೇಗುಸ್ತವೆ. ಕೋರ್ಟ್ [...] ಇದು ಎಲ್ಲಿ ಬಿದ್ದತೊ ಅಂತಾವ ಜಗದೀಶ ಶೆ[...] ಮನೆಗೆ ಸಭೆ ಸ್ಥಳಾನ ಶಿಫ್ಟ್ ಮಾಡಬೇಕಾಯ್ತು.

ಯಡ್ಯೂರಪ್ಪನವರಿಗೆ ಪಾಪ ಅದಮ ಸಂ[...] ಮಾಧ್ಯಮಗಳವ್ರೆಲ್ಲಾ ಯಡ್ಯೂರಪ್ಪ ಬಣ, ಯಡ್ಯೂ[...] ಬಣ ಅಂತಾವ ಒದರ್ತಾ ಕಿರೀತಾ ಬಿದ್ದವೆ. ಬಣ ಅ[...] ಸುದ್ದಿ ಆಯ್ತದೆ, ಸುದ್ದಿ ಆಗದ ರಾಜಕಾರಣಿ ಇ[...] ಸತ್ತಂಗೇಯ. ಅದ್ಕೇ ಹಾಗನ್ನಲಿ ಅನ್ನೊ ಒಳಾಸೆ. ಅ[...] ಏನೋ ಜೈಲಿಗೆ ಹೋಗೋದ ಸದ್ಯಕ್ಕಾದರೂ ತಪ್ಪಿಸೊ[...] ಅಂತಾ ಜಾಮೀನು ನೀಡಿದರೆ ಇವನು ಹಿಂಗೆಲ್ಲ ಹುಂಬ[...] ಆಟ ಆಡ್ತಾ ಕುಂತವ್ನಲ್ಲ ಅಂತ ಕೋರ್ಟ್ ಏನಾದ[...] ಅಂದುಕೊಂಡರೇನು ಗತಿ ಅಂತ ಜೀವ ಪುಕಪುಕ ಅ[...] ಏನು ಮಾಡಿದ್ರೂ ಮುಚ್ಚುಮರೇಲಿ ಮಾಡಲ್ಲ, ಎ[...] ಮಾಡ್ತಾರೇ ಅನ್ನಿಸಿಕೊಂಡಿರೋ ಯಡ್ಯೂರಪ್ಪನ[...] ಎಂತಹ ಕಾಲ ಬಂತು ನೋಡಿ. ಮುಚ್ಚುಮರೆ[...] ಎಲ್ಲಾನೂ ಮಾಡೋ ಹಂಗಾಗದೆ. ಹಾಳಾದ ಕೋ[...] ಗುಮ್ಮ ಹಿಂಗೂ ಆಡಿಸುತ್ತಾ...


******

ಯಡಿಯೂರಪ್ಪ ಲಿಂಗಾಯತರ ನಾಯಕ, ಲಿಂಗಾಯ[...] ನಾಯಕ ಯಡಿಯೂರಪ್ಪ ಎಂದು ಮಾಧ್ಯಮ[...] ಬಿಂಬಿಸೋದ ಕಂಡು ಕೆಲವರು ಕೆಂಡಾಮಂಡಲ ಆ[...] ಇದ್ದದ್ದ ಇದ್ದಂಗೆ ಹೇಳವ್ರೆ ಕಣ್ರಿ. ಇದಕ್ಯಾಕೆ ಹುಚ್ಚುನ[...] ತರಹ ಆಡ್ತೀರಿ ಅಂದ್ರೆ 'ಅವರು ಕೇವಲ ಲಿಂಗಾಯ[...] ನಾಯಕರಲ್ಲ, ಸರ್ವಜನಾಂಗದ ನಾಯಕರು ತಿಳ್ಕಳಿ' [...] ಎಗರಿ ಎಗರಿ ಬೀಳ್ತಾರೆ. ಮೈಸೂರಿನ ಶಂಕರಲಿಂಗೇಗೌ[...] 'ಒಕ್ಕಲಿಗ ಮುಖ್ಯಮಂತ್ರಿ ಕೆಳಕ್ಕೆ ಬೀಳಿಸಬೇಕು ಅಂತ ಅ[...] ಇಳುಸ್ಲಿ ನೋಡೇ ಬುಡಾನಾ. ಒಕ್ಕಲಿಗರೇನು ನರಸತ್ತವ[...] ಅಂತ ಗುಟುರು ಹಾಕ್ತಾ ಅವ್ರೆ. ಒಟ್ಟನಲ್ಲಿ ಲಿಂಗಾಯ[...] ಒಕ್ಕಲಿಗರನ್ನು ಬಿಟ್ಟು ಬೇರೆಯವರು ಮುಖ್ಯಮಂತ್ರಿ ಆ[...] ಹಂಗಿಲ್ಲ, ಅವರು ಬಿಸಾಕಿದ ಚೂರ್ನೆ 'ಮಹಾಪ್ರಸಾದ' [...] ತಿಳ್ಕೋಬೇಕು ಅಂದ ಹಾಗಾಯಿತು! ಇದ ತಿಳ್ಕಳಿ!

ಪುರೋಹಿತರಿಗೇ ಮಂಜುನಾಥನ ಭಯವಿಲ್ಲವೆಂದ ಮೇಲೆ ಇತರರಿಗೆ ಯಾಕೆ ಭಯವಿರಬೇಕು?



ಉಡುಪಿ ಶಾಸಕ ರಘುಪತಿ ಭಟ್ಟನು ಧರ್ಮಸ್ಥಳದಲ್ಲಿ ತನ್ನ ಪತ್ನಿಯ ಆತ್ಮಹತ್ಯೆ ಪ್ರಕರಣದಲ್ಲಿ ತಾನು ನಿರಪರಾಧಿ ಎಂದು ಪ್ರಮಾಣ ಮಾಡಿದ್ದು ಒಂದು ಪ್ರಹಸನ ನಿಜ. ಅಷ್ಟೇ ಅಲ್ಲ, ಈ ಪ್ರಕರಣದಲ್ಲಿ ತನ್ನ ವಿರುದ್ಧ ಮಾತನಾಡುವವರನ್ನು ಮಂಜುನಾಥನೇ ಶಿಕ್ಷಿಸುತ್ತಾನೆ ಎಂದು ಜನರಲ್ಲಿ ಅಲೌಕಿಕ ಭಯ ಬೇರೆ ಹುಟ್ಟಿಸಿದ್ದಾನೆ. ಕರಾವಳಿಯ ಜನರು ದೇವರು, ಭೂತ, ನಾಗನ ವಿಷಯದಲ್ಲಿ ಅತ್ಯಂತ ಮೌಢ್ಯಭರಿತರಾಗಿರುವುದನ್ನೇ ಬಂಡವಾಳ ಮಾಡಿಕೊಳ್ಳಲು ಭಟ್ಟ ಹವಣಿಸುತ್ತಿರುವಂತಿದೆ. ವಿ.ಎಸ್.ಆಚಾರ್ಯರ ಸ್ಥಾನದಲ್ಲಿ ಮಂತ್ರಿಯಾಗುವ ಪ್ಲಾನ್ ಸಹ ಆತನಿಗಿದೆ.



ಭಟ್ಟನಿಗೆ ಅಷ್ಟೊಂದು ಪ್ರಾಮಾಣಿಕತೆ ಇದ್ದದ್ದೇ ಆಗಿದ್ದರೆ, ಈ ಹಗರಣದ ಸಂಪೂರ್ಣ ಒಳ-ಹೊರಗು ಬಲ್ಲ ಏಕೈಕ ವ್ಯಕ್ತಿಯಾದ ಅತುಲ್ ರಾವ್‌ನನ್ನೂ ತನ್ನ ಜೊತೆ ಧರ್ಮಸ್ಥಳಕ್ಕೆ ಕರೆದುಕೊಂಡು ಹೋಗಿ ಅವನ ಎದುರಲ್ಲೇ ಪ್ರಮಾಣ ಮಾಡುತ್ತಿದ್ದನು. ಜೊತೆಗೆ ಪದ್ಮಪ್ರಿಯಾಳ ಖಾಸಾ ತಮ್ಮನಂತಿದ್ದ ಅತುಲ್‌ರಾವ್‌ಗೂ ಪ್ರಮಾಣ ಮಾಡಿ ಸತ್ಯ ಹೇಳಲು ಪ್ರೇರೇಪಿಸುತ್ತಿದ್ದನು.

ಆದರೆ ವಾಸ್ತವವಾಗಿ ಕರಾವಳಿಯ ವೈಷ್ಣವರಿಗೆ ಧರ್ಮಸ್ಥಳದ ಪ್ರಮಾಣದ ಬಗ್ಗೆ ನಿಜವಾದ ಭಯ ಭಕ್ತಿ ಇಲ್ಲ. ಧರ್ಮಸ್ಥಳದಲ್ಲಿ ಸುಳ್ಳು ಪ್ರಮಾಣ ಮಾಡಿದರೂ ನಂತರ ತಮ್ಮ ಕುಲದೇವರಾದ ಶ್ರೀಕೃಷ್ಣನಿಗೆ ತಪ್ಪುಕಾಣಿಕೆ ಅರ್ಪಿಸಿದರೆ ಸಾಕು ಕೃಷ್ಣನು ಶೈವರ ಮಂಜುನಾಥ ಮತ್ತೂ ಇತರೆಲ್ಲಾ ದೇವರನ್ನು 'ಸೂಪರ್ ಸೀಡ್' ಮಾಡುತ್ತಾನೆ ಎಂಬ ಭಂಡ ನಂಬಿಕೆ ಮಾಧ್ವರದ್ದು. ಧರ್ಮಸ್ಥಳದ ಪುರೋಹಿತರೂ ರಘುಪತಿ ಭಟ್ಟನಂತೆ ವೈಷ್ಣವರೇ ಆಗಿದ್ದು ಅವರು ಮಂಜುನಾಥನ ಲಿಂಗದೊಟ್ಟಿಗೆ ತಮ್ಮ ಮನೆಯ ಸಾಲಿಗ್ರಾಮವನ್ನು ಅನಧಿಕೃತವಾಗಿ ಇಟ್ಟು ಎರಡಕ್ಕೂ ದಿನಾಲೂ ವೈಷ್ಣವ ಪದ್ಧತಿಯಲ್ಲೇ ಪೂಜೆ ಮಾಡಿ (ಶಿವಾಗಮ ಪದ್ಧತಿಗೆ ತಿಲಾಂಜಲಿ ಇಟ್ಟು), ಆ ಪೂಜೆಯ ಫಲವನ್ನು ಕೊನೆಗೆ 'ಕೃಷ್ಣಾರ್ಪಣಮಸ್ತು' ಎನ್ನುತ್ತಾ ಮನೆದೇವರಿಗೆ ಅರ್ಪಿಸಿ ಕೃತಾರ್ಥರಾಗುತ್ತಾರೆ. ದಿನಾ ತಪ್ಪು ಪೂಜೆ ಮಾಡುವ ಪುರೋಹಿತರಿಗೇ ಮಂಜುನಾಥನ ಭಯವಿಲ್ಲವೆಂದ ಮೇಲೆ ಇತರರಿಗೆ ಯಾಕೆ ಭಯವಿರಬೇಕು?

- ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು

ಸುಶಿಕ್ಷಿತರ ಕತೆ ಇದಾದರೆ ಬೇರೆಯವರ ಗತಿ?

ಪತ್ರಿಕೆಯ ಮುಖಪುಟ ವರದಿ 'ಕಳ್ಳನ ವಿರುದ್ಧ ಸುಳ್ಳನ ಕದನ' ವರದಿಯು ಚೆನ್ನಾಗಿತ್ತು.

ಆರತಿರಾವ್ ತರಹದ ಓದು-ಬರಹ ಬಲ್ಲ, ಒಳ್ಳೆಯ ವೃತ್ತಿಯಲ್ಲಿದ್ದ, ವಿದೇಶದಲ್ಲಿ ವಾಸಿಸ[...] ಮಹಿಳೆ ನಿತ್ಯಾನಂದನ ಅಡ್ಡೆಗಳಿಗೆ ಬಲಿಯಾಗುತ್ತಾರೆ[...] ಇವರ ಜ್ಞಾನಕ್ಕೆ ಏನೆನ್ನಬೇಕು? ವಿದ್ಯಾವಂತರೇ ಇ[...] ಮೌಢ್ಯವನ್ನು ಪ್ರದರ್ಶಿಸಿದರೆ ಇನ್ನು ಅವಿದ್ಯಾವ[...] ಪಾಡೇನು?


'ಆರ್ಟ್ ಆಫ್ ಲಿವಿಂಗ್'ನ ವೈಯಾರಿ ರವಿಶ[...] ತನ್ನ ಧ್ಯಾನಪೀಠಕ್ಕೆ ಮಾರಕವಾಗಿದ್ದ ನಿತ್ಯಾನಂದನನ್ನು ಪಳಗಿ[...] ಪತ್ರಕರ್ತರನ್ನು, ಪೊಲೀಸರನ್ನು, ರಾಜಕಾರಣಿಗ[...] ಬಳಸಿಕೊಂಡಿದ್ದನ್ನು ಬಹಿರಂಗ ಮಾಡಿದ್ದೀರಿ. [...] ಸಾಮಾನ್ಯರನ್ನು ರಕ್ಷಿಸಬೇಕಿರುವ ನಮ್ಮ ವ್ಯವಸ್ಥೆಯೇ [...] ನಿತ್ಯಾ ಮತ್ತು ರವಿಶಂಕರ ಬಿಸಾಡುವ ಹಣಕ್ಕೆ ಬ[...] ತೆರೆದು ಕೂತರೆ ಜನರ ಹಿತವನ್ನು ಕಾಪಾಡುವವರು ಯ[...]

ಇಂತಹ ರಾಜಕಾರಣಿಗಳು, ಅಧಿಕಾರಿಗಳು [...] ಸಮಾಜಘಾತುಕರು ಇರುವವರೆಗೆ ನಿತ್ಯಾನಂದ [...] ರವಿಶಂಕರ್ ತರಹದ ಅಡ್ಡಕಸುಬುದಾರರು ಹುಟ್ಟು[...] ಇರುತ್ತಾರೆ.

- ದಿ.ಎಲ್.ನಾಗರಾಜ್, ಚೆ[...]




ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹುದು.




ಇಂದಿರಾ ಲಂಕೇಶರು ಬರೆಯು[...] 'ಹುಳಿಮಾವು ಮತ್ತು ನಾನು' ಎಂಬ ಅ[...] 42 ಕಂತುಗಳಲ್ಲಿ ಪತ್ರಿಕೆಯಲ್ಲಿ ಪ್ರಕಟವಾಯ[...] ಅದೀಗ ಮುಕ್ತಾಯವಾಗಿದೆ. ದಯ[...] ಅದನ್ನು ಆದಷ್ಟು ಬೇಗ ಪುಸ್ತಕ ರೂಪ[...] ಪ್ರಕಟಿಸಿ.

...ವ್ಯಾಪಾರಿಗಳ ದೃಷ್ಟಿಯಲ್ಲಿ ...ಶೇಷ ಸಮಾಗಮ

...ಉಪೇಂದ್ರ ಮತ್ತು ನಿರ್ದೇಶಕ ಓಂ ಪ್ರಕಾಶ್ ...ಮೊದಲ ಬಾರಿಗೆ ಜೊತೆಯಾಗಿ ...ದೇ ಚಿತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ...ರಿಬ್ಬರೂ ಒಟ್ಟಿಗೆ ಕಾಣಿಸಿಕೊಳ್ಳುತ್ತಿರುವ ಚಿತ್ರದ ...ರು 'ತ್ರಿವಿಕ್ರಮ'. ಈ ಚಿತ್ರವನ್ನು ಓಂ ಪ್ರಕಾಶ್ ...ರ್ದೇಶಿಸಲಿದ್ದು ಅವರೇ ಸ್ನೇಹಿತರ ಜೊತೆ ಸೇರಿಕೊಂಡು ನಿರ್ಮಿಸುತ್ತಿದ್ದಾರೆ.






ವಿಶೇಷವೆಂದರೆ ಓಂ ಪ್ರಕಾಶ್ ಮತ್ತು ಉಪೇಂದ್ರ ಇಬ್ಬರೂ ಅವರವರ ಕೆಲಸದಲ್ಲಿ ತ್ರಿವಿಕ್ರಮರೇ. ಇಬ್ಬರೂ ವರ್ಕೋಹಾಲಿಕ್‌ಗಳು. ಹಾಗೆ ನೋಡಿದರೆ ಇವರಿಬ್ಬರ ಚಿತ್ರ ಮಾಡುವ ಮನೋಭಾವ ಮತ್ತು ಶೈಲಿ ಒಂದೇ ತರಹದ್ದು ಎಂದು ಹೇಳಬಹುದು. ಹೀಗಾಗಿ ಇವರಿಬ್ಬರ ಸಮಾಗಮ ಗಾಂಧಿನಗರದ ವ್ಯಾಪಾರಿಗಳ ದೃಷ್ಟಿಯಲ್ಲಿ ವಿಶೇಷವಾಗಿ ಕಾಣಿಸುತ್ತಿದೆ.


ತುಂಬಾ ಅದ್ದೂರಿಯಾಗಿ ಯಾವುದೇ ಹಂತದಲ್ಲೂ ರಾಜಿ ಮಾಡಿಕೊಳ್ಳದೆ ಚಿತ್ರ ಮಾಡುವುದರಲ್ಲಿ ಎತ್ತಿದ ಕೈಯೆನಿಸಿರುವ ಓಂ ಪ್ರಕಾಶ್ ಈಗಾಗಲೇ 25ಕ್ಕೂ ಹೆಚ್ಚು ಚಿತ್ರಗಳನ್ನು ನಿರ್ದೇಶಿಸಿದ ಖ್ಯಾತಿಯನ್ನು ಹೊಂದಿರುವವರು. ಈಗಾಗಲೇ ನಿರ್ದೇಶಕನಾಗಿಯೂ ಒಳ್ಳೆಯ ಹೆಸರು ಪಡೆದಿರುವ ಉಪೇಂದ್ರರನ್ನು ಈ ಚಿತ್ರದಲ್ಲಿ ಓಂ ಪ್ರಕಾಶ್ ಹೇಗೆ ಹ್ಯಾಂಡಲ್ ಮಾಡುತ್ತಾರೆಂಬುದನ್ನು ಕಾದು ನೋಡಬೇಕು.





...ಾಖಲೆಯ ಗೀಳು ಎಷ್ಟು ಸರಿ?

...ನಿರ್ಮಾಪಕ ಅಣಜಿ ನಾಗರಾಜ್ ಅವರಿಗೆ ಒಳ್ಳೆಯ ಸಿನಿಮಾ ...ಾಡುವ ಬದಲು ದಾಖಲೆ ಮಾಡುವ ಹುಚ್ಚು ...ಟಿಕೊಂಡಂತಿದೆ. ಇತ್ತೀಚೆಗೆ ಶಿವರಾಜ್‌ಕುಮಾರ್ ಅವರನ್ನು ...ಕಿಕೊಂಡು ಒಂದೇ ದಿನದಲ್ಲಿ 'ಸುಗ್ರೀವ' ಎಂಬ ಚಿತ್ರವನ್ನು ...ುಗಿಸಿ ಅಣಜಿ ನಾಗರಾಜ್ ದಾಖಲೆ ನಿರ್ಮಿಸಿದ್ದರು. ಈಗ ...ದಕ್ಕಿಂತಲೂ ವಿಭಿನ್ನವಾದ ಮತ್ತೊಂದು ದಾಖಲೆಯನ್ನು ಅಣಜಿ ಮಾಡಿ ...ುಗಿಸಿದ್ದಾರೆ. ಅದೇನೆಂದರೆ ಕೇವಲ ಒಂದು ಗಂಟೆ 45 ನಿಮಿಷಗಳ ಕಾಲಾವಧಿಯಲ್ಲಿ ...ದು ಸಿನಿಮಾವನ್ನು ಒಂದೇ ಟೇಕ್‌ನಲ್ಲಿ ಮಾಡಿ ಮುಗಿಸಿರುವುದು. ಇವರ ಈ ಕನಸಿಗೆ ನಿರ್ದೇಶಕರಾಗಿ ಸಾತ್ ನೀಡಿದವರು ಅರವಿಂದ್ ಕೌಶಿಕ್. ಈ ಚಿತ್ರದ ಹೆಸರು 'ಒಂದು ಏರಿಯಾದಲ್ಲಿ ಇನ್ನೊಂದು ದಿನ.'



ಎರಡು ಗಂಟೆಗಳಲ್ಲಿ ಚಿತ್ರೀಕರಿಸಿದ ಈ ಸಿನಿಮಾವನ್ನು ಪ್ರೇಕ್ಷಕರು ಇಷ್ಟಪಡುತ್ತಾರೋ ಇಲ್ಲವೋ ಎಂಬುದು ಬೇರೆ ಮಾತು. ಆದರೆ ಇಂತಹ ಚಿತ್ರಗಳನ್ನು ದಾಖಲೆಯ ಗೀಳಿಗಾಗಿ ನಿರ್ಮಿಸುವುದು ಎಷ್ಟು ಸರಿ?

ಕ್ರಿಯಾಶೀಲ ಹಾಡುಗಳು

ಮೊನ್ನೆ ಮೊನ್ನೆಯಷ್ಟೇ 'ಗೋವಿಂದಾಯ ನಮಃ' ಚಿತ್ರದ ಒಂದು ಹಾಡಿನಲ್ಲಿ ತನ್ನ ಕ್ರಿಯಾಶೀಲತೆಯನ್ನು ಪ್ರದರ್ಶಿಸಿದ ಸಂಗೀತ ನಿರ್ದೇಶಕ ಗುರುಕಿರಣ್ ಆ ಚಿತ್ರದ ಯಶಸ್ಸಿಗೆ ಮೂಲಕಾರಣರಾಗಿದ್ದರು. ಈಗ ಅಂತಹ ಸಾಧನೆಯನ್ನು ಅವರು ರಿಪೀಟ್ ಮಾಡುವ ಸಾಧ್ಯತೆ 'ಸಾಗರ್' ಚಿತ್ರದಲ್ಲಿ ಕಂಡುಬರುತ್ತಿದೆ.

ಕೋಟಿ ಖ್ಯಾತಿಯ ನಿರ್ಮಾಪಕ ರಾಮು ನಿರ್ಮಾಣದ 'ಸಾಗರ್' ಚಿತ್ರದ ಹಾಡುಗಳನ್ನು ನೋಡಿದಾಗ ಹಾಗೆನಿಸಿತು. ಈ ಚಿತ್ರದಲ್ಲಿ ನಿಜಕ್ಕೂ ಗೀತ ರಚನಕಾರ ಕವಿರಾಜ್ ನೂತನ ಮಾದರಿಯ ಸಾಹಿತ್ಯದ ಸಾಲುಗಳನ್ನು ರಚಿಸಿದ್ದಾರೆ. ಅದಕ್ಕೆ ಪೂರಕವಾಗಿ ಗುರುಕಿರಣ್ ಮಧುರವಾದ ಸಂಗೀತ ನಿರ್ದೇಶನ ನೀಡಿದ್ದಾರೆ. ವಿಶೇಷವೆಂದರೆ ಈ ಹಾಡುಗಳನ್ನು ನೃತ್ಯ ನಿರ್ದೇಶಕರೂ ಅಷ್ಟೇ ವಿನೂತನ ಮಾದರಿಯಲ್ಲಿ ಚಿತ್ರೀಕರಿಸಿ ತಮ್ಮ ಕೊಡುಗೆಯನ್ನು ನೀಡಿದ್ದಾರೆ.

ಒಂದೇ ಮಾತಲ್ಲಿ ಹೇಳುವುದಾದರೆ ಹಾಡು, ಸಂಗೀತ ಮತ್ತು ಅದರ ಚಿತ್ರೀಕರಣ ಎಲ್ಲವೂ ಚೆನ್ನಾಗಿ ಮೂಡಿಬಂದಿವೆ. ಈ ಚಿತ್ರದಲ್ಲಿ ನಾಯಕ ನಟ ಪ್ರಜ್ವಲ್ ದೇವರಾಜ್ ಜೊತೆ ರಾಧಿಕಾ ಪಂಡಿತ್, ಹರಿಪ್ರಿಯಾ ಮತ್ತು ಸಂಜನ ಎಂಬ ಮೂವರು ಕನ್ನಡತಿಯರು ನಟಿಸುತ್ತಿದ್ದಾರೆ.

ಇತ್ತೀಚಿನ ವರ್ಷಗಳಲ್ಲಿ ತನ್ನ ಹೆಂಡತಿ ಮಾಲಾಶ್ರೀಯನ್ನೇ ಹಾಕಿಕೊಂಡು ಸಿನಿಮಾ ತೆಗೆಯುವುದನ್ನು ಅಭ್ಯಾಸ ಮಾಡಿಕೊಂಡಿದ್ದ ರಾಮು ಅವರು ಈ 'ಸಾಗರ್' ಚಿತ್ರದಿಂದ ಮತ್ತೊಮ್ಮೆ ಮೇಯ್ನ್ ಸ್ಟ್ರೀಮ್‌ಗೆ ವಾಪಸಾಗಿರುವುದು ಸಂತೋಷದ ವಿಷಯ.

–ಶೆಣೈ


...ಆ ಅಂಕಣದಲ್ಲಿ ಇಂದಿರಾ ಅವರು ಒಮ್ಮೆಯೂ ...ದೇ ಒಂದು ಶಬ್ದವನ್ನೂ ಕರ್ಕಶವಾಗಿಯಾಗಲಿ, ...ದಾಗಿಯಾಗಲಿ ಬರೆಯಲಿಲ್ಲ, ಆದರೂ ಆಗಿದ್ದನ್ನೆಲ್ಲ ...ರವಾಗಿ ಬರೆದರು. ಅದು ನನಗೆ ತುಂಬಾ ಇಷ್ಟವಾಯಿತು.

ಒಳ್ಳೆಯ ಗೃಹಿಣಿಯಾಗಿಯೂ, ಒಳ್ಳೆಯ ...ಹಾರ್ದಿಯಾಗಿಯೂ ಇಂದಿರಾ ಅವರು ತಮ್ಮ ಬದುಕನ್ನು ...ಕಿಸಿದ್ದಾರೆ. ಅವರೇ ಹೇಳಿದಂತೆ ಪಿ.ಲಂಕೇಶ್ ಅವರು ...ರಿಕೊಂಡಿಲ್ಲ, ಬದಲಾಗಿ ಅವರಿನ್ನೂ ಕರ್ನಾಟಕದ ...ನತೆಯ ಹೃದಯದಲ್ಲಿ ಜೀವಂತವಾಗಿದ್ದಾರೆ.

- ತೋರಗಲ್ಲು ಉಮೇಶ್, ರಾಮದುರ್ಗ

'ರಹೀಮ್ ಅವರಿಂದ ಹಿಂದೂತ್ವವಾದಿಗಳು ...ಾನವೀಯತೆ ಕಲಿಯಲಿ' ...ಂದು ದಕ್ಷಿಣ ಕನ್ನಡದ ರವಿ ...ತ್ತೂರರ ಪತ್ರ ನನ್ನ ಕಣ್ಣಿನಲ್ಲಿ ...ರು ಜಿನುಗಿಸಿತು.

- ಅಮೀರುದ್ದೀನ್, ಬಿಜಾಪುರ



ಪೇಜಾವರ ಸ್ವಾಮಿಯ ಹೇಳಿಕೆಗಳನ್ನು ಓದಿದಾಗ ...ವರನ್ನು ಒಳ್ಳೆಯ ಮಾನಸಿಕ ತಜ್ಞರಿಗೆ ತೋರಿಸಬೇಕು ...ನಿಸುತ್ತದೆ. ದಲಿತರ ಕೇರಿಗಳಿಗೆ ಭೇಟಿ ಮಾಡಿ ಅಲ್ಲಿ ...ವರಿಗೆ ದೀಕ್ಷೆ ಕೊಡುವುದು, ಕನಕನ ಕಿಂಡಿಯ ಬಗ್ಗೆ ...ಸ ಇತಿಹಾಸ ಮತ್ತು ಕತೆಗಳನ್ನು ಕಟ್ಟುವುದು, ಮಾಂಸ ...ಹಾರದ ಬಗ್ಗೆ ತಪ್ಪು ತಪ್ಪು ಹೇಳಿಕೆಗಳನ್ನು ಕೊಡುವುದು... ...ಳನ್ನು ನೋಡಿದಾಗ ಅವರನ್ನು ಮಾನಸಿಕ ತಜ್ಞರಿಗೆ ...ೋರಿಸಿದರೆ ಮನಸುಕುಲಕ್ಕೆ ಒಳ್ಳೆಯದಾಗುತ್ತದೆ ಎನಿಸುತ್ತದೆ.

- ತೋರಗಲ್ಲು ಜಯಲಕ್ಷ್ಮಿ, ರಾಮದುರ್ಗ

Registered No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/- 18-07-2012 RNI No. KARKAN200

ಗಣೇಶ್‌ಗೆ 'ಈಗ' ಅಗ್ನಿಪರೀಕ್ಷೆ





ಈ ಶುಭ-ಶುಕ್ರವಾರ ಗೋಲ್ಡನ್ ಸ್ಟಾರ್ ಗಣೇಶ್ ನಟಿಸಿರುವ 'ರೋಮಿಯೋ' ಚಿತ್ರ ತೆರೆ ಕಾಣುತ್ತಿದೆ. ಅದರ ಜೊತೆ-ಜೊತೆಗೆ 'ಶ್ರೀ ಆದಿಚುಂಚನಗಿರಿ' ಮತ್ತು 'ಮೊದಲ ಮಿಂಚು' ಎಂಬ ಮತ್ತೆರಡು ಚಿತ್ರಗಳೂ ಬಿಡುಗಡೆ ಆಗುತ್ತಿವೆ. ಅಷ್ಟೇ ಅಲ್ಲ, ಕನ್ನಡದ ಹೀರೋ ಸುದೀಪ್ ನಾಯಕನಾಗಿ ನಟಿಸಿರುವ 'ಈಗ' ಎಂಬ ತೆಲುಗು ಚಿತ್ರ ಕೂಡ ಅದೇ ದಿನ ತೆರೆ ಕಾಣುತ್ತಿದೆ!

ಇದೆಲ್ಲದರಿಂದಾಗಿ ಈಗ ಗಾಂಧಿನಗರದಲ್ಲಿ ಒಂದು ಕುತೂಹಲಕರ ಚರ್ಚೆ ನಡೆಯುತ್ತಿದೆ. ಅದೇನೆಂದರೆ ಒಂದೆಡೆ ಈಗ ಚಿತ್ರಮಂದಿರಗಳಲ್ಲಿ ಚೆನ್ನಾಗಿ ಕಲೆಕ್ಷನ್ ಕಾಣುತ್ತಿರುವ 'ಅದ್ದೂರಿ' ಮತ್ತು 'ದಂಡುಪಾಳ್ಯ' ಸಿನಿಮಾಗಳಿಗೆ 'ರೋಮಿಯೋ' ಏಟು ಕೊಡಲಿದೆಯೇ, ಹಾಗೆಯೇ ಕನ್ನಡದ 'ರೋಮಿಯೋ' ಚಿತ್ರಕ್ಕೆ ತೆಲುಗು 'ಈಗ' ಸೈಡ್ ಹೊಡೆಯಲಿದೆಯೇ ಎಂದು.

'ರೋಮಿಯೋ' ಚಿತ್ರ ಸುಮಾರು 80 ಕೇಂದ್ರಗಳಲ್ಲಿ ಬಿಡುಗಡೆಯಾದರೆ ಸುದೀಪ್ ವಿಲನ್ ಆಗಿ ಅಭಿನಯಿಸಿರುವ, ರಾಜಮೌಳಿ ನಿರ್ದೇಶಿಸಿರುವ 'ಈಗ' ಚಿತ್ರ 228ಕ್ಕೂ ಹೆಚ್ಚು ಚಿತ್ರಕೇಂದ್ರಗಳಲ್ಲಿ ತೆರೆಕಾಣುತ್ತಿದೆ. ಅಂದರೆ, 'ರೋಮಿಯೋ' ಚಿತ್ರಕ್ಕೆ ತೆಲುಗಿನ ಚಿತ್ರ 'ಖಳನಾಯಕ'ನಾಗಿ ಕಾಣಿಸುತ್ತಿದೆ. ಈ ತೆಲುಗು ಚಿತ್ರವನ್ನು ಇಷ್ಟೊಂದು ಥಿಯೇಟರ್‌ಗಳಲ್ಲಿ ಬಿಡುಗಡೆ ಮಾಡುವುದನ್ನು ವಿರೋಧಿಸಲು ಯಾರೂ ಮುಂದೆ ಬರುತ್ತಿಲ್ಲ, ಅದಕ್ಕೆ ಎರಡು ... ಒಂದು ಸುಪ್ರೀಂಕೋರ್ಟ್ ತೀರ್ಪು, ಮತ್ತೊಂದ... ಚಿತ್ರದಲ್ಲಿ ಕನ್ನಡದ ಸುದೀಪ್ ನಟಿಸಿರುವುದು.

ಅಂತೂಇಂತೂ ಸೋಲಿನ ಸರಪಳಿ... ಹೊರಬರಲು ಕಾಯುತ್ತಿರುವ ಗಣೇಶ್‌ಗೆ ಈ... ಅಗ್ನಿಪರೀಕ್ಷೆ ಕಾದಿದೆ.







ಒಂದು ಮ್ಯಾಜಿಕ್!

ಕನ್ನಡ ಚಿತ್ರರಂಗದಲ್ಲಿ ಒಂದು ಸಣ್ಣ ಮ್ಯಾಜಿಕ್ ನಡೆದುಹೋಗಿದೆ.

ಅದೇನೆಂದರೆ, ಸಣ್ಣ ಬಜೆಟ್‌ನ, ಅನಾಮಿಕ ನಟರಿರುವ ಎರಡು ಸಣ್ಣ ಚಿತ್ರಗಳು ಬಾಕ್ಸ್ ಆಫೀಸ್‌ನಲ್ಲಿ ಭರ್ಜರಿಯಾಗಿ ಜಯಭೇರಿ ಬಾರಿಸಿವೆ. ಮೊದಲನೆಯದು ದ್ರುವ ಸರ್ಜ ನಟಿಸಿರುವ 'ಅದ್ದೂರಿ' ಚಿತ್ರವಾದರೆ, ಮತ್ತೊಂದು ಮುಂಬೈನ ಅನಾಮಿಕ ಮಕರಂದ ದೇಶಪಾಂಡೆ ನಟಿಸಿರುವ 'ದಂಡುಪಾಳ್ಯ' ಚಿತ್ರ.

ನಿಮಗೆ ಗೊತ್ತಿರುವ ಹಾಗೆ 'ಅದ್ದೂರಿ' ಚಿತ್ರ ಒಂದು ಲವ್ ಸ್ಟೋರಿ ಆದರೆ, 'ದಂಡುಪಾಳ್ಯ' ಬೆಂಗಳೂರು ನಗರಿಗರನ್ನು ಬೆಚ್ಚಿಬೀಳಿಸಿದ್ದ ದಂಡುಪಾಳ್ಯ ಗ್ಯಾಂಗ್‌ನ ಕುಕೃತ್ಯವನ್ನು ಹೊಂದಿರುವ ಚಿತ್ರವಾಗಿದೆ. ಇವೆರಡು ಚಿತ್ರಗಳ ವಿಶೇಷತೆಯೆಂದರೆ ಎರಡೂ ಚಿತ್ರಗಳಲ್ಲೂ ಹೇಳಿಕೊಳ್ಳುವಂತಹ ದೊಡ್ಡ ನಾಯಕ ನಟ ಇಲ್ಲದಿರುವುದು. 'ಅದ್ದೂರಿ' ಚಿತ್ರದ ನಾಯಕ ದ್ರುವ ಸರ್ಜ ಕ್ಯಾಮರಾ ಎದುರಿಸಿದ್ದು ಇದೇ ಮೊದಲ ಬಾರಿ. ಆ ಚಿತ್ರದಲ್ಲಿ ನಾಯಕಿ ಆಗಿರುವ ರಾಧಿಕಾ ಪಂಡಿತ್ ಈಗ ಚಾಲ್ತಿಯಲ್ಲಿರುವ ನಟಿ. ಈ ಚಿತ್ರ ಬಿಡುಗಡೆಯ ಮೊದಲು ಇದು ಅದ್ಭುತ ಯಶಸ್ಸು ಕಾಣುತ್ತದೆ ಎಂದು ಯಾರೂ ಊಹಿಸಿರಲಿಲ್ಲ, ಈ ಚಿತ್ರದ ನಿರ್ದೇಶಕ ಅರ್ಜುನ್ ಪಾಲಿಗೆ ಇದು ಎರಡನೇ ಚಿತ್ರವಾಗಿದ್ದರಿಂದ ಆತನ ಮೇಲೆಯೂ ಗಾಂಧಿನಗರದ ಜನರಿಗೆ ಅಷ್ಟೊಂದು ನಂಬಿಕೆ ಇರಲಿಲ್ಲ, ಆದರೆ ಚಿತ್ರ ಬಿಡುಗಡೆಯಾದ ನಂತರ ನಾಯಕ ದ್ರುವ ಸರ್ಜನಿಗೆ ಎಲ್ಲಿಲ್ಲದ ಬೇಡಿಕೆ ಬಂದಿದೆ. ಅಷ್ಟೇ ಅಲ್ಲ, ಈ ಚಿತ್ರದ ನಿರ್ಮಾಪಕ ಕೋಟಿಗಟ್ಟಲೆ ಹಣವನ್ನು ಲಾಭ ಮಾಡುವುದಂತೂ ಗ್ಯಾರಂಟಿಯಾಗಿದೆ.

ಆದರೆ 'ದಂಡುಪಾಳ್ಯ' ಚಿತ್ರದಲ್ಲಿ ರಘು ಮುಖರ್ಜಿ ಮತ್ತು ನಿಷಾ ಕೊಟಾರಿ ನಟಿಸಿದ್ದರೂ ಅವರಿಬ್ಬರದ್ದು ಒಂದು ರೀತಿಯಲ್ಲಿ ಅತಿಥಿ ಪಾತ್ರವಾದ ಕಾರಣ ಅವರ ಅಭಿಮಾನಿಗಳು ಈ ಚಿತ್ರದಿಂದ ಹೆಚ್ಚೇನೂ ನಿರೀಕ್ಷಿಸಿರಲಿಲ್ಲ, ಇನ್ನು ಚಿತ್ರದ ನಾಯಕಿ ಪೂಜಾ ಗಾಂಧಿ ಈಗಾಗಲೇ ಗಾಂಧಿನಗರದ ನಿರ್ಮಾಪಕರ ವಕ್ರದೃಷ್ಟಿಗೆ ಬಿದ್ದಿರುವುದರಿಂದ ಮತ್ತು ಆಕೆಗೆ ಈಗ ಅಷ್ಟು ಬೇಡಿಕೆ ಇಲ್ಲದಿರುವುದರಿಂದ ಆಕೆಯಿಂದಲೂ ಯಾರೂ ಹೆಚ್ಚಿನದನ್ನು ನಿರೀಕ್ಷಿಸಿರಲಿಲ್ಲ, ಆದರೂ 'ದಂಡುಪಾಳ್ಯ' ಬಿಡುಗಡೆಯಾದ ದಿನದಿಂದಲೇ ಭರ್ಜರಿಯಾದ ಪ್ರದರ್ಶನ ಕಾಣುತ್ತಿದೆ. ಕರ್ನಾಟಕದಾದ್ಯಂತ ಶ್ರೀನಿವಾಸ್ ರಾಜು ನಿರ್ದೇಶನದ ಈ ಚಿತ್ರಕ್ಕೆ ಒಬ್ಬ ದೊಡ್ಡ ನಟನ ಚಿತ್ರಕ್ಕೆ ಸಿಗಬೇಕಾದ ಓಪನಿಂಗ್ ಸಿಕ್ಕಿರುವುದನ್ನು ನೋಡಿ ಗಾಂಧಿನಗರದ ಹಂಚಿಕೆದಾರರೆಲ್ಲ ಬೆಚ್ಚಿಬಿದ್ದಿದ್ದಾರೆ. ಒಂದು ಅಂದಾಜಿನ ಪ್ರಕಾರ ಈ ಚಿತ್ರ ಕನಿಷ್ಠವೆಂದರೂ 10 ಕೋಟಿ ರೂ. ಲಾಭ ಮಾಡಲಿದೆ.



ಧ್ರುವ ಸರ್ಜಾ


'ಅದ್ದೂರಿ'ಯ ನಾಯಕ ದ್ರುವನ ನೃತ್ಯ ಫೈಟಿಂಗ್ ಮತ್ತು ಮುಗ್ಧನಾಗಿ ಹೇಳುವ ಡೈಲಾಗ್ ಡೆಲಿವರಿಯೇ ಆ ಚಿತ್ರದ ಯಶಸ್ಸಿಗೆ ಮೂಲ ಕಾರಣವಾದರೆ ದಂಡುಪಾಳ್ಯ ಗ್ಯಾಂಗ್‌ನ ಬಗೆಗೆ ಜನತೆಗೆ ಇದ್ದ ಕುತೂಹಲವೇ ಆ ಹೆಸರಿನ ಚಿತ್ರದ ಗೆಲುವಿಗೆ ಕಾರಣವಾಗಿದೆ.

ಅಂದಹಾಗೆ, 'ದಂಡುಪಾಳ್ಯ' ಚಿತ್ರದಲ್ಲಿ ಪೂಜಾ ಗಾಂಧಿ ಅರೆಬೆತ್ತಲೆಯಾಗಿ ಕಾಣಿಸಿಕೊಂಡಿದ್ದಾಳೆ ಎಂದೇ ಸುದ್ದಿಯಾಗಿತ್ತು, ಹಾಗೆ ನೋಡಿದರೆ ಈ ಸಿನಿಮಾದಲ್ಲಿ ಆಕೆ ಬೆನ್ನು ತೋರಿಸುವುದು ಕೇವಲ 10 ಸೆಕೆಂಡುಗಳು ಮಾತ್ರ. ಹಾಗೆ ನೋಡಿದರೆ, ಮೊನ್ನೆ ಬರಗೂರು ರಾಮಚಂದ್ರಪ್ಪ ನಿರ್ದೇಶನದ 'ಭಾಗೀರಥಿ' ಎಂಬ ಕಲಾತ್ಮಕ ಚಿತ್ರದ ಪ್ರೀಮಿಯರ್ ಷೋಗೆ ಅದರ ನಾಯಕಿ ಭಾವನಾ ಇಡೀ ಬೆನ್ನು ಕಾಣಿಸುವಂತೆ ಸೀರೆಯುಟ್ಟುಕೊಂಡು ಬಂದಿದ್ದು ಪೂಜಾ ಗಾಂಧಿಯ ಪಾತ್ರಕ್ಕಿಂತಲೂ ಬೋಲ್ಡ್ ಆಗಿತ್ತು. ಅಂದಮಾತ್ರಕ್ಕೆ ಈ ಚಿತ್ರದಲ್ಲಿ ಸೆಕ್ಸ್ ಮತ್ತು ಹಿಂಸೆ ಇಲ್ಲವೆಂದಲ್ಲ, ಪ್ರತಿ ಫ್ರೇಮಿನಲ್ಲಿ ಅಂತಹ ದೃಶ್ಯಗಳು ತುಂಬಿದ್ದು ದಂಡುಪಾಳ್ಯ ಗ್ಯಾಂಗಿನ ಕಥೆಯಾ ಇದು ಎಂಬುದನ್ನು ಹೊರತುಪಡಿಸಿದರೆ ಈ ಚಿತ್ರವನ್ನು ಸುಲಭವಾಗಿ ಒಂದು ಸೆಕ್ಸ್ ಚಿತ್ರ ಎಂದು ಕರೆಯಬಹುದು.

ಅದೇನೇ ಇರಲಿ, ಈ ಮಾಯಾಲೋಕದಲ್ಲಿ ಗೆಲುವು ಎಂಬುದೇ ಎಲ್ಲಕ್ಕಿಂತ ಮುಖ್ಯ ಅದನ್ನು ಈ ಎರಡು ಸಣ್ಣ ಚಿತ್ರಗಳು ಸಾಧಿಸಿರುವುದೇ ಒಂದು ಮ್ಯಾಜಿಕ್!

ಯೋಗರಾ... ಭಟ್ಟ... ಡ್ರಾಮ...

ಯೋಗರಾಜ್ ಭಟ್ಟರ 'ಡ್ರಾಮಾ' ಸಿ... ಚಿತ್ರೀಕರಣ ಕುಂದಾಪುರದ ಬೀಚ್ ... ಭರ್ಜರಿಯಾಗಿ ನಡೆಯುತ್ತಿದೆ. ಯಶ್ ... ರಾಧಿಕಾ ಪಂಡಿತ್ ಜೋಡಿ... ಕಾಣಿಸಿಕೊಳ್ಳುತ್ತಿರುವ ಈ ಚಿತ್ರದ... ನಿರ್ಮಾಪಕ ಜಯಣ್ಣ ಮತ್ತು ನಿ... ಯೋಗ್‌ರಾಜ್ ಭಟ್ಟರಿಗೆ ಅಪಾರವಾದ ... ಇದೆಯಂತೆ. ಭಟ್ಟರೇ ಹೇಳುವಂತೆ ಇದೇ ... ಬಾರಿಗೆ ಅವರು ಒಂದು ಕಥೆಯನ್ನು ಗಟ್ಟಿ... ಹಿಡಿದುಕೊಂಡಿದ್ದಾರಂತೆ. ಅಂದರೆ, ಈಗಾಗಲೇ ಹಲವಾರು ಸಿನಿಮ... ನಿರ್ದೇಶಿಸಿರುವ ಭಟ್ಟರಿಗೆ ಒಂದು ಸಿನಿಮಾ ಯಶಸ್ಸು ಕಾಣಬೇಕಾದರೆ ... ಕಥೆ ತುಂಬಾ ಮುಖ್ಯ ಎಂಬ ಅರಿವು ಕೊನೆಗೂ ಮೂಡಿದೆಯೆಂದಾಯಿತು!



ಯೋಗ್‌ರಾಜ್ ಭಟ್ಟರನ್ನು ಚಿತ್ರದ ನಾಯಕಿ ರಾಧಿಕಾ ಪಂಡಿತ್ 'ರೈನಿಂಗ್ ಸ್ಟಾರ್' ಎಂದು ಅಭಿಮಾನದಿಂದ ಕರೆಯುತ್ತಿದ್ದಾಳಂತೆ. ಅದಕ್ಕೆ ಮುಖ್ಯ ಕಾರಣ 'ಡ್ರಾಮ' ಚಿತ್ರದ ಸುಮಾರು ಶೇ.20 ರಷ್ಟು ಭಾಗ ಮಳೆಯಲ್ಲಿಯೇ ನಡೆಯುತ್ತದಂತೆ. ಮೊದಲೇ ಮಳೆಗೂ ಭಟ್ಟರಿಗೂ ಎಲ್ಲಿಲ್ಲದ ಸಂಬಂಧ. ಅವರಿಗೆ ತಾರಾಮೌಲ್ಯವನ್ನು ತಂದುಕೊಟ್ಟ 'ಮುಂಗಾರು ಮಳೆ' ಚಿತ್ರದ ಬಹುತೇಕ ಭಾಗ ಮಳೆಯಲ್ಲೇ ಚಿತ್ರೀಕರಣಗೊಂಡಿತ್ತು, ಈಗ ಭಟ್ಟರು ಮತ್ತೆ ಮಳೆಗೆ ಶರಣಾಗಿರುವುದನ್ನು ನೋ... 'ಡ್ರಾಮ'ದಿಂದ ಅವತ್ತು ಮತ್ತೆ ಕಳೆದುಹೋಗಿರುವ ತನ್ನ ಚಾರಿಷ್ಮವನ್ನು ... ಪಡೆಯಲು ಪ್ರಯತ್ನಿಸುತ್ತಿರುವಂತಿದೆ.

ಅದೇನೇ ಇರಲಿ, ಇಡೀ ಕರ್ನಾಟಕ ರಾಜ್ಯಾದ್ಯಂತ ಜನ ಮಳೆಗಾ... ಹಾತೊರೆಯುತ್ತಿರುವಾಗ ಭಟ್ಟರು ಮತ್ತು ಅವರ ಚಿತ್ರತಂಡ ಸಂಪೂರ್ಣ... ಕೃತಕ ಮಳೆಯಲ್ಲಿ ತೊಯ್ಯುತ್ತಿದೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T Street, Ba...